Editor: NITYANANDASWAMI Publisher: U. BASAVARAJA
RNI No. KARKAN/2006/17926

ಜನಶಕ್ತಿ ಕನ್ನಡ ವಾರ ಪತ್ರಿಕೆ

ದುಡಿಯುವ ಜನರ ಪ್ರಾಣಮಿತ್ರ

JANASHAKTHI KANNADA VARA PATRIKE
ಸಂಪುಟ 16 | ಸಂಚಿಕೆ 28 | ಜುಲೈ 4-10, 2022 | ಪುಟ 16 | ರೂ.10/-
Volume: 16 Issue: 28 JULY 4-10, 2022 Pages: 16 Price: 10/-
https://janashakthi.wordpress.com e-mail : js_weekly@yahoo.com

ಸ್ವಾತಂತ್ರ್ಯದ 75ನೇ ವರ್ಷ:



ಸ್ವಾತಂತ್ರ್ಯ ಹೋರಾಟ ಮತ್ತು ಕೋಮುವಾದಿ -ವಿಚ್ಛಿದ್ರಕಾರಿ ಶಕ್ತಿಗಳು

ಉದಯಪುರ ಹತ್ಯೆಯ



ಪಾತಕಿಗಳಿಗೆ ಕಠಿಣ ಶಿಕ್ಷೆಯಾಗಲಿ

ಮಂಡ್ಯ: ಕಗ್ಗತ್ತಲು ಪಸರಿಸುವ ಕೋಮುವಾದ





ಮೀಸಲಾತಿಯನ್ನು ಅಪ್ರಸ್ತುತ ಮಾಡಲಾಗುತ್ತಿದೆಯೇ?



ರೂಪಾಯಿ ಮೌಲ್ಯ ಇಳಿಯುತ್ತಿರುವುದೇಕೆ?



ಸೇವಾ ಖಾಯಂಗೆ ಪೌರ ಕಾರ್ಮಿಕರ ಮುಷ್ಕರ

ತೀಸ್ತಾ ಬಂಧನ: ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ಮಾಡಿದ ಅಪಚಾರ ಎಲ್ಲೆಡೆ ಖಂಡನೆ-ಪ್ರತಿಭಟನೆ

2002ರ ಗುಜರಾತ್ ಹಿಂಸಾಚಾರದ ಸಂತ್ರಸ್ತರಿಗೆ ನ್ಯಾಯಕ್ಕಾಗಿ ಅವಿರತ ಹೋರಾಟ ನಡೆಸಿರುವ ತೀಸ್ತಾ ಸೆಟಲ್ವಾಡ್ ಅವರ ಬಂಧನವನ್ನು ಸಿಪಿಐ(ಎಂ) ಪಾಲಿಟ್ ಬ್ಯೂರೋ ಖಂಡಿಸಿದೆ. ಆಕೆಯ ಬಂಧನವು ಯಾವ ಆಳ್ವಿಕೆಯ ಅಡಿಯಲ್ಲಿ ಕೋಮು ಹಿಂಸಾಚಾರ ನಡೆಯುತ್ತದೋ ಆ ಪ್ರಭುತ್ವ ಅಥವಾ ಸರ್ಕಾರದ ಪಾತ್ರವನ್ನು ಪ್ರಶ್ನಿಸುವ ಧೈರ್ಯ ಮಾಡಬಾರದು ಎಂದು ಎಲ್ಲಾ ಜನವಾದೀ ಮನೋಭಾವದ ನಾಗರಿಕರಿಗೆ ಕೊಟ್ಟಿರುವ ಕೇಡಿನ ಬೆದರಿಕೆಯಾಗಿದೆ, ಇದು ನಾಗರಿಕರ ಪ್ರಜಾಸತ್ತಾತ್ಮಕ ಹಕ್ಕುಗಳಿಗೆ ಮಾಡಿರುವ ಅಪಚಾರವಾಗಿದೆ ಎಂದು ಅದು ಹೇಳಿದೆ.

ಆದಾಗ್ಯೂ, ಅವರನ್ನು ಬಂಧಿಸುವ ಗುಜರಾತ್ ಆಡಳಿತದ ಕ್ರಮವು ಸಾಧ್ಯವಾಗಿರುವುದು ಸುಪ್ರೀಂ ಕೋರ್ಟ್‌ನ ತ್ರಿಸದಸ್ಯ ಪೀಠದ ಪ್ರಶ್ನಾರ್ಹ ತೀರ್ಪಿನಿಂದ, ಅದು ದೂರುದಾರರನ್ನು ಆರೋಪಿಯನ್ನಾಗಿ ಮಾಡಿದೆ ಮತ್ತು "ಇಂತಹ ಪ್ರಕ್ರಿಯೆಯ ದುರುಪಯೋಗದಲ್ಲಿ ಭಾಗಿಯಾಗಿರುವ ಎಲ್ಲರೂ ಕಟಕಟೆಯಲ್ಲಿ ನಿಲ್ಲಬೇಕಾಗಿದೆ ಮತ್ತು ಕಾನೂನಿನ ಪ್ರಕಾರ ಅವರ ವಿರುದ್ಧ ಕ್ರಮ ಜರುಗಬೇಕಾಗಿದೆ" ಎಂದು ಆದೇಶಿಸುವ ಪ್ರಶ್ನಾರ್ಹ ತೀರ್ಪು ನೀಡಿದೆ.

ಇದರರ್ಥ ನ್ಯಾಯಾಲಯವು ಸ್ಥಾಪಿಸಿದ ಯಾವುದೇ ಎಸ್‌ಐಟಿ (ವಿಶೇಷ ತನಿಖಾ ತಂಡ) ಯನ್ನು ನ್ಯಾಯಾಂಗ ಮೇಲ್ಮನವಿಗಳ ವ್ಯಾಪ್ತಿಯಿಂದ ಹೊರಗಿರುವಂತದ್ದು ಎಂದು ಪರಿಗಣಿಸಬೇಕು ಮತ್ತು ಪ್ರಸ್ತುತ ಪ್ರಕರಣದಲ್ಲಿ ಝಾಕಿಯಾ ಜಾಫ್ರಿ ಮತ್ತು ತೀಸ್ತಾ ಸೆಟಲ್ವಾಡ್ ಮಾಡಿದಂತೆ, ಯಾರಾದರೂ ಅದರ ವಿರುದ್ಧ ಮೇಲ್ಮನವಿ ಸಲ್ಲಿಸಿದರೆ, ಆಗ ಅವರ ವಿರುದ್ಧ "ಪ್ರಕ್ರಿಯೆಯ ದುರುಪಯೋಗ"ದ ಆರೋಪವನ್ನು ಹೊರಿಸಲಾಗುತ್ತದೆ. 16 ವರ್ಷಗಳ ಕಾಲ ನ್ಯಾಯಕ್ಕಾಗಿ ನಡೆದ ಒಂದು ಹೋರಾಟವನ್ನು "ದುರುದ್ದೇಶದಿಂದ ಮಡಕೆ ಬೇಯುತ್ತಲೇ ಇರು"ವಂತೆ ಮಾಡುವ ಕೆಲಸ ಎಂದು ಅಸಾಮಾನ್ಯ ಅವಹೇಳನಕಾರಿ ಪದಗಳಲ್ಲಿ ವರ್ಣಿಸಲಾಗಿದೆ,



ಈ ಎಸ್‌ಐಟಿ ಪ್ರಕರಣದಲ್ಲಿ ನ್ಯಾಯಾಲಯವು ನೇಮಿಸಿದ ನ್ಯಾಯ ಸಲಹೆಗಾರ(ಅಮಿಕಸ್ ಕ್ಯೂರಿ) ಕೂಡ, ಎಸ್‌ಐಟಿಯ ಹಲವು ಶಿಫಾರಸುಗಳನ್ನು ಒಪ್ಪುತ್ತಲೇ, ಸಮುದಾಯಗಳ ನಡುವೆ ದ್ವೇಷವನ್ನು ಉಂಟುಮಾಡುವ ಕುರಿತ ಐಪಿಸಿಯ ಕೆಲವು ಸೆಕ್ಷನ್‌ಗಳನ್ನು ಪರಿಗಣಿಸಬೇಕು ಎಂದು ದಾಖಲಿಸಿದೆ ಎಂಬುದನ್ನು ಗಮನಿಸಬೇಕು. ಈ ಹಿಂದೆ, ಏಪ್ರಿಲ್ 2004 ರಲ್ಲಿ, ಸ್ವತಃ ಸುಪ್ರೀಂ ಕೋರ್ಟ್ ಆಗಿನ ಸರ್ಕಾರದ ನಾಯಕರನ್ನು "ಆಧುನಿಕ ಕಾಲದ ನೀರೋಗಳು" ಎಂದು ಬಣ್ಣಿಸಿತ್ತು. ಪ್ರಸ್ತುತ ತೀರ್ಪು ಈ ಯಾವುದೇ ಸಮಸ್ಯೆಗಳನ್ನು ಪರಿಶೀಲಿಸುವುದಿಲ್ಲ. ತೀಸ್ತಾ ಅವರಂತೆ ನ್ಯಾಯಾಂಗ ವ್ಯವಸ್ಥೆಯಲ್ಲಿ ನಂಬಿಕೆ ಇಟ್ಟವರಿಗೆ ಶಿಕ್ಷೆ ನೀಡುತ್ತದೆ. ಇದು ಸರಿಪಡಿಕೆ ಅರ್ಜಿ (ಕ್ಯುರೇಟಿವ್ ಪಿಟಿಷನ್)ಗೆ ಸೂಕ್ತವಾದ ಒಂದು ಪ್ರಕರಣವಾಗಿದೆ ಎಂದಿರುವ ಸಿಪಿಐ(ಎಂ) ಪೊಲಿಟ್ ಬ್ಯೂರೋ ಕೇಸುಗಳನ್ನು ಹಿಂಪಡೆಯಬೇಕು ಮತ್ತು ತೀಸ್ತಾ ಸೆಟಲ್ವಾಡ್, ಶ್ರೀಕುಮಾರ್ ಮತ್ತು ಇತರರನ್ನು ಬಿಡುಗಡೆ ಮಾಡಬೇಕು ಎಂದು ಒತ್ತಾಯಿಸಿದೆ.

ತೀಸ್ತಾ ವಿರುದ್ಧ ಸುಳ್ಳು ಆರೋಪಗಳನ್ನು, ಕಿರುಕುಳ ನಿಲ್ಲಿಸಿ-ಎಐಡಿಡಬ್ಲ್ಯುಎ

ಗುಜರಾತ್ ಹತ್ಯಾಕಾಂಡದಲ್ಲಿ ಅಮಾನುಷವಾಗಿ ಹತ್ಯೆಯಾದ ಕಾಂಗ್ರೆಸ್ ಸಂಸತ್ ಸದಸ್ಯ ಎಹ್ಸಾನ್ ಜಾಫ್ರಿಯವರ ಹೆಂಡತಿ ಝಾಕಿಯ ಜಾಫ್ರಿ ಅವರ ಮನವಿಯನ್ನು ಸುಪ್ರಿಂ ಕೋರ್ಟ್ ತಿರಸ್ಕರಿಸುತ್ತಿರುವಂತೆಯೇ, ತಡಮಾಡದೆ, ಗುಜರಾತ್ ಸರಕಾರ, ಜಾಕಿಯಾ ಅವರ ಜೊತೆಗೆ ದೃಢವಾಗಿ ನಿಂತಿರುವ ತೀಸ್ತಾ ರವರನ್ನು ಬಂಧಿಸಿದೆ ಎಂದಿರುವ ಅಖಿಲ ಭಾರತ ಜನವಾದಿ ಮಹಿಳಾ ಸಂಘ(ಎಐಡಿಡಬ್ಲ್ಯುಎ) ಕೂಡ ಇದನ್ನು ಬಲವಾಗಿ ಖಂಡಿಸಿದೆ.

ತೀಸ್ತಾ ಇವರ ಇಂತಹ ಧೀರ ಕೃತ್ಯಗಳಿಗಾಗಿ ಅವರನ್ನು ಬಲಿಹಾಕಲಾಗುತ್ತಿದೆ ಎಂದಿರುವ ಎಐಡಿಡಬ್ಲ್ಯುಎ ತಕ್ಷಣವೇ ಅವರ ವಿರುದ್ಧ ಹಾಕಿರುವ ಸುಳ್ಳು ಆರೋಪಗಳನ್ನು ಹಿಂಗೆದುಕೊಳ್ಳಬೇಕು ಮತ್ತು ಕಿರುಕುಳ ಕೊಡುವುದನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದೆ.

ತೀಸ್ತಾ ಅವರನ್ನು ಬಂಧಿಸಿರುವುದು ಕೋಮುವಾದದ ವಿರುದ್ಧ, ನ್ಯಾಯ ಮತ್ತು ಮಾನವ ಹಕ್ಕುಗಳಿಗೆ ಅವರ ದಶಕಗಳ ಹೋರಾಟಕ್ಕಾಗಿ ಎಂದು 'ಸಹಮತ್' ಹೇಳಿದೆ. "ಆಕೆಯ ಬಾಯಿ ಮುಚ್ಚಿಸಲು ಮತ್ತು ಈ ಹಕ್ಕುಗಳಿಗೆ ಹೋರಾಡುತ್ತಿರುವ ಇತರರಲ್ಲಿ ಭೀತಿ ಹುಟ್ಟಿಸಲು ಮತ್ತು ಅವರ ಬಾಯಿಗಳನ್ನೂ ಮುಚ್ಚಿಸಲು ಈ ಬಂಧನ ನಡೆಸಲಾಗಿದೆ" ಎಂದು ಅದು ಹೇಳಿದೆ.

ಈ ಬಂಧನದ ಕೆಲವೇ ಗಂಟೆಗಳ ಮೊದಲು ಕೇಂದ್ರ ಗೃಹಮಂತ್ರಿ ಅಮಿತ್ ಷಾ, ತೀಸ್ತಾ ಅವರ ಸಂಸ್ಥೆ ಗುಜರಾತ್ ಗಲಭೆಗಳನ್ನು ಕುರಿತು ಪೋಲೀಸರಿಗೆ ಆಧಾರಹೀನ ಮಾಹಿತಿಗಳನ್ನು ಕೊಟ್ಟಿದೆ ಎಂದು ಸಂದರ್ಶನವೊಂದರಲ್ಲಿ ಹೇಳಿದ್ದರು. ಗುಜರಾತ್ ಎಟಿಎಸ್ ಅವರ ವಿರುದ್ಧ ಫೋರ್ಜರಿಯ ಕೇಸು ದಾಖಲಿಸಿದೆ ಎಂದು ವರದಿಯಾಗಿದೆ.

ತೀಸ್ತಾ ವ್ಯಕ್ತಿತ್ವಕ್ಕೆ ಮಸಿ ಬಳೆಯುವ ಮತ್ತೊಂದು ಪ್ರಯತ್ನ-ಲೆಫ್ಟ್ ವರ್ಡ್

ತೀಸ್ತಾ ಅವರ ಈ ಹೋರಾಟಗಳ ದಾಖಲೆಗಳನ್ನು ನೀಡುವ ಕೃತಿ "ಫೂಟ್ ಸೋಲ್ಜರ್ ಆಫ್ ಕನ್ಸಿಟ್ಯೂಷನ್' ಕನ್ಸಿಟ್ಯೂಷನ್' (ಕನ್ನಡದಲ್ಲಿ 'ಸಂವಿಧಾನದ ಕಾಲಾಳು' ಎಂದು ಪ್ರಕಟವಾಗಿದೆ)ನ್ನು ಪ್ರಕಟಿಸಿರುವ ಲೆಫ್ಟ್ ವರ್ಡ್' ಪ್ರಕಟಣ ಸಂಸ್ಥೆ ತೀಸ್ತಾ ಅವರಿಗೆ ಬೆಂಬಲ ನೀಡಿದೆ. ಗುಜರಾತ್ ಹಿಂಸಾಚಾರದಲ್ಲಿ ಪ್ರಾಣ ಕಳಕೊಂಡವರಿಗೆ ನ್ಯಾಯಕ್ಕಾಗಿ ತೀಸ್ತಾ ಮತ್ತು ಅವರ ಸಹಯೋಗಿಗಳು ನಡೆಸುತ್ತ ಬಂದಿರುವ ಹೋರಾಟದ ಭಾಗವಾಗಿ, ಎಸ್‌ಐಟಿ ಯ ವರದಿಗಳಲ್ಲಿ ಇರುವ ಹಲವು ದೋಷಗಳನ್ನು ತೋರಿಸಿಕೊಡುತ್ತ, ಇದರಿಂದಾಗಿ ನ್ಯಾಯ ಸಿಗಲಾರದಾಗಿದೆ ಎಂದು ಹೇಳುತ್ತ ಬಂದಿದ್ದಾರೆ ಇದಕ್ಕಾಗಿ ಅವರ ವ್ಯಕ್ತಿತ್ವಕ್ಕೆ ಮಸಿ ಬಳೆಯಲು ಹಲವು ಸುಳ್ಳುಗಳನ್ನು ಪಸರಿಸಲಾಗಿದೆ. ಆದರೆ ಅವೆಲ್ಲವೂ ಸುಳ್ಳು ಎಂದು ಸಾಬೀತಾಗಿದೆ ಎಂದು 'ಲೆಫ್ಟ್ ವರ್ಡ್' ತೀಸ್ತಾ ಬಂಧನದ ನಂತರ ನೀಡಿರುವ ತನ್ನ ಹೇಳಿಕೆಯಲ್ಲಿ ನೆನಪಿಸಿದೆ.

ಸುಪ್ರಿಂ ಕೋರ್ಟಿನ ತೀರ್ಪಿನ ಬಗ್ಗೆ ನಿರಾಸೆ ವ್ಯಕ್ತಪಡಿಸಿತ್ರ, ಅದು ಗುಜರಾತ್ ಹಿಂಸಾಚಾರದ ಬಗ್ಗೆ ಎಸ್‌ಐಟಿ ಕಥನವನ್ನು ಎತ್ತಿ ಹಿಡಿದಿರುವುದು ಮಾತ್ರವಲ್ಲದೆ, ಯಾವುದೇ ವಾಸ್ತವ ಸಂಗತಿಯ ಆಧಾರವಿಲ್ಲದೆ ತೀಸ್ತಾ ಸೆಟಲ್ವಾಡ್ ರವರ ಆಶಯಗಳನ್ನೂ ಪ್ರಶ್ನಿಸಿದೆ, ಆಮೂಲಕ ಝಾಕಿಯಾ ಜಾಫ್ರಿಯವರ ಧೈರ್ಯವನ್ನೂ ಪ್ರಶ್ನಿಸಿದೆ ಎಂದು ಲೆಫ್ಟ್ ವರ್ಡ್' ಖೇದ ವ್ಯಕ್ತಪಡಿಸಿದೆ.

ತೀಸ್ತಾ ಅವರು ತಮ್ಮ ತಾತ ಹಾಗೂ ಸ್ವತಂತ್ರ ಭಾರತದ ಮೊದಲ ಅಟಾರ್ನಿ ಜನರಲ್ ಎಂಸಿ.ಸೆಟಲ್ವಾಡ್ ಮತ್ತು ಬ್ರಿಟಿಷ್ ಸರಕಾರ ಜಲಿಯಾನ್ ವಾಲಾಬಾಗ್ ಹತ್ಯಾಕಾಂಡದ ತನಿಖೆಗೆ ನೇಮಿಸಿದ್ದ ಸಮಿತಿಯಲ್ಲಿ ಏಕೈಕ ಭಾರತೀಯ ಸದಸ್ಯರಾಗಿದ್ದ ಮುತ್ತಾತ ಸರ್ ಚಿಮನ್‌ಲಾಲ್ ಹರಿಲಾಲ್ ಸೆಟಲ್ವಾಡ್ ರವರ ಪರಂಪರೆಯನ್ನು ಮುಂದುವರೆಸಿ ಸಂವಿಧಾನಿಕ ಮೌಲ್ಯಗಳನ್ನು ಎತ್ತಿ ಹಿಡಿಯುವ ಸಾರ್ವಜನಿಕ ಸೇವೆಯ ನಿಷ್ಕಳಂಕ ದಾಖಲೆ ಹೊಂದಿರುವವರು.

ಸುಳ್ಳನ್ನು ಸತ್ಯವಾಗಿಸುವ, ಸತ್ಯದ ಹೋರಾಟಗಾರರನ್ನು ಕ್ರಿಮಿನಲ್‌ಗಳಾಗಿಸುವ ನಗ್ನ ಪ್ರಯತ್ನ-2200 ಜನರ ಹೇಳಿಕೆ

"ಭಾರತಕ್ಕೆ ಝಾಕಿಯಾ ಜಾಫ್ರಿಯಂತಹ ಧೈರ್ಯ ಮತ್ತು ಸ್ಥೈರ್ಯ ಹೊಂದಿರುವ ನಾಗರಿಕರು ಮತ್ತು ತೀಸ್ತಾ ಸೆಟಲ್ವಾಡ್ ತೆರನ ಮಾನವ ಹಕ್ಕು ಹೋರಾಟಗಾರರು ಹೆಚ್ಚೆಚ್ಚು ಸಂಖ್ಯೆಯಲ್ಲಿ ಬೇಕಾಗಿದ್ದಾರೆ. ನಾವು ಅವರ ಜತೆಗೆ ನಿಲ್ಲುತ್ತೇವೆ" ಎಂದು ಲೆಫ್ಟ್ ವರ್ಡ್ ಹೇಳಿದೆ.

ಭಾರತದ 21 ರಾಜ್ಯಗಳು ಮತ್ತು ಜಗತ್ತಿನೆಲ್ಲೆಡೆಯಿಂದ ಚಿಂತಕರು, ಲೇಖಕರು, ಕಲಾವಿದರು, ಮಾನವ ಹಕ್ಕು ಹೋರಾಟಗಾರರು ಮತ್ತು ಪ್ರತಿಷ್ಠಿತ ಸಾಮಾಜಿಕ ಕಾರ್ಯಕರ್ತರು ಸೇರಿದಂತೆ ಒಟ್ಟು 2200 ಜನರು ತೀಸಾ ್ತಸೆಟಲ್ವಾಡ್ ಮತ್ತು ಆರ್ ಬಿ ಶ್ರೀಮಕುಮಾರ್ ಅವರ ಬಂಧನವನ್ನು ಖಂಡಿಸಿ ಹೇಳಿಕೆ ನೀಡಿದ್ದಾರೆ, ಅವರನ್ನು ತಕ್ಷಣವೇ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ಇದು ಸುಳ್ಳು ಸತ್ಯವಾಗುವ, ಸತ್ಯದ ಸ್ಥಾಪನೆಗೆ ಹೋರಾಡುತ್ತಿರುವವರ ಮೇಲೆಯೇ ಗುರಿಯಿಡುವ ಒಂದು ವಿಡಂಬನಾಪೂರ್ಣ ಸನ್ನಿವೇಶ ಎಂದು ಹೇಳಿಕೆ ಅಭಿಪ್ರಾಯ ಪಟ್ಟಿದೆ.

ಜೂನ್ 24ರಂದು ಸುಪ್ರಿಂ ಕೋರ್ಟ್ ತೀರ್ಪಿನ ಮರುದಿನವೇ ಗುಜರಾತ್ ಎಟಿಎಸ್ ಸೆಟಲ್ವಾಡ್ ಮನೆಗೆ ನುಗ್ಗಿ ಅವರನ್ನು ಕಸ್ಟಡಿಗೆ ತೆಗೆದುಕೊಂಡಿದೆ. ಎಫ್‌ಐಆರ್‌ನಲ್ಲಿ ಗುಜರಾತಿನ ಮಾಜಿ ಪೋಲೀಸ್ ಅಧಿಕಾರಿಗಳಾದ ಶ್ರೀಮಕುಮಾರ್ ಮತ್ತು ಸಂಜೀವ ಭಟ್ ರವರನ್ನೂ ಉಲ್ಲೇಖಿಸಲಾಗಿದೆ. ಇವರು ಸೇರಿಕೊಂಡು ಸಾಕ್ಷ್ಯವನ್ನು ಸೃಷ್ಟಿಸುವ, ಸಾಕ್ಷಿಗಳಿಂದ ತಮಗೆ ಬೇಕಾದಂತೆ ಹೇಳಿಕೆ ನೀಡಿಸುವ ಮತ್ತು ಕಾನೂನು ಪ್ರಕ್ರಿಯೆಯನ್ನು ದುರುಪಯೋಗ ಪಡಿಸಿಕೊಳ್ಳುವ ಪಿತೂರಿ ಮಾಡಿದ್ದಾರೆ ಎಂದು ಅದರಲ್ಲಿ ಆರೋಪಿಸಲಾಗಿದೆ.

ಗುಜರಾತ್ ಪೊಲೀಸಿನ ಕ್ರಮಗಳು ಪ್ರಭುತ್ವ ಜವಾಬುದಾರವಾಗುವಂತೆ ಕೇಳುವ ಅರ್ಜಿಹಾಕುವ ಸಾಮಾನ್ಯ ಪ್ರಕ್ರಿಯೆಯನ್ನು ಕ್ರಿಮಿನಲ್ ಕೃತ್ಯವೆಂದು ಮಾಡುವ ಉದ್ದೇಶ ಹೊಂದಿದೆ ಎಂದಿರುವ ಈ ಹೇಳಿಕೆ "ಸಂವಿಧಾನಿಕ ಮೌಲ್ಯಗಳನ್ನು ಬೆಂಬಲಿಸುವ, 2002ರ ಸಂತ್ರಸ್ತರಿಗೆ ನ್ಯಾಯ ಪಡೆಯಲು ಶ್ರಮಪಡುತ್ತಿರುವವರ ಬಾಯಿ ಮುಚ್ಚಿಸುವ, ಅವರನ್ನು ಕ್ರಿಮಿನಲ್ ಗಳಾಗಿ ತೋರಿಸುವ ನಗ್ನ ಮತ್ತು ನಾಚಿಕೆಗೆಟ್ಟ ಪ್ರಯತ್ನ" ಎಂದು ಖಂಡಿಸಿದೆ.

'ಜೀವ ಬೆದರಿಕೆ ಇದೆ'

ಜೂನ್ 25ರ ಸಂಜೆ ಗುಜರಾತ್ ಎಟಿಎಸ್‌ನ ತಂಡ ಮುಂಬೈನ ತಮ್ಮ ಮನೆಗೆ ಏಕಾಏಕಿ ನುಗ್ಗಿ ತಮ್ಮ ಮೇಲೆ ಕೈಮಾಡಿದರು, ಅದರಿಂದಾಗಿ ಎಡಗೈ ಮೇಲೆ ಗಾಯವಾಗಿದೆ, ಸಾಂತಾಕ್ರೂಝ್ ಪೊಲೀಸ್ ಸ್ಟೇಷನ್‌ಗೆ ಒಯ್ದು ಬಂಧಿಸಲಾಯಿತು, ಅಲ್ಲಿಂದ ಅಹಮದಾಬಾದ್ ಗೆ ಒಯ್ಯುವ ಮೊದಲು ತನಗೆ ಜೀವ ಭಯವಿದೆ ಎಂದು ಸಾಂತಾಕ್ರೂಝ್ ಪೊಲೀಸ್ ಸ್ಟೇಷನಿನಲ್ಲಿ ದೂರು ಸಲ್ಲಿಸಿದ್ದು, ಅದರಲ್ಲಿ ಅಹಮದಾಬಾದ್ ಎಟಿಎಸ್‌ನ ಪೋಲೀಸ್ ಇನ್ಸ್‌ಪೆಕ್ಟರ್ ಜೆ.ಹೆಚ್. ಪಟೇಲ್ ಹೆಸರು ಉಲ್ಲೇಖಿಸಿರುವುದಾಗಿ ತೀಸ್ತಾ ಸೆಲ್ವ್ವಾಡ್ ಹೇಳಿದ್ದಾರೆ. ತಮ್ಮ ಲಾಯರ್ ಬರುವ ವರೆಗೂ ತಮಗೆ ಎಫ್‌ಐಆರ್ ವಾರಂಟ್ ತೋರಿಸಿರಲಿಲ್ಲ ಎಂದೂ ಅವರು ಹೇಳಿರುವುದಾಗಿ ವರದಿಯಾಗಿದೆ.

ಅಸ್ಸಾಂನಲ್ಲಿಧ್ವಂಸಕಾರೀ ಪ್ರವಾಹ: ಪರಿಹಾರ ಕಾರ್ಯಕ್ಕಿಂತ ಶಾಸಕರ ಕುದುರೆ ವ್ಯಾಪಾರಕ್ಕೆ ಆದ್ಯತೆ

ಅಸ್ಸಾಂನಲ್ಲಿ ಸಂಭವಿಸಿದ ಧ್ವಂಸಕಾರೀ ಪ್ರವಾಹವು ಬ್ರಹ್ಮಪುತ್ರ ಕಣಿವೆ ಮತ್ತು ಬರಾಕ್ ಕಣಿವೆಗಳಲ್ಲಿ ಮಾನವ ಜೀವ ಮತ್ತು ಸೊತ್ತುಗಳನ್ನೂ ಭಾರೀ ಪ್ರಮಾಣದಲ್ಲಿ ಬಲಿ ತೆಗೆದುಕೊಂಡಿದೆ. 35 ಜಿಲ್ಲೆಗಳ ಪೈಕಿ 32 ಜಿಲ್ಲೆಗಳಲ್ಲಿ 60 ಲಕ್ಷಕ್ಕೂ ಹೆಚ್ಚು ಜನರು ಬದುಕುಳಿಯಲು ಹೋರಾಡುತ್ತಿದ್ದಾರೆ. ದುರದೃಷ್ಟವಶಾತ್, ನೂರಕ್ಕೂ ಹೆಚ್ಚು ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. 1.08 ಲಕ್ಷ ಹೆಕ್ಟೇರ್‌ಗೂ ಹೆಚ್ಚು ಬೆಳೆ ಭೂಮಿ ಮುಳುಗಡೆಯಾಗಿದ್ದು, 2000 ಕಿ.ಮೀ.ಗೂ ಹೆಚ್ಚು ರಸ್ತೆಗಳು ಕೆಟ್ಟು ಹೋಗಿವೆ. ಸಾವಿರಾರು ಜಾನುವಾರುಗಳು ನಾಶವಾಗಿವೆ ಎಂದು ವರದಿಯಾಗಿದೆ.

ಇಂತಹ ಪ್ರವಾಹ ಪರಿಸ್ಥಿತಿಯನ್ನು ನಿಭಾಯಿಸುವಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳೆರಡೂ ಶೋಚನೀಯವಾಗಿ ವಿಫಲವಾಗಿವೆ. ಎರಡೂ ಸರ್ಕಾರಗಳು ಮಹಾರಾಷ್ಟ್ರ ರಾಜ್ಯ ಸರ್ಕಾರವನ್ನು ಅಸ್ಥಿರಗೊಳಿಸುವ ಕುದುರೆ ವ್ಯಾಪಾರದಲ್ಲಿಯೇ ಹೆಚ್ಚಾಗಿ ತಮ್ಮನ್ನು ತೊಡಗಿಸಿಕೊಂಡಿವೆ, ಅಲ್ಲಿಯ ಶಾಸಕರಿಗೆ ಆತಿಥ್ಯ ನೀಡುವಲ್ಲಿ ಮಗ್ನವಾಗಿವೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯುರೊ ಖೇದ ವ್ಯಕ್ತಪಡಿಸಿದೆ.

ಪರಿಣಾಮವಾಗಿ, ರಕ್ಷಣಾ ಕಾರ್ಯಾಚರಣೆಗಳು, ಪರಿಹಾರ ಕಾರ್ಯ ಮತ್ತು ಪುಟ 15 ಕ್ಕೆ

ಉದಯಪುರದಲ್ಲಿ ಭೀಕರ ಹತ್ಯೆ ಅಮಾನವೀಯ ದ್ವೇಷ ಕೃತ್ಯ-ಯೆಚುರಿ ಖಂಡನೆ

"ಉದಯಪುರದ ಭೀಕರ ಹತ್ಯೆಯನ್ನು ನಾವು ಬಲವಾಗಿ ಖಂಡಿಸುತ್ತೇವೆ. ದ್ವೇಷ ಮತ್ತು ಹಿಂಸಾಚಾರದ ಬೆಂಕಿ ಹಚ್ಚುವ ವಾತಾವರಣ ನಮ್ಮ ಸಾಮಾಜಿಕ ವ್ಯವಸ್ಥೆಯನ್ನು ಅಮಾನವೀಯಗೊಳಿಸಿದೆ. ಇದು ಕೊನೆಗೊಳ್ಳಲೇ ಬೇಕು. ಅಪರಾಧಿಗಳಿಗೆ ಕಠಿಣ ಶಿಕ್ಷೆಯಾಗಬೇಕು" ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಹೇಳಿದ್ದಾರೆ.

ಇದು ಕೋಮುವಾದ ಹರಡಿಸುವ ಉದ್ದೇಶದಿಂದ ನಡೆಸಿರುವ ಹತ್ಯೆ, ಮಾನವ ಕುಲ ನಾಚಿಕೆಯಿಂದ ತಲೆ ತಗ್ಗಿಸುವಂತೆ ಮಾಡಿರುವ ಈ ಕುಕೃತ್ಯವನ್ನು ಎಸಗಿರುವವರಿಗೆ ಸರಕಾರ ಕಠಿಣ ಶಿಕ್ಷೆ ವಿಧಿಸಬೇಕು ಮತ್ತು ಮೃತರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡಬೇಕು ಎಂದು ಸಿಪಿಐ(ಎಂ)ನ ರಾಜಸ್ತಾನ ರಾಜ್ಯ ಸಮಿತಿ ಆಗ್ರಹಿಸಿದೆ. ಜತೆಗೆ ರಾಜಸ್ತಾನ ಸರಕಾರ ಕೋಮುವಾದಿ ಸಂಘಟನೆಗಳು, ವ್ಯಕ್ತಿಗಳ ಚಲನವಲನಗಳ ಮೇಲೆ ಕಣ್ಣಿಡಲು ಕಾನೂನು ವ್ಯವಸೆ ಮತ್ತು ಗುಪ್ತಚರ ದಳ ಜಾಗೃತವಾಗಿರುವಂತೆ ಮಾಡಬೇಕು ಎಂದೂ ಅದು ಆಗ್ರಹಿಸಿದೆ.

ಮತೀಯ ಧ್ರುವೀಕರಣದ ಹೊಲಸು ಪ್ರಚಾರ ಸಮಾಜದ ಮೇಲೆ, ವಿಶೇಷವಾಗಿ ಮಕ್ಕಳು ಮತ್ತು ಯುವಜನರ ಮನದಲ್ಲಿ ದ್ವೇಷದ ವಿಷವನ್ನು ಬೆರೆಸುತ್ತಿದೆ, ಅದು ಇಂತಹ ಅಮಾನವೀಯ ಘಟನೆಗಳ ಮೂಲಕ ಹೊಮ್ಮುತ್ತಿದೆ. ಆದ್ದರಿಂದ ಸರಕಾರ ಇಂತಹ ದ್ವೇಷ ಪ್ರಚಾರ ನಡೆಸುವವರ ಮೇಲೆ ತಡಮಾಡದೆ ಕ್ರಮ ಕೈಗೊಳ್ಳಬೇಕು ಎಂದೂ ಆದು ಆಗ್ರಹಿಸಿದೆ.

ಸಂಪಾದಕೀಯ

ಮೀಸಲಾತಿ ಹೆಚ್ಚಳ:
ಸರಕಾರದ ನಿರ್ಲಕ್ಷ್ಯತನ ಕೂಡದು

ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡದ ಪಟ್ಟಿಯಲ್ಲಿರುವ ಸಮುದಾಯಗಳ ಮೀಸಲಾತಿ ಪ್ರಮಾಣವನ್ನು ಹೆಚ್ಚಿಸುವ ಬೇಡಿಕೆಗಾಗಿ ವಾಲ್ಮೀಕಿ ಮಠದ ಶ್ರೀ ವಾಲ್ಮೀಕಿ ಪ್ರಸನ್ನಾನಂದ ಸ್ವಾಮೀಜಿಯವರ ನೇತೃತ್ವದಲ್ಲಿ ನಡೆದಿರುವ ಧರಣಿ 140 ದಿನಗಳನ್ನು ಪೂರೈಸಿ 150ನೇ ದಿನದತ್ತ ಸಾಗಿದೆ. ಅಧಿಕಾರಕ್ಕೆ ಬರುವ ಮೊದಲು ಅತಿ ದೊಡ್ಡ ದನಿಯಲ್ಲಿ ಮಾತನಾಡಿದ ಬಿಜೆಪಿ ಪಕ್ಷದ ನಾಯಕರು ಮತ್ತು ಮುಖ್ಯಮಂತ್ರಿಗಳು ಈಗಲೂ ಭರವಸೆಗಳನ್ನು ಕೊಡುವುದು ಬಿಟ್ಟರೆ ಬೇಡಿಕೆಯನ್ನು ಈಡೇರಿಸಿರುವತ್ತ ಯಾವುದೇ ಕ್ರಮಗಳನ್ನು ಕೈಗೊಳ್ಳುತ್ತಿಲ್ಲ. ಸರಕಾರದ ಈ ನಿರ್ಲಕ್ಷ್ಯ ಅನಪೇಕ್ಷಣೀಯ ಹಾಗೂ ವಿಷಾದನೀಯ.

ಜನಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಉದ್ಯೋಗ ಮತ್ತು ಶಿಕ್ಷಣ ಕ್ಷೇತ್ರದಲ್ಲಿ ಮೀಸಲಾತಿಯ ಪ್ರಮಾಣವನ್ನು ನಿಗದಿಪಡಿಸಬೇಕು ಎನ್ನುವುದು ಭಾರತ ಸರ್ಕಾರದ ಯೋಜನಾ ಆಯೋಗದ ನಿರ್ದೇಶನ. ಅದನ್ನು ಅನುಸರಿಸಿ ಕೇಂದ್ರ ಮಟ್ಟದಲ್ಲಿ ಪರಿಶಿಷ್ಟ ಜಾತಿ ಸಮುದಾಯ ಗಳಿಗೆ ಶೇ.16.66 ಮತ್ತು ಪರಿಶಿಷ್ಟ ಪಂಗಡದ ಸಮುದಾಯಗಳಿಗೆ ಶೇ.7.5 ಪ್ರಮಾಣವನ್ನು ನಿಗದಿಗೊಳಿಸಲಾಗಿದೆ. ಹತ್ತು ವರ್ಷಗಳಿಗೊಮ್ಮೆ ಮೀಸಲಾತಿ ಕುರಿತು ಪುನರ್ ವಿಮರ್ಶೆ ನಡೆಸಬೇಕೆಂಬ ಸೂಚನೆಯೂ ಇದೆ. ಪ್ರಮಾಣ ನಿಗದಿಯಾದ ನಂತರದ ಅವಧಿಯಲ್ಲಿ ಹಲವು ಹೊಸ ಸಮುದಾಯಗಳನ್ನು ಸೇರ್ಪಡೆ ಮಾಡಲಾಗಿದೆ. ಹೀಗಿದ್ದರೂ ಕರ್ನಾಟಕ ರಾಜ್ಯದಲ್ಲಿ ಈ ಪ್ರಮಾಣ ಶೇ.15 ಮತ್ತು ಶೇ.3 ನ್ನೇ ಮುಂದುವರಿಸಿರುವುದು ಅನ್ಯಾಯ. ಈ ಪ್ರಮಾಣವನ್ನು ನಿಗದಿಪಡಿಸಿದ್ದು 1958 ರಲ್ಲಿ. ಆ ಬಳಿಕ ಕರ್ನಾಟಕದ ಎಸ್.ಟಿ. ಪಟ್ಟಿಗೆ 8 ಬಾರಿ ತಿದ್ದುಪಡಿಗಳು ಬಂದಿವೆ ಮತ್ತು ಹೊಸದಾಗಿ ಒಂದೆರಡು ಸಮುದಾಯಗಳನ್ನು ಸೇರಿಸಲಾಗಿದೆ. ಈ ಸಮುದಾಯಗಳಿಗೆ ಮೀಸಲಾತಿ ನೀಡಿಕೆಯು, ಸುಖಭೋಗದ ಸೌಲಭ್ಯವಲ್ಲ, ಬದಲಾಗಿ ಶತಮಾನಗಳಿಂದಲೂ ಆಗಿರುವ ಅನ್ಯಾಯಕ್ಕೆ ಒಂದು ಸಾಂತ್ವನ ಹಾಗೂ ಸಣ್ಣ ಪ್ರಮಾಣದ ಪರಿಹಾರದ ಸೌಲಭ್ಯ ಕೂಡ. ಆದರೆ ಆಳುವವರ್ಗಗಳು ಮೀಸಲಾತಿ ಸೌಲಭ್ಯವನ್ನು ಸಮುದಾಯಗಳಿಗೆ ಕೊಡುತ್ತಿರುವುದು ದಾನ ಅಥವಾ ಭಿಕ್ಷೆ ಎಂಬಂತೆ ವರ್ತಿಸುವುದು ಖಂಡನೀಯ. ಸಂಕುಚಿತ ರಾಜಕೀಯ ಹಿತಾಸಕ್ತಿ ಗಳಿಗಾಗಿ ಮೀಸಲಾತಿ ಸೌಲಭ್ಯವನ್ನು ದುರ್ಬಳಕೆ ಮಾಡಿಕೊಂಡು ಬರುತ್ತಿರುವುದು ಕೂಡ ಅಂತಹ ಹಿತಾಸಕ್ತಿಗಳಿಗಾಗಿ ಎನ್ನುವುದೂ ಗಮನಾರ್ಹ.

2015 ರಲ್ಲಿ ಎಸ್.ಸಿ. ಮತ್ತು ಎಸ್.ಟಿ. ಸಮುದಾಯಗಳ ಮೀಸಲಾತಿಯ ಈಗಿನ ಪ್ರಮಾಣವನ್ನು ಹೆಚ್ಚಿಸಬೇಕೆಂದು ತನ್ನ ಮುಂದೆ ಬಂದ ಪ್ರಕರಣವನ್ನು ಲಕ್ಷಿಸಿ ಸರ್ವೋಚ್ಚ ನ್ಯಾಯಾಲಯವು ನೀಡಿದ ನಿರ್ದೇಶನದಂತೆ ರಾಜ್ಯದ ಉಚ್ಚ ನ್ಯಾಯಾಲಯವು ರಾಜ್ಯ ಸರಕಾರಕ್ಕೆ ಕ್ರಮ ವಹಿಸಲು ನಿರ್ದೇಶನ ನೀಡಿತ್ತು. ಮುಂದಿನ ಆರು ತಿಂಗಳೊಳಗಾಗಿ ಮೀಸಲಾತಿ ಪ್ರಮಾಣದ ಹೆಚ್ಚಳಕ್ಕೆ ಸಂಬಂಧಿಸಿ ಸ್ಪಷ್ಟ ನಿಲುವು ತಾಳುವಂತೆ ಮತ್ತು ಕ್ರಮ ವಹಿಸುವಂತೆ ಸೂಚಿಸಿತ್ತು. ಈ ಬಗ್ಗೆ ಮೀನಾ ಮೇಷ ಎಣಿಸಿದ ಸರಕಾರದ ನಡೆಗೆ ವ್ಯಾಪಕ ಖಂಡನೆಯೂ ವ್ಯಕ್ತವಾಗಿ ಚುನಾವಣಾ ವಿಷಯವೂ ಆಗಿತ್ತು. ಹಾಗೂ ಆ ಸಮುದಾಯಗಳನ್ನು ಅಂದಿನ ಕಾಂಗ್ರೆಸ್ ಸರಕಾರದ ವಿರುದ್ಧ ಎತ್ತಿ ಕಟ್ಟಲು ಬಿಜೆಪಿ ರಾಜಕೀಯ ಅಸ್ತ್ರವನ್ನಾಗಿ ಬಳಸಿತ್ತು. ವಾಲ್ಮೀಕಿಸ್ವಾಮೀಜಿಯವರ ಪಾದಯಾತ್ರೆ, ಸಾರ್ವಜನಿಕ ಒತ್ತಡ ಹೆಚ್ಚಾದ ಹಿನ್ನೆಲೆಯಲ್ಲಿ ನಿವೃತ್ತ ನ್ಯಾಯಮೂರ್ತಿ ಹೆಚ್.ಎನ್.ನಾಗಮೋಹನದಾಸ್ ಅವರ ಅದ್ಯಕ್ಷತೆಯ ಆಯೋಗವನ್ನು ಜೆಡಿ ಎಸ್– ಕಾಂಗ್ರೆಸ್ ಸಮಿಶ್ರ ಸರಕಾರ ರಚಿಸಿ ಅಧ್ಯಯನ ನಡೆಸಿತ್ತು. ಈ ಏಕ ಸದಸ್ಯ ಆಯೋಗ 2020 ರ ಜುಲೈ 7ರಂದು ವಿವರವಾದ ವರದಿಯನ್ನು ಸರಕಾರಕ್ಕೆ ಸಲ್ಲಿಸಿತ್ತು. ಅದಾಗಿ ಎರಡು ವರುಷಗಳಾಗುತ್ತಿದ್ದರೂ ಸರಕಾರ ಆ ವರದಿಯ ಕುರಿತು ತನ್ನ ಅಭಿಪ್ರಾಯವನ್ನು ತಿಳಿಸಿಲ್ಲ. ಮಾತ್ರವಲ್ಲ, ಅದನ್ನು ಸಾರ್ವಜನಿಕರೆದುರು ಮಂಡಿಸಿಯೂ ಇಲ್ಲ. ಬದಲಾಗಿ ನ್ಯಾ.ಅಡಿಯವರ ಇನ್ನೊಂದು ಸಮಿತಿಯನ್ನು ರಚಿಸಿ ಅದರ ವರದಿಗೆ ಕಾಯುತ್ತಿರುವುದು ವಿಳಂಬ ನೀತಿಯೂ ಹಾಗೂ ಹಾದಿ ತಪ್ಪಿಸುವ ಕ್ರಮವೂ ಅಲ್ಲದೇ ಬೇರೆನಲ್ಲ. ಈ ಸಮಿತಿಯ ವ್ಯಾಪ್ತಿಯಲ್ಲಿ ಹೊಸದಾಗಿ ಬೇಡಿಕೆ ಮಂಡಿಸಿರುವ ಕುರುಬ, ಪಂಚಮಸಾಲಿ ಮುಂತಾದ ಸಮುದಾಯಗಳ ಬೇಡಿಕೆಗಳೂ ಅಧ್ಯಯನ ವ್ಯಾಪ್ತಿಯು ಒಳಗೊಂಡಿದೆ. ಹೀಗಾಗಿ ನ್ಯಾ.ದಾಸ್ ಅವರ ವರದಿಯ ಕುರಿತು ಸರಕಾರ ನಿಲುವು ತಾಳಲು ನಿರಾಕರಿಸಿರುವುದು ನ್ಯಾಯಾಲಯದ ನಿರ್ದೇಶನದ ಉಲ್ಲಂಘನೆ ಹಾಗೂ ಕಾನೂನು ಬಾಹೀರವೂ ಆಗಿದೆ. ಸರಕಾರದ ಕೊಡುತ್ತಿರುವ ಸಬೂಬು ವಂಚಿತ ಸಮುದಾಯಗಳಿಗೆ ಮತ್ತಷ್ಟೂ ವಂಚಿಸುವುದೇ ಆಗಿದೆ.

ಧರಣಿ ನಿರತ ಸ್ಥಳಕ್ಕೆ ಸ್ವತಃ ಮುಖ್ಯಮಂತ್ರಿಗಳು ಬಂದು ಹದಿನೈದು ದಿನಗಳಲ್ಲಿ ಸಕಾರಾತ್ಮಕವಾದ ಕ್ರಮಗಳನ್ನು ಕೈಗೊಳ್ಳುವುದಾಗಿ ಹೇಳಿ ಹೋಗಿ ಈಗಾಗಲೇ ತಿಂಗಳೇ ಕಳೆದಿದೆ. ಮೀಸಲಾತಿಯ ಸೌಲಭ್ಯವನ್ನು ಅರ್ಥಹೀನಗೊಳಿಸುವಂತೆ ಇತರೆ ಜಾತಿಗಳನ್ನು ಎತ್ತಿ ಕಟ್ಟುವ ಹುನ್ನಾರವನ್ನು ಬಿಜೆಪಿ–ಸಂಘಪರಿವಾರ ನಡೆಸುತ್ತಿರುವ ಸುದ್ದಿಗಳೂ ಇರುವುದು ಆತಂಕಕಾರಿ. ಸ್ವತಃ ಸಂಘಪರಿವಾರ ಈಗಿನ ಸಾಮಾಜಿಕ ನ್ಯಾಯದ ಕರಿತು ತಾತ್ವಿಕವಾಗಿ ಮತ್ತು ಪ್ರಾಯೋಗಿಕವಾಗಿಯೂ ವಿರೋಧಿ ಎನ್ನುವುದು ಕಾಲದಿಂದ ಕಾಲಕ್ಕೆ ಬಯಲಾದ ಸತ್ಯವೇ ಆಗಿದೆ. ಇಂತಹ ನಡೆಗಳು ಅತ್ಯಂತ ಅಪಾಯಕಾರಿ.

ಮೀಸಲಾತಿ ಪ್ರಮಾಣ ಹೆಚ್ಚಳಕ್ಕೆ ಅಗ್ರಹಿಸಿ ರಾಜ್ಯದಾದ್ಯಂತ ಪ್ರತಿಭಟನೆಗಳು ನಡೆದಿವೆ. ಏನೊಂದೂ ಇತ್ಯರ್ಥ ಕಾಣದ ಸರಕಾರದ ನಡೆಯಿಂದ ಜನತೆಯಲ್ಲಿ ಅತೃಪ್ತಿಯು ಹೆಚ್ಚುತ್ತಿರುವುದನ್ನು ಗಮನಿಸಬೇಕು. ಸರಕಾರ ಈಗಲೂ ಅದನ್ನು ಪ್ರತಿಷ್ಠೆಯ ವಿಷಯವನ್ನಾಗಿ ಪರಿಗಣಿಸಬಾರದು. ಕೂಡಲೇ ಸಕಾರಾತ್ಮಕ ನಿರ್ಧಾರ ಕೈಗೊಂಡು ಧಮನಿತ ಸಮುದಾಯಗಳ ಬೇಡಿಕೆಯನ್ನು ಈಡೇರಿಸಲು ಮುಂದಾಗಬೇಕು.

ಇದೇ ಹೊತ್ತಿನಲ್ಲಿ ಖಾಸಗಿಕರಣ ಮತ್ತು ಉದಾರಿಕರಣದ ಆರ್ಥಿಕ ನೀತಿಗಳ ಜಾರಿಯಿಂದಾಗಿ ಉದ್ಯೋಗ ಮತ್ತು ಶಿಕ್ಷಣದ ಅವಕಾಶಗಳು ಕುಗ್ಗಿ ಹೋಗಿರುವ ಹಿನ್ನೆಲೆಯಲ್ಲಿ ಮೀಸಲಾತಿ ಯ ಮಿತಿಯನ್ನು ಅರ್ಥಮಾಡಿಕೊಳ್ಳಬೇಕು. ಮೀಸಲಾತಿ ಪ್ರಮಾಣದ ಹೆಚ್ಚಳಕ್ಕಾಗಿ ನಡೆಯುವ ಹೋರಾಟ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಆರ್ಥಿಕ ಮತ್ತು ಸಾಮಾಜಿಕ ಸಬಲೀಕರಣವನ್ನು ತರುವಂತಹ ಭೂಮಿ, ಉದ್ಯೋಗ ಮುಂತಾದ ಪ್ರಶ್ನೆಗಳಿಗಾಗಿ ನಡೆಸುವ ಆಂದೋಲನವಾಗಿಯೂ ವಿಸ್ತಾರಗೊಳ್ಳುವುದು ಅತಿ ಅಗತ್ಯ. ಸಾರ್ವಜನಿಕ ಶಿಕ್ಷಣ ಹಾಗೂ ಸಾರ್ವಜನಿಕ ರಂಗ ಉದ್ದಿಮೆಗಳ ಖಾಸಗೀಕರಣವು ಮತ್ತು ಸರಕಾರಗಳು ವಿವಿಧ ಇಲಾಖೆಗಳಲ್ಲಿ ಖಾಲಿ ಇರುವ ಹುದ್ದೆಗಳು ಮತ್ತು ಅಲ್ಲಿನ ಬ್ಯಾಕ್ ಲಾಗ್ ಹುದ್ದೆ ಭರ್ತಿ ಮಾಡದೇ ರದ್ದುಪಡಿಸಲು ಕ್ರಮವಹಿಸಿ, ಗುತ್ತಿಗೆ ಪದ್ದತಿ ಜಾರಿಗೊಳಿಸಿರುವ ಈ ಎಲ್ಲವೂ ಇರುವ ಮೀಸಲಾತಿ ಸೌಲಭ್ಯವನ್ನು ಕಿತ್ತು ಕೊಂಡಿವೆ. ಇದನ್ನು ಉಳಿಸಿಕೊಳ್ಳದೇ, ಕೇವಲ ಮೀಸಲಾತಿ ಹೆಚ್ಚಳ ಕೇಳುವುದು ಪ್ರಯೋಜನಕಾರಿಯಾಗಿಲ್ಲ. ಈ ಹೋರಾಟ ಸಾರ್ವಜನಿಕ ಶಿಕ್ಷಣ ಹಾಗೂ ಸಾರ್ವ ಜನಿಕ ಉದ್ದಿಮೆಗಳ ಬಲಪಡಿಕೆಗೆ, ವಿಸ್ಥರಣೆಗೆ ಮತ್ತು ಖಾಸಗೀಕರಣ ವಿರೋಧಿಸಲು ಕ್ರಮವಹಿಸಬೇಕು. ಹಾಗೇ ಖಾಲಿ ಇರುವ ಖಾಯಂ ಹುದ್ದೆಗಳನ್ನು ತುಂಬಲು ಒತ್ತಾಯಿಸುವುದು. ಈ ಹಕ್ಕುಗಳನ್ನು ಹೋರಾಟಗಾರರು ತಮ್ಮ ಹಕ್ಕೊತ್ತಾಯಗಳಲ್ಲಿ ಸೇರಿಸಿಕೊಳ್ಳುವುದು ಅವಶ್ಯವಾಗಿದೆ.

ಈಗಿನ ಹೋರಾಟ ಅತ್ಯಂತ ಸಂಯಮ ಮತ್ತು ಪ್ರಜಾಸತ್ತಾತ್ಮಕವಾಗಿ ನಡೆದಿರುವುದು ಶ್ಲಾಘನೀಯ. ಈ ಹೋರಾಟವನ್ನು ಬೆಂಬಲಿಸಿ, ಅದನ್ನು ಮತ್ತಷ್ಟು ಹರಿತಗೊಳಿಸುವತ್ತ ಪ್ರಜಾಸತ್ತಾತ್ಮಕ ಶಕ್ತಿಗಳು ಮುಂದಾಗ ಬೇಕಿದೆ.

ರಾಷ್ಟ್ರಪತಿ ಚುನಾವಣೆ: ಅಸ್ಮಿತತೆಯ ಹಿಂದಿದೆ ಮಹಾ ವಂಚನೆ

ಈ ವಾರ

ಎಸ್.ವೈ. ಗುರುಶಾಂತ್

ಭಾರತದ 15ನೇ ರಾಷ್ಟ್ರಪತಿಯನ್ನು ಆರಿಸುವ ಪ್ರಕ್ರಿಯೆ ಈಗಾಗಲೇ ಆರಂಭಗೊಂಡಿದೆ. ಇದೇ 2022 ಜುಲೈ 18ರಂದು ರಾಷ್ಟ್ರಪತಿ ಆಯ್ಕೆಗಾಗಿ ಚುನಾವಣೆಯು ನಡೆಯಲಿದೆ. ಸ್ಪರ್ಧಾ ಕಣದಲ್ಲಿ ಕೆಲವು ಹೆಸರುಗಳಿದ್ದರೂ ಪ್ರಮುಖವಾಗಿ ಆಡಳಿತರೂಢ ಬಿಜೆಪಿ ಬೆಂಬಲಿತ ಅಭ್ಯರ್ಥಿ ಶ್ರೀಮತಿ ದ್ರೌಪದಿ ಮುರ್ಮು ಮತ್ತು ವಿರೋಧ ಪಕ್ಷಗಳ ಪ್ರಣಿತ ಅಭ್ಯರ್ಥಿ ಶ್ರೀ ಯಶ್ವಂತ್ ಸಿನ್ಹಾ ರವರ ನಡುವೆ ಹಣಾಹಣಿ ಇರುವುದು ನಿಚ್ಚಳ.


ಪ್ರಸಕ್ತವಾಗಿ ವಿವಿಧ ಪಕ್ಷಗಳ ಬಲಾಬಲಗಳ ಸಂಯೋಜನೆಯನ್ನು ಗಮನಿಸಿದಾಗ ಒಂದು ಹೆಜ್ಜೆ ಶ್ರೀಮತಿ ದ್ರೌಪದಿ ಮುರ್ಮು ಮುಂದಿರುವಂತೆ ಕಾಣುತ್ತದೆ. ಈ ಚುನಾವಣಾ ಘೋಷಣೆಯ ಪೂರ್ವದಲ್ಲಿ ಎನ್.ಡಿ.ಎ ಪಕ್ಷಗಳ ಕೂಟಕ್ಕೆ ಇದ್ದ ಮತದಾರರ ಬೆಂಬಲ ಮೌಲ್ಯ ಶೇ. 48.3 ಅಂದರೆ ಎನ್.ಡಿ.ಎ. ಯೇತರ ಎಲ್ಲ ಪಕ್ಷಗಳು ಒಗ್ಗೂಡಿ ಅಭ್ಯರ್ಥಿಯನ್ನು ಕಣಕ್ಕಿಳಿಸಿದ್ದರೆ ಎನ್.ಡಿ.ಎ. ಅಭ್ಯರ್ಥಿಯನ್ನು ಸೋಲಿಸಬಹುದಾಗಿತ್ತು. ಈ ಹಿನ್ನೆಲೆಯಲ್ಲಿ ಶ್ರೀಮತಿ ದ್ರೌಪದಿ ಮುರ್ಮು ಅವರನ್ನು ಬಿಜೆಪಿ ಆಯ್ಕೆ ಮಾಡಿರುವುದು ಹಲವು ದಿಕ್ಕುಗಳ ಲೆಕ್ಕಾಚಾರದಿಂದ.

ಶ್ರೀಮತಿ ಮುರ್ಮು ಸಂತಾಲ ಬುಡಕಟ್ಟು ಸಮುದಾಯಕ್ಕೆ ಸೇರಿದ ಮಹಿಳೆ ಎಂಬುದು ಒಂದು ವಿಶೇಷ ಅಂಶ. ಬ್ರಿಟಿಷ್ ವಸಾಹತು ಶಾಹಿಯ ವಿರುದ್ಧ ಮಹಾ ದಂಗೆಯೆದ್ದ ತ್ಯಾಗ, ಬಲಿದಾನದ ಪರಂಪರೆ ಈ ಸಮುದಾಯಕ್ಕೆ ಇದೆ. ಕಳೆದ ಬಾರಿ ಪರಿಶಿಷ್ಟ ಜಾತಿಗೆ ಸೇರಿದ ಶ್ರೀ ಕೋವಿಂದ ರವರನ್ನು ಅಭ್ಯರ್ಥಿಯಾಗಿ ಆಯ್ಕೆ ಮಾಡಿದಾಗ ಇದ್ದ ಲೆಕ್ಕಚಾರ ಒಂದಾದರೆ ಈ ಬಾರಿ ಬುಡಕಟ್ಟು ಸಮುದಾಯದ ಮಹಿಳೆಯನ್ನು ಆಯ್ಕೆ ಮಾಡಿರುವುದು ವಿಶೇಷ. ಇವರು ಹಿಂದೆ ಬಿಜೆಪಿಯ



ರಾಜಕಾರಣಿ, ರಾಜ್ಯಪಾಲೆ, ನಂತರ ಸಕ್ರಿಯ ರಾಜಕಾರಣದಿಂದ ಸ್ವಲ್ಪ ದೂರ ಇದ್ದವರು. ಒರಿಸ್ಸಾವನ್ನು ಒಳಗೊಂಡು ಸುತ್ತಲಿನ ವಿವಿಧ ರಾಜ್ಯಗಳ ಒಟ್ಟು ಪ್ರದೇಶದಲ್ಲಿ ಸುಮಾರು ಒಂದು ಕೋಟಿಗೂ ಅಧಿಕ ಸಂತಾಲ ಬುಡಕಟ್ಟು ಸಮುದಾಯವಿದೆ. ಅಲ್ಲದೆ ಜಾರ್ಖಂಡ್, ಒರಿಸ್ಸಾ, ಮಧ್ಯಪ್ರದೇಶ ಕಡೆಗಳಲ್ಲಿ ಇತರೆ ಬುಡಕಟ್ಟು ಸಮುದಾಯವು ಪ್ರಬಲವಾಗಿವೆ. ಹೀಗಾಗಿ ಬರುವ ಪಾರ್ಲಿಮೆಂಟಿನ ಚುನಾವಣೆಯಲ್ಲಿ ಬಿಜೆಪಿಗೆ ಇದರಿಂದ ಲಾಭವಾಗಲಿದೆ ಎನ್ನುವುದು ಬಿಜೆಪಿ ಯ ಕಾರ್ಯತಂತ್ರ. ಬುಡಕಟ್ಟು ಸಮುದಾಯಕ್ಕೆ ಸೇರಿದ ಒಬ್ಬ ಮಹಿಳೆಯನ್ನು ಅಭ್ಯರ್ಥಿಯನ್ನಾಗಿಸಿದಾಗ ಕೆಲವು ರಾಜಕೀಯ ಪಕ್ಷಗಳು ನಿರಾಕರಿಸಲಾಗದ ಒತ್ತಡಕ್ಕೆ ಒಳಗಾಗುತ್ತವೆ ಎಂಬುದು ಬಿಜೆಪಿ ಲೆಕ್ಕ. ಇದು ತಕ್ಷಣದಲ್ಲಿ ಫಲಿಸಿತು ಕೂಡ. ಮುರ್ಮು ಅವರು ಅಭ್ಯರ್ಥಿಯಾಗಿ ಘೋಷಿತವಾದ ಬಳಿಕ ಬಿಜು ಜನತಾ ದಳ– ಬಿಜೆಡಿ ಪಕ್ಷ ಬೆಂಬಲ ಘೋಷಿಸಿತು. ಅದರಂತೆ ವಿವಿಧ ರಾಜ್ಯಗಳಲ್ಲಿಯೂ ಕೂಡ ಇದೇ ಪ್ರತಿಕ್ರಿಯೆಗಳು ಕಂಡು ಬಂದು ಎನ್.ಡಿ.ಎ. ಅಭ್ಯರ್ಥಿಗೆ ಬೆಂಬಲ ಹೆಚ್ಚಾಯಿತು. ಹಾಗಾಗಿ ಬಿಜೆಪಿಯ ತಂತ್ರ ಈ ಮಟ್ಟದಲ್ಲಿ ಫಲಿಸಿದೆ ಕೂಡ. ಇದು ಮುಂಬರುವ ಲೋಕಸಭಾ ಚುನಾವಣೆಯ ಹೊಸ ಸಮೀಕರಣಕ್ಕೆ ಹಾದಿ ಮಾಡಿ ಕೊಡಬಲ್ಲದೇ ಎಂದು ಯೋಚಿಸಲಾಗುತ್ತಿದೆ.

ವಿಶೇಷವೆಂದರೆ ಬಿಜೆಪಿಯು ತನ್ನ ಅಭ್ಯರ್ಥಿಯನ್ನು ಘೋಷಿಸಿದ ಬಳಿಕ ಕರ್ನಾಟಕದಲ್ಲಿನ ಜಾತ್ಯಾತೀತ ಜನತಾದಳ ಹೈಕಮಾಂಡ್ ಎಚ್. ಡಿ. ದೇವೇಗೌಡರು ಅಭ್ಯರ್ಥಿಯನ್ನು ತುಂಬು ಹೃದಯದಿಂದ ಹೊಗಳಿದರು. ಕೆಲವು ದಿನಗಳ ನಂತರದಲ್ಲಿ ಜೆಡಿಎಸ್ ಪಕ್ಷ ಬಿಜೆಪಿ ಅಭ್ಯರ್ಥಿಗೆ ಬೆಂಬಲವನ್ನು ಅಧಿಕೃತವಾಗಿ ಘೋಷಿಸಿ ಸಮರ್ಥನೆಯನ್ನೂ ಮಾಡಿಕೊಂಡಿತು. ಒಂದೆಡೆ ಬಿಜೆಪಿಯನ್ನು ಅತ್ಯಂತ ಖಡಾ ಖಂಡಿತವಾಗಿ ವಿರೋಧಿಸಿ ಹೋರಾಟ ನಡೆಸುತ್ತಿರುವುದಾಗಿ ಹೇಳುತ್ತಿರುವ ಜೆಡಿಎಸ್, ಈ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿಯನ್ನು ಬೆಂಬಲಿಸಿರುವುದು ಯಾವ ಸಂಕೇತವನ್ನು ನೀಡುತ್ತದೆ? ಈ ವಿಷಯದಲ್ಲಿ ಬಿಜೆಪಿ ವಿರುದ್ಧದ ತಮ್ಮ ಹೋರಾಟ ಬೇರೆ, ರಾಷ್ಟ್ರಪತಿ ವಿಚಾರದಲ್ಲಿ ಬೆಂಬಲಿಸಲು ಕಾರಣ ಬೇರೆ ಎಂದು ಎಚ್ ಡಿ ಕುಮಾರಸ್ವಾಮಿ ಅವರೇನೋ ಹೇಳಿದ್ದಾರೆ. ಆದರೆ ಇನ್ನೊಂದೆಡೆ ಅವರೇ ಹೇಳುವಂತೆ ಯಾವ ಪಕ್ಷಕ್ಕೂ ಕರ್ನಾಟಕದಲ್ಲಿ ಬಹುಮತ ಸಿಗದೇ ಹೋಗಿ ಪುನಃ ಜೆಡಿಎಸ್ ಪಕ್ಷದ ನಾಯಕರೇ ಮುಖ್ಯಮಂತ್ರಿ ಆಗುವುದು ಖಂಡಿತ ಎಂದು ಸಾರಿದ್ದಾರೆ.



ಅವರ ಊಹೆಯಂತೆ ಜೆಡಿ–ಎಸ್ ಪಕ್ಷ 45 ರಿಂದ 50 ರವರೆಗೆ ಸ್ಥಾನಗಳನ್ನು ಪಡೆಯಲಿದೆ. ಯಾರೇ ಸರಕಾರ ಮಾಡಬೇಕಿದ್ದರೂ ತಮ್ಮ ಬೆಂಬಲ ಇಲ್ಲದೆ ಅಸಾಧ್ಯ. ಹಾಗಾಗಿ ತಾವೇ ಕಿಂಗ್ ಮೇಕರ್ ಅಲ್ಲ ಸ್ವತಃ ಕಿಂಗ್ ಎಂದು ಪ್ರತಿಪಾದಿಸಿದ್ದಾರೆ! ಕರ್ನಾಟಕದ ಪ್ರಸ್ತುತ ರಾಜಕಾರಣದಲ್ಲಿ ತಮ್ಮದು ಮುಕ್ತ ಅವಕಾಶ ಎಂದು ಈ ಮೂಲಕ ಹೇಳಿಯಾಗಿದೆ. ಪ್ರಶ್ನೆ ಎಂದರೆ ಇಂತಹ ತಂತ್ರಗಳು ಭವಿಷ್ಯದ ಶಕ್ತಿ ರಾಜಕಾರಣದಲ್ಲಿ ಎಂತಹ ಫಲವನ್ನು ತಂದು ಕೊಡಬಲ್ಲದು ಎನ್ನುವುದರತ್ತ ಯೋಚಿಸುವುದು ಉತ್ತಮ.

ಬಿಜೆಪಿ ಆದಿವಾಸಿ ಮಹಿಳೆಯನ್ನು ರಾಷ್ಟ್ರಪತಿ ಹುದ್ದೆಗೆ ಅಭ್ಯರ್ಥಿಯನ್ನಾಗಿಸಿರುವುದು ಹಲವಾರು ಪ್ರಗತಿಪರರಲ್ಲಿಯೂ 'ಕಂಪನ' ಸೃಷ್ಟಿಸಿದೆ! ಇದನ್ನು ಪ್ರಜಾಪ್ರಭುತ್ವದ ಪವಾಡ ಎಂತಲೂ ಬಣ್ಣಿಸುವವರು ಇದ್ದಾರೆ! ಇದು ಆದಿವಾಸಿ ಆಸ್ಮಿತತೆಗೆ ಸಂದ ಜಯ, ಹೀಗಾಗಿ ಬಿಜೆಪಿಯ ರಾಜಕಾರಣ ಏನೇ ಇದ್ದರೂ ರಾಷ್ಟ್ರಪತಿಯಂತಹ ಉನ್ನತ ಹುದ್ದೆಗೆ ಆದಿವಾಸಿ ಮಹಿಳೆ ಒಬ್ಬರು ಆಯ್ಕೆಯಾಗುವುದನ್ನು ಬೆಂಬಲಿಸಬೇಕು ಎನ್ನುವವರು ಇಲ್ಲದಿಲ್ಲ. ಆದಿವಾಸಿ ಅಭ್ಯರ್ಥಿಯ ಆಯ್ಕೆಯ ಹೆಗ್ಗಳಿಕೆಯನ್ನು ಕೊಚ್ಚಿಕೊಳ್ಳುವ ಬಿಜೆಪಿ ಇಡೀ ಭಾರತ ದೇಶದ ಆದಿವಾಸಿ ಸಮುದಾಯವನ್ನು ಸರ್ವನಾಶ ಮಾಡುವ ಕ್ರಮಗಳನ್ನು ಕೈಗೊಂಡಿರುವುದನ್ನು ಮರೆಯಲಾದೀತೇ? ಗುಜರಾತಿನಲ್ಲಿ ಸರ್ದಾರ್ ವಲ್ಲಭಾಯಿ ಪಟೇಲ್ ಅವರ ಪುತ್ತಳಿ ಆನಾವರಣ ಮಾಡಿದ ಪ್ರದೇಶದಲ್ಲಿ ಲಕ್ಷಾಂತರ ಆದಿವಾಸಿಗಳು ಬೀದಿ ಪಾಲಾದರು. ಜಾರ್ಖಂಡ್ ನಲ್ಲಿ ರಾಂಚಿ ಸ್ಮಾರ್ಟ್ ಸಿಟಿ ಗಾಗಿ ನಡೆಸಲಾಗುತ್ತಿರುವ ಯೋಜನೆಯಲ್ಲಿ ಸಹ ಲಕ್ಷಾಂತರ ನಿವಾಸಿಗಳ ಬದುಕು ನೇಣಿನ ಕುಣಿಕೆಯಲ್ಲಿದೆ. ಬಹುತೇಕ ಉತ್ತರ ಭಾರತ, ಈಶಾನ್ಯ ಭಾರತದಲ್ಲಿ ನೆಲೆಸಿರುವ ಆದಿವಾಸಿ ಪ್ರದೇಶಗಳು ಸಂಪತ್ ಭರಿತ ಅರಣ್ಯವಾಗಿದ್ದು ಪುಟ 4 ಕ್ಕೆ

‘ಅಮೇರಿಕಾದ ವಿದೇಶಿ ಸಂಬಂಧಗಳು ಸ್ವಹಿತಾಸಕ್ತಿಯಿಂದ ಕೂಡಿವೆ’

ಜಗತ್ತಿನಲ್ಲಿ ಯಾವ ಸಾಮ್ರಾಜ್ಯಗಳ ಆಳ್ವಿಕೆಯಲ್ಲೂ ಸಾಮಾನ್ಯ ಜನರ ಪರಿಸ್ಥಿತಿ ಕಷ್ಟದ್ದೇ ಆಗಿತ್ತು; ಸಾಮ್ರಾಜ್ಯಗಳು ಅಳಿದು ಪ್ರಜಾಪ್ರಭುತ್ವಗಳು ಅಸ್ತಿತ್ವಕ್ಕೆ ಬಂದ ಮೇಲೆಯೇ ಸಾಮಾನ್ಯ ಜನರಿಗೆ ಅನುಕೂಲಗಳು, ಹಕ್ಕುಗಳು ಬ್ರಿಟನ್ ಫ್ರಾನ್ಸ್ ಸ್ಪೈನ್ ಮತ್ತು ಜಪಾನ್ ಗಳಲ್ಲೂ ಲಭಿಸಿದವು ಎಂಬುದಾಗಿ ಚಿಂತಕ ಹಾಗೂ ಅಮೆರಿಕಾದಲ್ಲಿನ ನಿವೃತ್ತ ತಜ್ಞವೈದ್ಯ ಡಾ. ಅಮರ್ ಕುಮಾರ್ ಹೇಳಿದರು.

ಅವರು ಮಂಗಳೂರಿನಲ್ಲಿ "ಸಮಾನ ಮನಸ್ಕರು" ಆಶ್ರಯದಲ್ಲಿ ಅಮೆರಿಕಾದ ರಾಜಕೀಯ, ಆರ್ಥಿಕ ಹಾಗೂ ಸಾಮಾಜಿಕ ವಿದ್ಯಮಾನಗಳನ್ನು ಕುರಿತಾದ ಸಂವಾದದಲ್ಲಿ ಭಾಗವಹಿಸಿ ಮಾತನಾಡುತ್ತಿದ್ದರು.

ತಾನು 49 ವರ್ಷಗಳಿಂದ ಅಮೆರಿಕಾದಲ್ಲಿ ವಾಸವಾಗಿದ್ದು ಅಲ್ಲಿನ ಒಳಹೊರಗನ್ನು ಸಾಕಷ್ಟು ತಿಳಿದಿರುವುದಾಗಿ ಅವರು ಹೇಳಿದರು. ಅಲ್ಲಿ ಯಾವ ಪಕ್ಷಗಳು ಆಡಳಿತ ನಡೆಸುತ್ತಿದ್ದರೂ ಅವು ಅಲ್ಲಿನ ಬಿಲಿಯಾಧಿಪತಿಗಳಿಗೆ ಅನುಕೂಲವಾಗಿ ವರ್ತಿಸುತ್ತವೆಯೇ ಹೊರತು ಸಾಮಾನ್ಯರ ಪರವಲ್ಲ. ಅದಕ್ಕಾಗಿ ಅದು ಪ್ರಜಾಪ್ರಭುತ್ವದ ಹೆಸರಲ್ಲಿ ದಬ್ಬಾಳಿಕೆಯನ್ನು ನಡೆಸುತ್ತಿದೆ. ಅಲ್ಲಿನ ಜನಸಂಖ್ಯೆಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಮೆಷಿನ್ ಜನರ ಕೈಗಳಲ್ಲಿವೆ. ಕರಿಯ ಜನಾಂಗದವರು ಇವತ್ತಿಗೂ ದಾರುಣ ಪರಿಸ್ಥಿತಿಯಲ್ಲಿ ಇದ್ದಾರೆ.ಬೇರೆ ಭವಿಷ್ಯ ಕಾಣದ ಇವರು ಆಗೀಗ ಹಿಂಸಾಕೃತ್ಯಗಳಿಗಿಳಿಯುತ್ತಿರುವುದು ಆಶ್ಚರ್ಯವೆನಿಸುವುದಿಲ್ಲ. ಜಂಭ ತೋರಿಸುವ ಬಿಳಿಯರ ಜೊತೆ ಗುರುತಿಸಿಕೊಳ್ಳಲು ಏಷ್ಯನರು ಇಷ್ಟಪಡುತ್ತಾರೆ; ಹೀಗಾಗಿ ಅಲ್ಲಿನ ಅವನತಿಯ ಸಮಾಜ ವ್ಯವಸ್ಥೆಯ ಬಗ್ಗೆ ಮಾತನಾಡುವ ಬದಲು ಹೊಗಳಿ ಹೇಳುತ್ತಾರೆ.

ಅಮೆರಿಕಾದ ವಿದೇಶೀ ಸಂಬಂಧಗಳೂ ಅತ್ಯಂತ ಸ್ವಹಿತಾಸಕ್ತಿಯಿಂದ ಕೂಡಿದ್ದು. ಅವರು ಭಾರತದೊಂದಿಗೆ ಹಾಗೂ ಪಾಕಿಸ್ತಾನದೊಂದಿಗೆ ಹೊಂದಿರುವ ವ್ಯವಹಾರಗಳಲ್ಲಿ ಅವನ್ನು ನಾವು ಅಂದಾಜು ಮಾಡಬಹುದಾಗಿದೆ. ಚೀನವೇ ಅವರ ಪ್ರಧಾನ ವೈರಿ. ಅದರ ವಿರುದ್ಧ ಕೂಟಕ್ಕೆ ಭಾರತ ಬೇಕು ರಷ್ಯಾದ ವಿರುದ್ಧವೂ ಅವರು ಕಟ್ಟುತ್ತಿರುವ ಕೂಟದಲ್ಲಿ ಭಾರತವನ್ನು ಸೆಳೆಯಲು ಯತ್ನಿಸುತ್ತಿದ್ದಾರೆ. ಪಾಕಿಸ್ತಾನ ಈಚೆಗೆ ಅಮೆರಿಕದ ಕುತಂತ್ರವನ್ನು ಅರ್ಥಮಾಡಿದಂತಿದೆ. ಭಾರತವೂ ಜಾಣ ನಡೆ ತೋರುತ್ತಿದೆ.

33 ಕೋಟಿ ಜನಸಂಖ್ಯೆಯುಳ್ಳ ಅಮೆರಿಕಾದಲ್ಲಿ ಮಾನವ ಹಕ್ಕುಗಳ ದಮನ, ದಬ್ಬಾಳಿಕೆಗಳಿಂದ ಹಿಂಸೆ, ಅಪರಾಧಗಳು ಹೆಚ್ಚಾಗಿದ್ದು ಇಪ್ಪತ್ತು ಲಕ್ಷಕ್ಕೂ ಹೆಚ್ಚು ಮಂದಿ ಜೈಲಲ್ಲಿದ್ದಾರೆ. ಅದಕ್ಕೆ ಹೋಲಿಸಿದರೆ ಅಮೆರಿಕಾದ ಜನಸಂಖ್ಯೆಯ ನಾಲ್ಕು ಪಟ್ಟು ಜನಸಂಖ್ಯೆಯುಳ್ಳ ಭಾರತದಲ್ಲಿ ಜೈಲಲ್ಲಿ ಇರುವವರ ಸಂಖ್ಯೆ ನಾಲ್ಕು ಲಕ್ಷ ಮಾತ್ರ. ನಮ್ಮ ದೇಶದಲ್ಲಿ ಸರ್ವಾಧಿಕಾರ ಹೆಚ್ಚುತ್ತಿರುವ ಈ ಸನ್ನಿವೇಶದಲ್ಲೂ ಅಮೆರಿಕಾದಲ್ಲಿನ ಆಡಳಿತದ ಬಗ್ಗೆ ಪ್ರಜಾಪ್ರಭುತ್ವ ಎಂಬ ಭ್ರಮೆಯನ್ನು ನಾವು ತೊರೆಯಬೇಕಾಗಿದೆ ಎಂಬುದಾಗಿ ಡಾ. ಅಮರ್ ಕುಮಾರ್ ವಿವರಿಸಿದರು.

ಸಂವಾದದಲ್ಲಿ ಡಾ. ಕೃಷ್ಣಪ್ಪ ಕೊಂಚಾಡಿ, ಕೆ. ರಾಘವ, ಶಾಮಸುಂದರ ರಾವ್, ಸುಕುಮಾರ್ ತೊಕ್ಕೋಟು, ಕೆ. ಪ್ರಭಾಕರ, ಸುನಿಲ್ ಕುಮಾರ್ ಬಜಾಲ್, ಪ್ರದೀಪ್, ಕೆ. ಯಾದವ ಶೆಟ್ಟಿ ಭಾಗವಹಿಸಿದ್ದರು

ವಾಸುದೇವ ಉಚ್ಚಿಲ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಮುನೀರ್ ಕಾಟಿಪಳ್ಳ ಅತಿಥಿಗಳನ್ನು ಪರಿಚಯಿಸಿ ಪ್ರಾಸ್ತಾವಿಕ ಮಾತುಗಳನ್ನು ಆಡಿದರು.

ವರದಿ: ವಾಸುದೇವ ಉ.

ಶ್ರೀನಿವಾಸ ಬಜಾಲ್ 20ನೇ ವರ್ಷದ ಸಂಸ್ಮರಣೆ

ಡಿವೈಎಫ್ಐ ಮುಖಂಡ ಕಾಂ. ಶ್ರೀನಿವಾಸ ಬಜಾಲ್ ಅವರು ಹಿಂದುತ್ವವಾದಿ ಹಂತಕರಿಗೆ ಬಲಿಯಾದ ನೆನಪಿಗೆ ಡಿವೈಎಫ್ಐ ಬಜಾಲ್-ಪಕ್ಕಲಡ್ಕ ಘಟಕವು ಪ್ರತಿವರ್ಷವೂ ರಕ್ತದಾನ ಶಿಬಿರವನ್ನು ಹಾಗೂ ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ಅತಿ ಹೆಚ್ಚು ಅಂಕಗಳಿಸಿದ ಸ್ಥಳೀಯ ವಿದ್ಯಾರ್ಥಿಗಳಿಗೆ ಸನ್ಮಾನ ಕಾರ್ಯಕ್ರಮವನ್ನು ನಡೆಸಿಕೊಂಡು ಬರುತ್ತಿದೆ. ಈ ವರ್ಷದ್ದು 20 ನೇ ಸಂಸ್ಮರಣ ಕಾರ್ಯಕ್ರಮವಾಗಿದ್ಧು ಜೂನ್ 19 ರಂದು "ಕೋಮುವಾದ ವಿರೋಧಿ ಅಭಿಯಾನ-ಸಾಮರಸ್ಯ ಸಭೆ"ಯಾಗಿ ಆಚರಿಸಲಾಯಿತು.



ಬಜಾಲು ಪಕ್ಕಲಡ್ಕ ಮೈದಾನದಲ್ಲಿ ನಡೆದ ಸಾಮರಸ್ಯ ಸಭೆಯನ್ನುದ್ದೇಶಿಸಿ ಚಿಂತಕ ಪ್ರೊ. ಕೆ. ಫಣಿರಾಜ್ ಮಾತನಾಡಿದರು. ಶ್ರೀನಿವಾಸ್ ಬಡ ಕುಟುಂಬದಿಂದ ಬಂದವರು. ಮತೀಯ ಶಕ್ತಿಗಳಿಗೆ ಬಲಿಯಾಗುತ್ತಿದ್ದ ಯುವಜನರಲ್ಲಿ ಏಕತೆಯ ವಿಚಾರವನ್ನು ಪ್ರಚಾರ ಮಾಡುತ್ತಿದ್ಧರು. ಇದನ್ನು ಸಹಿಸದ ಮತೀಯ ಶಕ್ತಿಗಳು, ಹಿಂದುತ್ವವಾದಿ ರಾಜಕೀಯ ಶಕ್ತಿಗಳು ಅವರನ್ನು ಕೊಂದವು.

ಅವರನ್ನು ಯಾರೂ ಹೊರಗಿನವರು ಕೊಲ್ಲಲಿಲ್ಲ. ನಮ್ಮ ಮನೆಯ ಮಕ್ಕಳನ್ನು ಹಿಂದುಳಿದ ವರ್ಗದ ಬಡವರ ಮಕ್ಕಳೇ ಕೊಲ್ಲುತ್ತಾರೆ ಎಂದಾದರೆ ಆ ದೇಶಕ್ಕೆ ಗಂಡಾಂತರ ಬಂದಿದೆ ಎಂದರ್ಥ ಎಂದು ಫಣಿರಾಜ್ ಹೇಳಿದರು.

ಈ ಪ್ಯಾಸಿಸ್ಟ್ ಸರಕಾರವು ತನ್ನ ನೀತಿಗಳನ್ನು ಪ್ರಶ್ನೆ ಮಾಡುವ



ಹೋರಾಟಗಾರರನ್ನು ಯುಎಪಿಎ ಕಾಯಿದೆಯಡಿ ಬಂಧನ ಮಾಡುತ್ತಿದೆ. ಈಗ ತೀಸ್ತಾ ಸೆತಲ್ವಾಡ್, ಆರ್.ಬಿ. ಶ್ರೀಕುಮಾರ್ ವಿರುದ್ಧವೂ ಈ ಕಾಯ್ದೆ ಹಾಕಲು ಮುಂದಾಗಿದ್ದಾರೆ. ಇಂತಹ ಸರ್ವಾಧಿಕಾರಿ ಧೋರಣೆಗಳ ವಿರುದ್ಧ ಇನ್ನಷ್ಟು ಪ್ರಬಲ ಚಳವಳಗಳು ನಡೆಯಬೇಕಾಗಿದೆ ಎಂದು ಪ್ರೊ. ಫಣಿರಾಜ್ ಅಭಿಪ್ರಾಯ ವ್ಯಕ್ತಪಡಿಸಿದರು.

ಡಿವೈಎಫ್ಐ ದ.ಕ. ಜಿಲ್ಲಾಧ್ಯಕ್ಷ ಬಿ.ಕೆ. ಇಮ್ತಿಯಾಜ್ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಡಿವೈಎಫ್ಐ ಜಿಲ್ಲಾ ಮುಖಂಡರಾದ ಸಂತೋಷ್ ಬಜಾಲ್, ರಫೀಕ್ ಹರೇಕಳ, ನವೀನ ಕೊಂಚಾಡಿ, ಕಾರ್ಮಿಕ ಮುಖಂಡರಾದ ಜೆ. ಬಾಲಕೃಷ್ಣ ಶೆಟ್ಟಿ, ಸುನಿಲ್ ಕುಮಾರ್ ಬಜಾಲ್, ಸುಕುಮಾರ್, ಸಾಮರಸ್ಯ ಮಂಗಳೂರು ಸಂಚಾಲಕಿ ಮಂಜುಳಾ ನಾಯಕ್ ಭಾಗವಹಿಸಿದ್ದರು.

ಉದಯಪುರದಲ್ಲಿನ ಹತ್ಯೆಗೆ ಖಂಡನೆ

ನೂಪುರ ಶರ್ಮಾ ಅವರು ಪೈಗಂಬರ್ ಅವರ ಬಗ್ಗೆ ಆಡಿದ ಮಾತನ್ನು ಬೆಂಬಲಿಸಿದರು ಎಂಬ ಕಾರಣಕ್ಕೆ ಉದಯಪುರದಲ್ಲಿ ಕನ್ನಯ್ಯ ಲಾಲ್ ಎಂಬುವವರನ್ನು ಇಬ್ಬರು ಮುಸ್ಲಿಂ ವ್ಯಕ್ತಿಗಳು ಶಿರಚ್ಛೇದ ಮಾಡಿದ್ದನ್ನು ನಾವು ಖಂಡಿಸುತ್ತೇವೆ. ಇದೊಂದು ಆಘಾತಕಾರಿ ಘಟನೆಯಾಗಿದೆ. ಮೂಲಭೂತವಾದವು ಮನುಷ್ಯತ್ವ ವಿರೋಧಿ ಕೃತ್ಯಗಳಿಗೆ ಕಾರಣವಾಗುವುದನ್ನು ಈ ಕೃತ್ಯವೂ ತೋರಿಸುತ್ತದೆ ಎಂದು ಸೌಹಾರ್ದ ಕರ್ನಾಟಕ, ನೀಡಿದ ಹೇಳಿಕೆಯಲ್ಲಿ ತಿಳಿಸಲಾಗಿದೆ.

ಯಾವುದೇ ಧರ್ಮವು ತಾನಾಗಿ ಹಿಂಸೆಯನ್ನು ಬೋಧಿಸುವುದಿಲ್ಲ. ಮತಧರ್ಮದ ಹೆಸರಿನಲ್ಲಿ ಕೆಲವು ವಿಕೃತರು ಇಂಥ ಹಿಂಸಾಕೃತ್ಯಗಳನ್ನು ಮಾಡುತ್ತಾರೆ. ನಮ್ಮ ದೇಶಕ್ಕೆ ಅಹಿಂಸೆಯ ದೊಡ್ಡ ಪರಂಪರೆ ಇದೆ. ನಾವು ಎಲ್ಲ ರೀತಿಯ ಹಿಂಸೆಯನ್ನು ವಿರೋಧಿಸುತ್ತೇವೆ. ಎಲ್ಲ ಧರ್ಮಗಳ ಮೂಲಭೂತವಾದವನ್ನು ಪ್ರತಿರೋದಿಸುತ್ತೇವೆ.

ನೂಪುರ ಶರ್ಮ ಅವರ ಪ್ರಚೋದನಾಕಾರಿ ಮಾತನ್ನು ನಾವು ಒಪ್ಪುವುದಿಲ್ಲ.

ಹಾಗೆಯೇ ಅವರ ಅಭಿಪ್ರಾಯವನ್ನು ಪ್ರಜಾಸತ್ತಾತ್ಮಕ ಮಾರ್ಗಗಳ ಮೂಲಕ ವಿರೋಧಿಸಬೇಕು ಎಂದು ಬಯಸುತ್ತೇವೆ.

ಉದಯಪುರದಲ್ಲಿ ಕನ್ನಯ್ಯ ಲಾಲ್ ಹತ್ಯೆ ಮಾಡಿದವರಿಗೆ ತಕ್ಕ ಶಿಕ್ಷೆಯಾಗಲಿ ಎಂದು ಆಗ್ರಹಿಸುತ್ತೇವೆ. ಹಿಂಸೆಯನ್ನು ಪ್ರಚೋದಿಸುವ ಯಾವುದೇ ವ್ಯಕ್ತಿಗಳಿಗೆ ಮತ್ತು ಯಾವುದೇ ಧರ್ಮದ ಮೂಲಭೂತವಾದಿಗಳಿಗೆ ಈ ಶಿಕ್ಷೆಯೇ ಒಂದು ಪಾಠವಾಗಲಿ ಎಂದು ಆಗ್ರಹಿಸಲಾಗಿದೆ.

ನ್ಯಾ. ವಿ.ಗೋಪಾಲಗೌಡ, ನ್ಯಾ. ಹೆಚ್. ಎನ್.ನಾಗಮೋಹನ್‌ದಾಸ್, ಪ್ರೊ. ಬರಗೂರು ರಾಮಚಂದ್ರಪ್ಪ, ಡಾ.ಕೆ. ಮರುಳಸಿದ್ದಪ್ಪ, ಡಾ.ಜಿ. ರಾಮಕೃಷ್ಣ, ಡಾ. ಸಿದ್ಧನಗೌಡಪಾಟೀಲ್, ಡಾ. ಕೆ. ಶರೀಫಾ, ನಿಸಾರ್ ಅಹಮದ್, ಐ.ಪಿ.ಎಸ್ (ನಿವೃತ್ತ), ಮಾವಳ್ಳಿ ಶಂಕರ್, ಆರ್. ಮೋಹನರಾಜು, ಬಿ.ಎಂ. ಹನೀಫ್, ಗೌರಮ್ಮ, ಬಿ. ರಾಜಶೇಖರಮೂರ್ತಿ, ಎಸ್.ವೈ. ಗುರುಶಾಂತ್ ಮುಂತಾದವರು ಹೇಳಿಕೆ ನೀಡಿದ್ದಾರೆ. ●

ಸೇವಾ ಖಾಯಂಗೆ ಪೌರ ಕಾರ್ಮಿಕರ ಮುಷ್ಕರ- ಸಿಪಿಐ(ಎಂ) ಬೆಂಬಲ

ಹತ್ತಾರು ವರ್ಷಗಳಿಂದ ನಗರ-ಪಟ್ಟಣಗಳಲ್ಲಿ ಜನತೆಗೆ ಮೂಲಭೂತ ನಾಗರಿಕ ಸೌಲಭ್ಯಗಳಾದ ಸ್ವಚ್ಚತೆ, ನೀರು ಸರಬರಾಜು, ಬೀದಿ ದೀಪಗಳ ನಿರ್ವಹಣೆಗಾಗಿ ದುಡಿಯುತ್ತಿರುವ ಮುನಿಸಿಪಲ್ ಕಾರ್ಮಿಕರು ತಮ್ಮ ಸೇವೆಗಳ ಖಾಯಂಮಾತಿಗೆ ಜುಲೈ 1, 2022 ರಿಂದ ನಡೆಸುತ್ತಿರುವ ಮುಷ್ಕರಕ್ಕೆ ಸಿ.ಪಿ.ಐ(ಎಂ) ಕರ್ನಾಟಕ ರಾಜ್ಯ ಸಮಿತಿ ತನ್ನ ಸಂಪೂರ್ಣ ಬೆಂಬಲವನ್ನು ಸೂಚಿಸಿದೆ.

ಅಧುನಿಕ ತಾಂತ್ರಿಕತೆಯ ನಡುವೆಯು ಕಳೆದ 10 ವರ್ಷಗಳಲ್ಲಿ ಮ್ಯಾನ್ ಹೋಲ್ ಮತ್ತು ಮಲದ ಗುಂಡಿಗಳಲ್ಲಿ ಬಿದ್ದು 80ಕ್ಕೂ ಹೆಚ್ಚು ಜನ ಪೌರಕಾರ್ಮಿಕರು ತಮ್ಮ ಅಮೂಲ್ಯವಾದ ಜೀವಗಳನ್ನು ಕಳೆದುಕೊಂಡಿರುವುದು ನಾಗರೀಕ ಸಮಾಜ - ಮತ್ತು ಸರ್ಕಾರಗಳು ಗಂಭಿರವಾಗಿ ಪರಿಗಣಿಸಬೇಕಾಗಿದೆ ಮತ್ತು ಇದಕ್ಕೆ ಅಂತಿಮ ಹಾಡಬೇಕಾಗಿದೆ ಎಂದು ಸಿಪಿಐ(ಎಂ) ತನ್ನ ಕಳವಳ-ಕಾಳಜಿಯನ್ನು ವ್ಯಕ್ತಪಡಿಸಿದೆ.

ಘನತೆಯಿಂದ ಬದುಕಲು ಬೇಕಾದ ವೇತನ, ಅತ್ಯಗತ್ಯವಾದ ಸುರಕ್ಷಾ ಸಲಕರಣೆಗಳು, ಕಾರ್ಮಿಕರ ಕಾನೂನುಗಳ ಅನ್ವಯ 8 ಗಂಟೆ ಕೆಲಸ, ಹೆಚ್ಚುವರಿ ಕೆಲಸಕ್ಕೆ ಹೆಚ್ಚುವರಿ ವೇತನ, ವಾರದ ರಜೆ, ಸಂದಾರ್ಭಿಕ ರಜೆ, ಗಳಿಕೆ ರಜೆ, ಸಂಬಳದ ಚೀಟಿ, ಗುರುತಿನ ಚೀಟಿ, ಪಿ,ಎಫ್./ಇ.ಎಸ್.ಐ. ಪಾವತಿಗಳಲ್ಲಿ ವಂಚನೆ ಕುಡಿಯುವ ನೀರು, ಶೌಚಾಲಯ ಇತ್ಯಾದಿ ಇಲ್ಲದೆ ದಾರುಣವಾಗಿ ಬದುಕುವಂತಹ ಸ್ಥಿತಿ ಪೌರಕಾರ್ಮಿಕರದಾಗಿದೆ. ನಿರಂತರವಾಗಿ ಹಲವು ಸಂಘಟನೆಗಳು ಹತ್ತಾರು ವರ್ಷಗಳಿಂದ ಖಾಯಮಾತಿ ನಡೆಸುತ್ತಿರುವ ಹೋರಾಟದ ಸಮಯದಲ್ಲಿ ಸರ್ಕಾರ ಖಾಯಂ ಮಾಡುವ ಭರವಸೆ ಮಾತ್ರ ಅಲ್ಲೇ ನಿಂತುಹೋಗಿದೆ. ಬದಲಿಗೆ ನೇರ ನೇಮಕಾತಿ, ನೇರ ಪಾವತಿ ಎಂದು ಹಾದಿ ತಪ್ಪಿಸಲಾಗುತ್ತಿದೆ. ಅಲ್ಲದೆ ಕಾರ್ಮಿಕರ ಒಗ್ಗಟ್ಟನ್ನು ಒಡೆಯಲಾಗುತ್ತಿದೆ. ಮುಷ್ಕರ ತೆರಳಿರುವ ಕಾರ್ಮಿಕರ ಐಕ್ಯತೆಯನ್ನು ಒಡೆಯಲು ಸರ್ಕಾರ 4500 ಜನ ಪೌರ ಕಾರ್ಮಿಕರ ಮಾತ್ರ ಖಾಯಂ ಮಾಡುವುದಾಗಿ ಹೇಳಿರುವ ಕ್ರಮ ಸರಿಯಾದ್ದುದಲ್ಲ ಎಂದಿರುವ ಸಿಪಿಐ(ಎಂ) ರಾಜ್ಯ ಸಮಿತಿ ಜನತೆಯ ಆರೋಗ್ಯ ಮತ್ತು ನಾಗರಿಕರ ಹಿತ ದೃಷ್ಟಿಯಿಂದ ಮುನಿಸಿಪಲ್ ಕಾರ್ಮಿಕರ ನ್ಯಾಯ ಸಮ್ಮತ ಹಕ್ಕೋತ್ತಾಯಗಳನ್ನು ಪರಿಗಣಿಸುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿದೆ. ●

ಅಸ್ಮಿತತೆಯ ಹಿಂದಿದೆ ಮಹಾ ವಂಚನೆ...... ಪುಟ 3 ರಿಂದ

ಅಲ್ಲಿಯೇ ದಟ್ಟವಾಗಿ ವಾಸಿಸುವ ಆದಿವಾಸಿಗಳನ್ನು ಒದ್ದೋಡಿಸಲಾಗುತ್ತಿದೆ. ಕನಿಷ್ಠ ಪುನರ್ ವಸತಿ ಕಲ್ಪಿಸುವ ಕಾನೂನಿನ ಅಂಶವನ್ನು ಕಾರ್ಪೋರೇಟ್ ಕಂಪನಿಗಳ ಪರ ತಿದ್ದುಪಡಿ ಮಾಡಿ ಕಾನೂನನ್ನು ಅಂಗವಿಕಲ ವನ್ನಾಗಿಸಲಾಗಿದೆ. ಆದಿವಾಸಿಗಳ ಬದುಕು ಮತ್ತು ಪಾರಂಪರಿಕ ಹಕ್ಕುಗಳು, ಸಂಸ್ಕೃತಿಯನ್ನು ಸಂರಕ್ಷಿಸುವ ಅರಣ್ಯ ಹಕ್ಕುಗಳ ಕಾಯ್ದೆಯ ಜಾರಿಯನ್ನು ನಿರರ್ಥಕಗೊಳಿಸಿದೆ. ಜನ ಸಂಖ್ಯೆಯ ಪ್ರಮಾಣಕ್ಕೆ ಅನುಗುಣವಾಗಿ ಮೀಸಲಾತಿಯ ಪ್ರಮಾಣವನ್ನು ಹೆಚ್ಚಿಸಲು ಸಿದ್ಧವಿಲ್ಲ, ಬದ್ಧವಿಲ್ಲ. ಇಂತಹ ಪಾತಕ ಕೃತ್ಯಗಳಿಗೆ ಪಶ್ಚಾತಾಪ ಎನ್ನುವಂತೆ, ಮಹಾಪರಾಧ ಗಳನ್ನು ಮುಚ್ಚಿಕೊಳ್ಳಲು ಗುರಾಣಿಯಂತೆ ಬುಡಕಟ್ಟು ಸಮುದಾಯದ ಆದಿವಾಸಿ ಮಹಿಳೆಯ ಆಯ್ಕೆಯೂ ಆಗಿದೆ.

ಭಾರತದ ರಾಜಕಾರಣದ ಮುಂದೆ ಭಾರತದ ಸಂವಿಧಾನ ಮತ್ತು ಬಹು ವೈವಿಧ್ಯತೆಗಳ ಸಮಾಜವನ್ನು ಈಗಿನ ಸ್ವರೂಪದಲ್ಲಿ ಉಳಿಸಿಕೊಳ್ಳುವುದು, ಒಕ್ಕೂಟದ ತತ್ವವನ್ನು ಎತ್ತಿ ಹಿಡಿದು ಮತ ನಿರಪೇಕ್ಷತೆ ಮತ್ತು ಪ್ರಜಾಪ್ರಭುತ್ವವನ್ನು ಗಟ್ಟಿ ದನಿಯಲ್ಲಿ ಪ್ರತಿಪಾದಿಸಿ ಸಂವಿದಾನದ ನೆಲೆಯಲ್ಲಿ ಸರಿ ತಪ್ಪುಗಳ ಮೌಲ್ಯಮಾಪನ ಮಾಡಿ ಹೋರಾಡ ಬಲ್ಲ ಬದ್ಧತೆಯ ರಾಷ್ಟ್ರಪತಿ ಇಂದಿನ ಅವಶ್ಯಕತೆ ಎನ್ನುವುದನ್ನು ಮರೆಸಲು ಅವರು ಬಯಸುತ್ತಾರೆ. ಬಿಜೆಪಿ ಬುಡಕಟ್ಟು ಅಸ್ಮಿತೆಯನ್ನು ಬಳಸಿ ತನಗೆ ಬೇಕಾದ ರಬ್ಬರ್ ಸ್ಟ್ಯಾಂಪ್ ರಾಷ್ಟ್ರಪತಿಯನ್ನು ಹೊಂದಲು ಬಯಸುತ್ತಿದೆ. ತನ್ನ ಎಲ್ಲಾ ಕುಕೃತ್ಯಗಳಿಗೂ ಅಂಗೀಕಾರ ಪಡೆಯುವ ಅಗಾಧ ಕ್ರೂರ ಯೋಜನೆ ಹೊಂದಿರುವುದನ್ನು ಕೇವಲ ಅಸ್ಮಿತತೆಯ ರಾಜಕಾರಣದಲ್ಲಿ ಮರೆಮಾಚುವುದು ಮಹಾದ್ರೋಹ. ●

ಮಂಡ್ಯ: ಕಗ್ಗತ್ತಲು ಪಸರಿಸುವ ಕೋಮುವಾದ

ಮುಂಬರುವ ಚುನಾವಣೆಯಲ್ಲಿ ಹೇಗಾದರೂ ಮಾಡಿ ದಕ್ಷಿಣ ಕರ್ನಾಟಕವನ್ನು ಪೂರ್ಣ ವಶಪಡಿಸಿಕೊಳ್ಳಬೇಕೆಂದು ಗೃಹ ಸಚಿವ ಅಮಿತ್‌ಶಾ ರವರು ಕಾರ್ಯತಂತ್ರದ ಯೋಜನೆಯನ್ನು ಬಿಜೆಪಿಗೆ ನೀಡಿದ್ದಾರೆ. ಸೆಕ್ಯುಲರ್ ಶಕ್ತಿಗಳ ನೆಲೆಯಲ್ಲೀಗ ಕೋಮುವಾದದ ಕತ್ತಲೆಯ ಬಿಳಲುಗಳು ಚಾಚುತ್ತಿವೆ.

ಟಿ.ಎಲ್.ಕೃಷ್ಣೇಗೌಡ

ಬಾಂಬೆ ಬಾಯ್ ನಾರಾಯಣಗೌಡರು ಬಿಜೆಪಿ ಪಾಲಾಗುವವರೆಗೂ ಮಂಡ್ಯ ಜಿಲ್ಲೆಯಲ್ಲಿ ಬಿಜೆಪಿ ಒಂದು ಶಾಸಕ ಸ್ಥಾನವನ್ನೂ ಗೆಲ್ಲಲು ಆಗಿರಲಿಲ್ಲ. ಬಹಳ ದೀರ್ಘಕಾಲದಿಂದ ಜಿಲ್ಲೆಯ ರಾಜಕಾರಣ ಕಾಂಗ್ರೆಸ್ ಮತ್ತು ಜನತಾದಳ ಅಥವಾ ಈಗಿನ ಜೆಡಿಎಸ್ ನಡುವಿನ ರಾಜಕೀಯ ಪೈಪೋಟಿ, ಸ್ಪರ್ದೆಗೆ ಸಾಕ್ಷಿಯಾಗಿದೆ. ಇಡೀ ಜಿಲ್ಲೆಯಲ್ಲಿ ಒಂದು ಜಿಲ್ಲಾ ಪಂಚಾಯತಿ ಸ್ಥಾನ ಮತ್ತು ಎಲ್ಲೋ ಒಂದೊಂದು ತಾಲ್ಲೂಕು ಪಂಚಾಯಿತಿ, ಪುರಸಭೆಯ ಸ್ಥಾನಕಷ್ಟೇ ಸೀಮಿತವಾಗಿದ್ದ ಬಿಜೆಪಿ ನಿಧಾನಕ್ಕೆ ಪಾದವೂರುತ್ತಿದೆ. ಮಂಡ್ಯ ಜಿಲ್ಲೆಯಲ್ಲಿ ಕೋಮುವಾದಿ ರಾಜಕಾರಣಕ್ಕೆ ನೆಲೆ ಸಿಗದಿರಲು ಕಾರಣ ಮುಖ್ಯವಾಗಿ ಜಿಲ್ಲೆಯ ಆರ್ಥಿಕತೆ ಬೇಸಾಯವನ್ನು ಆಧರಿಸಿರುವುದು ಮತ್ತು ಫ್ಯಾಸಿಸ್ಟ್ ವಿಚಾರಗಳಿಗೆ ತೀವ್ರವಾಗಿ ಪಕ್ಕಾಗುವ ಮಧ್ಯಮ ವರ್ಗವೊಂದು ದೊಡ್ಡ ಸಂಖ್ಯೆಯಲ್ಲಿ ಇಲ್ಲದಿರುವುದು. ಜಿಲ್ಲೆಯ ಆಸ್ತಿವಂತ ಮತ್ತು ಸಾಮಾಜಿಕವಾಗಿ ಪ್ರಭಾವಶಾಲಿಯಾಗಿರುವ ಒಕ್ಕಲಿಗರು ಜೆಡಿಎಸ್ ಪಕ್ಷದ ಜೊತೆ ಗುರುತಿಸಿಕೊಂಡಿದ್ದಾರೆ ಮತ್ತು ದಲಿತರು, ಅಲ್ಪಸಂಖ್ಯಾತತರು ಮತ್ತು ಹಿಂದುಳಿದ ಜಾತಿಯ ಜನ ಈಗಲೂ ಕಾಂಗ್ರೇಸ್ ಪಕ್ಷದ ಪ್ರಭಾವದಲ್ಲೇ ಇದ್ದಾರೆ.

ದಕ್ಷಿಣ ಭಾರತದಲ್ಲಿ ಅಧಿಕಾರ ಹಿಡಿಯಲು ಕರ್ನಾಟಕ ಹೆಬ್ಬಾಗಿಲು ಎಂದು ಪರಿಗಣಿಸಿದಂತೆಯೇ ಕರ್ನಾಟಕದಲ್ಲಿ ಪೂರ್ಣ ಪ್ರಮಾಣದಲ್ಲಿ ಅಧಿಕಾರ ಹಿಡಿಯಲು ಮಂಡ್ಯ ಜಿಲ್ಲೆಯನ್ನು ಹೆಬ್ಬಾಗಿಲು ಎಂದು ಬಿಜೆಪಿ ಪರಿಗಣಿಸಿದೆ. ಕರಾವಳಿ – ಮಲೆನಾಡಿನಲ್ಲಿ ಕೋಮು ಧ್ರುವೀಕರಣದ ಮೂಲಕ ನೆಲೆ ಕಂಡುಕೊಂಡ ಬಿಜೆಪಿ ಹಲವು ವರ್ಷಗಳ ಕಾಲ ಉತ್ತರ ಮತ್ತು ಮುಂಬೈ ಕರ್ನಾಟಕದಲ್ಲಿ ಹೆಚ್ಚಿನ ಸಾಧನೆಯನ್ನೇನೂ ಮಾಡಲು ಸಾಧ್ಯವಾಗಿರಲಿಲ್ಲ. ಯಾವಾಗ ಜನತಾದಳ ಇಬ್ಬಾಗವಾಗಿ ಜೆಡಿ(ಯು) ಪಕ್ಷವನ್ನು ಸಂಪೂರ್ಣವಾಗಿ ಸ್ವಾಹ ಮಾಡಿತೋ ಆಗ ಅದಕ್ಕೊಂದು ಗಟ್ಟಿ ತಳಹದಿ ನಿರ್ಮಾಣವಾಯಿತು. ಈಗಿನ ಮುಖ್ಯಮಂತ್ರಿಯೂ ಸೇರಿದಂತೆ ಉತ್ತರ ಮತ್ತು ಬಾಂಬೆ ಕರ್ನಾಟಕದ ಬಿಜೆಪಿಯ ಪ್ರಭಾವಿ ನಾಯಕರೆಲ್ಲಾ ಜನತಾ ಪರಿವಾರದ ಹಿನ್ನೆಲೆಯವರು ಎಂಬುದನ್ನು ಗಮನಿಸಬೇಕು. ಸಿಕ್ಕಿದ ಈ ಅವಕಾಶವನ್ನು ಚೆನ್ನಾಗಿಯೇ ಬಳಸಿಕೊಂಡ ಬಿಜೆಪಿ ಲಿಂಗಾಯತ ಜಾತಿ ರಾಜಕಾರಣವನ್ನು ಬಳಸಿ ತನ್ನ ಅಧಿಪತ್ಯ ಸಾಧಿಸಿದೆ.

ಹಳೇ ಮೈಸೂರು ಭಾಗದಲ್ಲಿ ಕಾಂಗ್ರೆಸ್ ಮತ್ತು ಜೆಡಿಎಸ್ ಪ್ರಮುಖ ರಾಜಕೀಯ ಶಕ್ತಿಗಳು. ಇದನ್ನು ಮುರಿಯದೆ ಬಿಜೆಪಿಯನ್ನು ಕಟ್ಟಲು ಸಾಧ್ಯವಿಲ್ಲ. ಕಾಂಗ್ರೇಸ್‌ನ ನೆಲೆಯನ್ನು ಅಷ್ಟು ಸಲೀಸಾಗಿ ಬಿಜೆಪಿ ತನ್ನ ತೆಕ್ಕೆಗೆ ತೆಗೆದುಕೊಳ್ಳುವುದು ಕಷ್ಟ. ಬಿಜೆಪಿಯ ಕೋಮುವಾದಿ ರಾಜಕಾರಣ ತೀವ್ರಗೊಂಡಂತೆಲ್ಲಾ ಕಾಂಗ್ರೆಸ್‌ನ ನೆಲೆ ಕ್ರೋಢೀಕರಣಗೊಳ್ಳುತ್ತದೆ. ಆದ್ದರಿಂದ ಜೆಡಿಎಸ್ ನೆಲೆಯನ್ನು ಅಲುಗಾಡಿಸಿದರೆ ಮಾತ್ರ ಬಿಜೆಪಿ ನೆಲೆ ಕಂಡುಕೊಳ್ಳಲು ಸಾಧ್ಯ. ಅದಕ್ಕೆ ಬೇಕಾದ ಎಲ್ಲವನ್ನೂ ಬಿಜೆಪಿ ಮತ್ತು ಸಂಘ ಪರಿವಾರ ಮಾಡುತ್ತಿದೆ. ಜೆಡಿಎಸ್ ಪಕ್ಷವು ಅವಕಾಶವಾದಿ ರಾಜಕಾರಣದಿಂದ ತನ್ನ ನೆಲೆಯನ್ನು ಬಲಿಗೊಡುತ್ತಿದೆ. ಜೆಡಿಎಸ್ ಪಕ್ಷದ ಅವಕಾಶವಾದಿತನವನ್ನು ಬಿಜೆಪಿ ಪರಿಣಾಮಕಾರಿಯಾಗಿ ಬಳಸಿಕೊಳ್ಳುತ್ತಿದೆ. ಬಿಜೆಪಿಯ ಈ ತಂತ್ರವನ್ನು ಜೆಡಿಎಸ್ ಅರ್ಥ ಮಾಡಿಕೊಳ್ಳಲು ವಿಫಲವಾಗಿದೆ. ಜೆಡಿಎಸ್ ನಾಯಕತ್ವವು ಬಿಜೆಪಿಯನ್ನು ಎದುರಿಸುವ ರಾಜಕೀಯ ಇಚ್ಛಾಸಕ್ತಿಯನ್ನು ಪ್ರದರ್ಶಿಸುತ್ತಿಲ್ಲ. ಜಿಲ್ಲಾ ರಾಜಕೀಯದಲ್ಲಿ ಜೆಡಿಎಸ್‌ನ ನಿಷ್ಕ್ರಿಯತೆ ಮತ್ತು ಅವಕಾಶವಾದಿ ವ್ಯಕ್ತಿಪ್ರತಿಷ್ಟೆಗಳ ನಡವಳಿಕೆಯಿಂದಾಗಿ ಮತ್ತು ರಾಜ್ಯ ನಾಯಕತ್ವದ ವಿವೇಕ ಶೂನ್ಯ ನಿಲುಮೆಗಳಿಂದಾಗಿ ಬಿಜೆಪಿಯು ಸಂಘಟನಾ ಮತ್ತು ರಾಜಕೀಯ ಲಾಭ ಮಾಡಿಕೊಳ್ಳುತ್ತಿದೆ.

ಜೆಡಿಎಸ್ ಪಕ್ಷವು ಅಧಿಕಾರ ಕೇಂದ್ರದ ಹತ್ತಿರ ಹೋಗಲು ಮಂಡ್ಯ ಜಿಲ್ಲೆಯ ಕೊಡುಗೆ ಅಪಾರ. ಈಗಲೂ ಜಿಲ್ಲೆಯ ಎಲ್ಲಾ ಕ್ಷೇತ್ರಗಳಲ್ಲಿ ಜೆಡಿಎಸ್ ಶಾಸಕರು ಆರಿಸಿ ಬಂದಿದ್ದರು. ನಾರಾಯಣಗೌಡರ ದೆಸೆಯಿಂದ ಕೆ.ಆರ್. ಪೇಟೆ ಬಿಜೆಪಿ ಪಾಲಾಗಿದೆ. ಯಡಿಯೂರಪ್ಪ ಮುಖ್ಯಮಂತ್ರಿಯಾಗುತ್ತಾರೆ ಎಂದಾಗಲೂ ಯಡಿಯೂರಪ್ಪನವರ ತವರೂರು ಕೆ.ಆರ್.ಪೇಟೆಯ ಜನ ಬಿಜೆಪಿಗೆ ಮಣೆ ಹಾಕಿರಲಿಲ್ಲ. ಈಗ ಶ್ರೀರಂಗಪಟ್ಟಣ, ಕೆ.ಆರ್.ಪೇಟೆ, ಮಂಡ್ಯ, ಮದ್ದೂರು ಸೇರಿದಂತೆ ಕನಿಷ್ಟ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಬಿಜೆಪಿಯನ್ನು ಗೆಲ್ಲಿಸಿಕೊಳ್ಳಲು ಸಂಘ ಪರಿವಾರ ತೀವ್ರ ಪ್ರಯತ್ನ ನಡೆಸುತ್ತಿದೆ.

ಬಿಜೆಪಿ ಮಂಡ್ಯದಲ್ಲಿ ಪ್ರದರ್ಶಿಸಿದ ಅತ್ಯಂತ ಚಾಣಾಕ್ಷ ರಾಜಕೀಯ ನಡೆ ಸುಮಲತಾ ಅಂಬರೀಶ್ ಅವರನ್ನು ಪಕ್ಷೇತರ ಅಭ್ಯರ್ಥಿಯಾಗಿ ಚುನಾವಣಾ ಕಣಕ್ಕೆ ಇಳಿಸಿದ್ದು. ಸುಮಲತಾ ಅವರನ್ನು "ಬಿಜೆಪಿ ಪ್ರಾಯೋಜಿತ ಪಕ್ಷೇತರ ಅಭ್ಯರ್ಥಿ" ಎಂದು ಸಿಪಿಐ(ಎಂ) ಬಣ್ಣಿಸಿತ್ತು. ಜೆಡಿಎಸ್ ಪಕ್ಷವನ್ನು ರಾಜಕೀಯವಾಗಿ ಹತ ಮಾಡುವ ಕಾಂಗ್ರೇಸಿನ ವಂಚಕ ರಾಜಕಾರಣ ಸುಮಲತಾ ಅವರನ್ನು ಸಂಸದರನ್ನಾಗಿ ಮಾಡಿತು. ಸುಮಲತಾ ಅವರ ಒಂದೊಂದೇ ಬಣ್ಣ ಕಳಚಿ ಅವರು ಏನು ಎಂಬುದು ನಿಚ್ಚಳವಾಗುತ್ತಿದೆ.

ಬಿಜೆಪಿ ಅಧಿಕಾರಕ್ಕಾಗಿ ಮಾತ್ರ ಆಪರೇಷನ್ ಕಮಲ ನಡೆಸದೆ, ಅಧಿಕಾರ ಇಲ್ಲದ ಕಡೆಯೂ ಆಪರೇಷನ್ ಕಮಲ ನಡೆಸುತ್ತಾ ತನ್ನ ನೆಲೆ ವಿಸ್ತರಿಸಿಕೊಳ್ಳುತ್ತಿದೆ. ಜೆಡಿಎಸ್ ಪಕ್ಷದ ಮುಖಂಡರು, ಕಾರ್ಯಕರ್ತರನ್ನೇ ಗುರಿ ಮಾಡಿಕೊಂಡು ಆಮಿಷಗಳನ್ನು ಒಡ್ಡಿ ತನ್ನತ್ತ ಸೆಳೆಯುತ್ತಿದೆ. ಮಂಡ್ಯದ ಚಂದಗಾಲು ಶಿವಣ್ಣ, ಅಶೋಕ್ ಜಯರಾಂ, ಲಕ್ಷ್ಮಿ ಅಶ್ವಿನ್‌ಗೌಡ ಹೀಗೆ. ಜೆಡಿಎಸ್ ಪಕ್ಷದಿಂದ ಗೆದ್ದಿದ್ದ ಮದ್ದೂರಿನ ಬಹುತೇಕ ಜಿಲ್ಲಾ ಪಂಚಾಯತಿ ಸದಸ್ಯರು ಬಿಜೆಪಿಗೆ ಪಕ್ಷಾಂತರ ಮಾಡಿದ ವ್ಯಕ್ತಿಯ ಜೊತೆಗಿದ್ದಾರೆ. ಅದರ ಜೊತೆಗೆ ಕ್ಯಾಸಿನೋ, ನಕಲಿ ಗೊಬ್ಬರ ಮಾರಾಟದ ಮೂಲಕ ಕೋಟ್ಯಂತರ ರೂಪಾಯಿ ಕೊಳ್ಳೆ ಹೊಡೆದಿರುವ ಹಣವಂತರನ್ನು ಬಿಜೆಪಿ ಬಳಸಿಕೊಂಡು ತನ್ನ ಕಾರ್ಯ ಸಾಧನೆ ಮಾಡುತ್ತಿದೆ. ಕುಮಾರಸ್ವಾಮಿ ಸರ್ಕಾರವನ್ನು ಕೆಡವಲು ಬಂಡವಾಳ ಹೂಡಿದ್ದ ಕ್ಯಾಸಿನೋ ಮತ್ತು ಕ್ರಿಕೆಟ್ ಬೆಟ್ಟಿಂಗ್ ಆಸಾಮಿ ಕದಲೂರು ಉದಯ್ ಈಗ ಮದ್ದೂರಿನಲ್ಲಿ ಕೋಟ್ಯಂತರ ರೂಪಾಯಿಗಳನ್ನು ನೀರಿನಂತೆ ಸುರಿದು ಜನರನ್ನು ಸೇರಿಸಿ ಕಾರ್ಯಕ್ರಮಗಳನ್ನು ಸಂಘಟಿಸುತ್ತಿದ್ದಾನೆ. ಈ ಎಲ್ಲಾ ಕಸರತ್ತುಗಳ ಹಿಂದಿರುವ ಹುನ್ನಾರ ಜೆಡಿಎಸ್ ಮತ್ತು ಕಾಂಗ್ರೇಸಿನ ಜೊತೆಗಿರುವ ಜನರನ್ನು ಆ ಪಕ್ಷಗಳಿಂದ ಬೇರ್ಪಡಿಸಿ ಬೇಕಾದಾಗ ಬಿಜೆಪಿಗೆ ದಾರೆ ಎರೆಯುವುದು.

ಒಂದು ಕಾಲದಲ್ಲಿ ವಿಧಾನಸಭಾ ಕ್ಷೇತ್ರಗಳಿಗೆ ಹಾಕಲು ಅಭ್ಯರ್ಥಿಗಳೇ ಇಲ್ಲದೆ ಪರದಾಡುತ್ತಿದ್ದ ಬಿಜೆಪಿ ಈಗ ಸರಿ ಸುಮಾರು ಜಿಲ್ಲೆಯ ಎಲ್ಲಾ ಕ್ಷೇತ್ರಗಳಲ್ಲೂ ಪ್ರಬಲ ಅಭ್ಯರ್ಥಿಗಳನ್ನೇ ಹೊಂದಿದೆ. ಇವರಲ್ಲಿ ಹೆಚ್ಚಿನವರು ಜೆಡಿಎಸ್ ಪಕ್ಷದಿಂದ ವಲಸೆ ಹೋದವರು ಎಂಬುದನ್ನು ಗಮನಿಸಬೇಕು. ಒಂದು ಕಡೆ ಅಪಾರ ಪ್ರಮಾಣದಲ್ಲಿ ಹಣ ಮತ್ತೊಂದು ಕಡೆ ಸಂಘ ನಿಷ್ಟ ಒಕ್ಕಲಿಗ ನಾಯಕರನ್ನು ಮಂಡ್ಯ ಜಿಲ್ಲೆಗೆ ಕಳಿಸುವುದು ಆ ಮೂಲಕ ಒಕ್ಕಲಿಗರನ್ನು ತನ್ನತ್ತ ಸೆಳೆಯುವುದು ಬಿಜೆಪಿ ಮಾಡುತ್ತಿರುವ ತಂತ್ರ. ಇದು ಚೆನ್ನಾಗಿಯೇ ಫಲ ಕೊಡುತ್ತಿದೆ.

ಈ ರಾಜಕೀಯ ನಡೆಗಳ ಜೊತೆಗೆ ಸಂಘ ಪರಿವಾರವನ್ನು ಬಳಸಿ ಕೋಮುವಾದಿ ಉನ್ಮಾದ ಮತ್ತು ಗಲಭೆಗಳನ್ನು ಸೃಷ್ಟಿಸುವ ಕೆಲಸ ಮಾಡಲಾಗುತ್ತಿದೆ. ಮುಖ್ಯವಾಗಿ ಶ್ರೀರಂಗಪಟ್ಟಣವನ್ನು ಕೇಂದ್ರೀಕರಿಸಿ ಆಟಗಳನ್ನು ಆಡಲಾಗುತ್ತಿದೆ. ಆ ಮೂಲಕ ಪಾಂಡವಪುರ ಉಪವಿಭಾಗ, ಮೈಸೂರು ಮತ್ತು ಮಂಡ್ಯ ನಗರದ ವರೆಗೆ ಸದಾ ಸುದ್ದಿಯಲ್ಲಿರುವ ಯೋಜನೆ ಬಿಜೆಪಿಯದ್ದು. ಶ್ರೀರಂಗಪಟ್ಟಣದಲ್ಲಿ ಹನುಮಮಾಲೆ ಹೆಸರಿನಲ್ಲಿ ಪ್ರತಿ ವರ್ಷವೂ ಒಂದಷ್ಟು ಜನರನ್ನು ಸೇರಿಸಿ ವಾತಾವರಣವನ್ನು ಉದ್ವಿಗ್ನಗೊಳಿಸಲಾಗುತ್ತಿದೆ. ಈಗ ಮೂಲೆ ಆಂಜನೇಯಸ್ವಾಮಿ ದೇವಾಲಯ ಒಡೆದು ಮಸೀದಿ ಕಟ್ಟಲಾಗಿದೆ ಎಂದು ಜನರನ್ನು ದಿಕ್ಕು ತಪ್ಪಿಸಲಾಗುತ್ತಿದೆ. ಇತ್ತೀಚೆಗೆ ಮಸೀದಿಯಲ್ಲಿ ಹನುಮ ವಿಗ್ರಹಕ್ಕೆ ಪೂಜೆ ಸಲ್ಲಿಸಲು ಅವಕಾಶ ನೀಡಬೇಕೆಂದು, ಮಂಡ್ಯದಿಂದ ಯಾತ್ರೆ ಮಾಡುತ್ತೇವೆಂದು ಹೇಳಿ ವಾತಾವರಣವನ್ನು ಸೂಕ್ಷ್ಮಗೊಳಿಸಲು ಪ್ರಯತ್ನಿಸಲಾಯಿತು. ಆದರೆ ಜಿಲ್ಲೆಯ ಪ್ರಗತಿಪರ ಚಳವಳಿಗಳು ಮತ್ತು ಜಿಲ್ಲಾಡಳಿತದ ಸಕಾಲಿಕ ಮಧ್ಯಪ್ರವೇಶದಿಂದ ಸಂಘ ಪರಿವಾರದ ಯೋಜನೆ ಈಡೇರಲಿಲ್ಲ.

ಅದೇ ರೀತಿಯಲ್ಲಿ ಮೇಲುಕೋಟೆಯ ಚಲುವರಾಯಸ್ವಾಮಿ ದೇವಸ್ಥಾನದ ಸಲಾಂ ಆರತಿ ಪೂಜೆ ವಿಷಯಕ್ಕೆ ಕೋಮು ಬಣ್ಣ ಬಳಿಯಲು ಸಂಘ ಪರಿವಾರ ಪ್ರಯತ್ನಿಸಿದೆ. ಮೇಲುಕೋಟೆಯ ಸಂಘಿ ಮನಸ್ಥಿತಿಯ ಅರ್ಚಕರು ಮತ್ತು ಜಿಲ್ಲಡಳಿತವನ್ನು ಬಳಸಿಕೊಂಡು ಸಲಾಂ ಆರತಿಯನ್ನು ಸಂಧ್ಯಾವಂದನೆ (ಸಂಧ್ಯಾ ಆರತಿ) ಎಂದು ಬದಲಾಯಿಸಬಹುದು ಎಂಬ ಶಿಫಾರಸ್ಸು ಪಡೆದುಕೊಳ್ಳಲಾಗಿದೆ. ಈ ವಿಚಾರದಲ್ಲಿ ಕೂಡ ಸಿಪಿಐಎಂ ಪಕ್ಷ ಮತ್ತು ಜನಪರ ಚಳವಳಿಗಳು ಸಕಾಲಿಕ ಮಧ್ಯಪ್ರವೇಶ ಪ್ರತಿರೋಧಿ ಮಾಡಿಸಿವೆ. ಆದರೂ ಇದು ಮುಗಿದು ಹೋದ ವಿಷಯವಲ್ಲ.

ಮಂಡ್ಯ ಜಿಲ್ಲೆಯನ್ನು ಬಿಜೆಪಿ ಮತ್ತು ಸಂಘ ಪರಿವಾರ ಕೇಂದ್ರೀಕರಿಸಿ ಕೆಲಸ ಮಾಡುತ್ತಿರುವ ಪರಿಣಾಮ ಏನೆಂದರೆ ಹಿಜಾಬ್ ವಿಚಾರದಲ್ಲಿ ನಡೆದ ಘಟನೆ. ಮಂಡ್ಯದಲ್ಲಿ ಎಂದೂ ಮಹತ್ವದ ವಿಷಯವಾಗದಿದ್ದ ಇಂತಹ ವಿಷಯಗಳು ಅಂತರರಾಷ್ಟ್ರೀಯ ಸುದ್ದಿಯಾದವು. ಹಿಜಾಬ್ ಧರಿಸಿದ ಹುಡುಗಿಯೊಬ್ಬಳನ್ನು ಸುತ್ತುವರೆದು ಕೀಟಲೆ ಮಾಡಿ ಅದನ್ನು ಚಿತ್ರಿಸಿಕೊಂಡು ಸಾಮಾಜಿಕ ಮಾಧ್ಯಮಗಳಲ್ಲಿ ಹರಿಯ ಬಿಡಲಾಯಿತು. ದಿನ ಬೆಳಗಾಗುವಷ್ಟರಲ್ಲೇ ಈ ಘಟನೆ ದೇಶ ವಿದೇಶದ ಗಮನ ಸೆಳೆಯಿತು.





ಪುಟ 11 ಕ್ಕೆ

‘ಮಂಡ್ಯ ಜಿಲ್ಲೆಯ ಸಣ್ಣಪುಟ್ಟ ಮುಖಂಡರನ್ನೂ ಭೇಟಿಯಾದ ಪ್ರಧಾನಿ’



ಲಕ್ಷ್ಮಿ ಅಶ್ವಿನ್‌ಗೌಡರೊಂದಿಗೆ


ಮಂಡ್ಯ ಜಿಲ್ಲೆಯನ್ನು ಬಿಜೆಪಿ ಎಷ್ಟು ಗಂಭೀರವಾಗಿ ಪರಿಗಣಿಸಿದೆ ಎಂಬುದಕ್ಕೆ ಮೊನ್ನೆ ಮೈಸೂರಿಗೆ ನೀಡಿದ್ದ ಪ್ರಧಾನ ಮಂತ್ರಿ ನರೇಂದ್ರ ಮೋದಿಯವರ ಬೇಟಿಯೇ ಸಾಕ್ಷಿ.

ಸಾಮಾನ್ಯವಾಗಿ ತನ್ನ ಪಕ್ಷದ ಹಿರಿಯ ನಾಯಕರು ಮತ್ತು ಚುನಾಯಿತ ಪ್ರತಿನಿಧಿಗಳನ್ನೇ ನರೇಂದ್ರ ಮೋದಿಯವರು ಮಾರು ದೂರ ನಿಲ್ಲಿಸಿ ಮಾತನಾಡುತ್ತಾರೆ. ಆದರೆ ಬಿಜೆಪಿಗೆ ನಿನ್ನೆ ಮೊನ್ನೆ ಸೇರಿದ ಅಶೋಕ್ ಜಯರಾಂ, ಲಕ್ಷ್ಮಿ ಅಶ್ವಿನ್‌ಗೌಡ ಅವರನ್ನು ಹತ್ತಿರಕ್ಕೆ ಕರೆದು ಮಾತನಾಡಿಸಿ ಬೆನ್ನು ತಟ್ಟಿದ್ದಾರೆ. ಹೆಸರಿಗೆ ಪಕ್ಷೇತರ ಸಂಸದರಾಗಿರುವ ಸುಮಲತಾ ಅವರನ್ನು ವಿಶೇಷ ಕಾಳಜಿಯಿಂದ ವಿಚಾರಿಸಿಕೊಂಡಿದ್ದಾರೆ. ದೇಶದ ಪ್ರಧಾನಿಯೇ ಮಂಡ್ಯ ಜಿಲ್ಲೆಯ ಮೇಲೆ ವಿಶೇಷ ಗಮನ ಇಟ್ಟಿದ್ದಾರೆ ಅಥವಾ ಹಾಗೆ ಇಡುವಂತೆ ಸಂಘ ಪರಿವಾರ ನಿರ್ದೇಶನ ನೀಡಿದೆ ಎಂಬುದನ್ನು ಎಚ್ಚರಿಕೆಯಿಂದ ಪರಿಗಣಿಸಬೇಕಾಗಿದೆ.

ಈ ಮೂವರಲ್ಲಿ ಅಶೋಕ್ ಜಯರಾಂ ಮಾಜಿ ಸಚಿವ, ಜನತಾದಳದ ಪ್ರಭಾವಿ ನಾಯಕರಾಗಿದ್ದ ಮತ್ತು ದೇವೇಗೌಡರ ಕುಟುಂಬದ ಭಾಗವೇ ಆಗಿದ್ದ ದಿವಂಗತ ಎಸ್.ಡಿ.ಜಯರಾಂ ಅವರ ಮಗ ಮತ್ತು ಹಾಲಿ ಒಕ್ಕಲಿಗರ ಸಂಘದ ನಿರ್ದೇಶಕ.

ಲಕ್ಷ್ಮಿ ಅಶ್ವಿನ್‌ಗೌಡ ಅವರು ದೇವೇಗೌಡರ ಕುಟುಂಬದ ಆಪ್ತರಾಗಿದ್ದ ಮತ್ತು ಸುದೀರ್ಘ ಅವಧಿಯವರೆಗೆ ಮಳವಳ್ಳಿ ತಾಲ್ಲೂಕಿನ ಜೆಡಿಎಸ್ ಅಧ್ಯಕ್ಷರಾಗಿದ್ದ ದಿವಂಗತ ಕೆಂಚೇಗೌಡರ ಮಗಳು ಮತ್ತು ಕಳೆದ ಲೋಕಸಭಾ ಚುನಾವಣೆಯಲ್ಲಿ ಜೆಡಿಎಸ್ ಟಿಕೆಟ್ ಸಿಗುತ್ತದೆ ಎಂಬ ಭರವಸೆಯ ಮೇಲೆ ಐಆರ್‌ಎಸ್ ಹುದ್ದೆಗೆ ರಾಜೀನಾಮೆ ನೀಡಿದ ಯುವ ವೈದ್ಯೆ.





ಮೀಸಲಾತಿಯನ್ನು ನೇರವಾಗಿ ರದ್ದು ಪಡಿಸುವುದು ಸಾಧ್ಯವಿಲ್ಲದ ಕಾರಣ, ಬಿಜೆಪಿ ಸರ್ಕಾರವು, ಅದನ್ನು ಅಪ್ರಸ್ತುತವನ್ನಾಗಿ ಮಾಡುತ್ತಿದೆ. ಮೀಸಲಾತಿ ಇರುವ ಸರಕಾರೀ–ಸಾರ್ವಜನಿಕ ಉದ್ಯಮಗಳ ಮೂರನೇ ಒಂದರಷ್ಟು (ಸುಮಾರು 60 ಲಕ್ಷ) ಹುದ್ದೆಗಳನ್ನು ತುಂಬದೆ ಗುತ್ತಿಗೆ/ಅರೆ–ಗುತ್ತಿಗೆ ಕಾರ್ಮಿಕರನ್ನು ನೇಮಿಸಿರುವುದು, ಸಾರ್ವಜನಿಕ ಉದ್ದಿಮೆಗಳ–ಆಸ್ತಿಗಳ ಖಾಸಗೀಕರಣ, ಉನ್ನತ ಜಾತಿಗಳ‘ಲ್ಲಿರುವ ಆರ್ಥಿಕವಾಗಿ ದುರ್ಬಲ ವರ್ಗಕ್ಕೆ (ಈ.ಡಬ್ಲ್ಯೂ.ಎಸ್) ಶೇ. 10 ರಷ್ಟು ಮೀಸಲಾತಿಯನ್ನು ಸಂವಿಧಾನದಲ್ಲಿ ಇದಕ್ಕೆ ಅವಕಾಶವಿಲ್ಲದಿದ್ದರೂ ತರಾತುರಿಯಲ್ಲಿ ಜಾರಿ ಮಾಡಿರುವುದು, ಮಾನವ ಹಕ್ಕಿನ ಪ್ರಣಾಳಿಕೆಯನ್ನು ಅಲ್ಲಗಳೆಯುತ್ತಿರುವುದು – ಇವು ಇರುವಾಗ ಇನ್ನೇನು ಸಾಕ್ಷಿ ಬೇಕು? ಎನ್ನುತ್ತಾರೆ ಪ್ರೊ.ಟಿ.ಆರ್. ಚಂದ್ರಶೇಖರ್.

ಮೀಸಲಾತಿಯನ್ನು ಅಪ್ರಸ್ತುತ ಮಾಡಲಾಗುತ್ತಿದೆಯೇ?



ಪ್ರೊ. ಟಿ.ಆರ್. ಚಂದ್ರಶೇಖರ

ಮೀಸಲಾತಿಯ ಬಗ್ಗೆ ಸೈದ್ಧಾಂತಿಕವಾಗಿ ನಂಬಿಕೆಯಿಲ್ಲದ ಚಾತುರ್ವರ್ಣವಾದಿ ಬಿಜೆಪಿ–ಆರ್.ಎಸ್.ಎಸ್. ಸರ್ಕಾರವು, ಮೀಸಲಾತಿಯನ್ನು ನೇರವಾಗಿ ರದ್ದು ಪಡಿಸುವುದು ಸಾಧ್ಯವಿಲ್ಲದ ಕಾರಣ, ಅದನ್ನು ಅಪ್ರಸ್ತುತವನ್ನಾಗಿ ಮಾಡುತ್ತಿದೆ. ಇದರ ಬಗ್ಗೆ ನಮಗೆ ಯಾವ ಅನುಮಾನವೂ ಇರಬೇಕಾಗಿಲ್ಲ. ಈ ಮಾತನ್ನು ಆಳವಾಗಿ ವಿಶ್ಲೇಷಣೆ ಮಾಡುವ ಅಗತ್ಯವಿದೆ. ಸಂವಿಧಾನದಲ್ಲಿ ಪರಿಶಿಷ್ಟ ಜಾತಿ(ಪ.ಜಾ.) ಮತ್ತು ಪರಿಶಿಷ್ಟ ಪಂಗಡ (ಪ.ಪಂ.) ಗಳಿಗೆ ಮೀಸಲಾತಿ ನೀಡಲಾಗಿದೆ. ಆದರೆ ಇಂದಿನ ಬಿಜೆಪಿ–ಆರ್‌ಎಸ್‌ಎಸ್ ಸರ್ಕಾರದ ಸೈದ್ಧಾಂತಿಕ ನೆಲೆಯಾದ ಚಾತುರ್ವರ್ಣ ವ್ಯವಸ್ಥೆಯಲ್ಲಿ ದಲಿತರಿಗೆ ಮತ್ತು ಆದಿವಾಸಿಗಳಿಗೆ ಅವಕಾಶ–ಸ್ಥಾನವನ್ನೇ ನೀಡಿರಲಿಲ್ಲ. ಯಾರಿಗೆ ಚಾತುರ್ವರ್ಣ ವ್ಯವಸ್ಥೆಯಲ್ಲಿ ಅವಕಾಶವಿಲ್ಲವೋ ಅವರಿಗೆ ಚಾತುರ್ವರ್ಣದಲ್ಲಿ ವಿಶ್ವಾಸವಿರುವ ಸರ್ಕಾರವು ಹೇಗೆ ತಾನೆ ಮೀಸಲಾತಿ ಸವಲತ್ತನ್ನು ನೀಡುತ್ತದೆ? ಇದೊಂದು ಗಂಭೀರವಾದ ಪ್ರಶ್ನೆ. ಬಿಜೆಪಿ–ಆರ್‌ಎಸ್‌ಎಸ್ ಸರ್ಕಾರಗಳು ತಮಗೆ ಚಾತುರ್ವರ್ಣ ವ್ಯವಸ್ಥೆಯಲ್ಲಿ ನಂಬಿಕೆಯಿಲ್ಲ– ಅದೊಂದು ಸನಾತನ ಅಸಮಾನತೆ ಪ್ರಣಾಳಿಕೆ ಎಂಬುದನ್ನು ಘೋಷಿಸಲು ಸಿದ್ಧವಿದೆಯೇ? ಇಲ್ಲ.


ಮೀಸಲಾತಿಯನ್ನು ಅಪ್ರಸ್ತುತಗೊಳಿಸುತ್ತಿರುವದಕ್ಕೆ ಮೊಟ್ಟ ಮೊದಲ ನಿದರ್ಶನವೆಂದರೆ ಉನ್ನತ ಜಾತಿಗಳಲ್ಲಿರುವ ಆರ್ಥಿಕವಾಗಿ ದುರ್ಬಲ ವರ್ಗಕ್ಕೆ (ಈ.ಡಬ್ಲ್ಯೂ.ಎಸ್.) ಶೇ.10 ರಷ್ಟು ಮೀಸಲಾತಿ ನೀಡಿರುವ ಕ್ರಮದಲ್ಲಿ ಕಾಣಬಹುದು. ಸಂವಿಧಾನದಲ್ಲಿ ಮೀಸಲಾತಿಯನ್ನು ಆರ್ಥಿಕ ಮಾನದಂಡದ ಮೇಲೆ ನೀಡುವುದಕ್ಕೆ ಅವಕಾಶವಿಲ್ಲ. ಮೀಸಲಾತಿಯು ಬಡತನ ನಿವಾರಣಾ ಕಾರ್ಯಕ್ರಮವಲ್ಲ. ಮೇಲಾಗಿ ಉನ್ನತ ಜಾತಿಗಳಲ್ಲಿನ ಆರ್ಥಿಕವಾಗಿ ದುರ್ಬಲವಾಗಿರುವ ವರ್ಗವು ಮೀಸಲಾತಿಯನ್ನು ಕೇಳಲಿಲ್ಲ, ಅದಕ್ಕಾಗಿ ಹೋರಾಟ ಮಾಡಲಿಲ್ಲ. ಆದರೂ ಅದಕ್ಕೆ ಮೀಸಲಾತಿಯನ್ನು ಸ್ವಯಂ ತಾನೇ ನಿರ್ಧರಿಸಿ ಬಿಜೆಪಿ–ಆರ್‌ಎಸ್‌ಎಸ್ ಸರ್ಕಾರ ಜನವರಿ 14, 2019ರಲ್ಲಿ ನೀಡಿಯೇಬಿಟ್ಟಿತು. ಇದಕ್ಕೆ ಸಂಬಂಧಿಸಿದ ಬಹುಮುಖ್ಯ ಪ್ರಶ್ನೆ: ಆರ್ಥಿಕವಾಗಿ ದುರ್ಬಲ ವರ್ಗಕ್ಕೆ ಶೇ. 10 ರಷ್ಟು ಮೀಸಲಾತಿ ಎಂಬುದನ್ನು ಯಾವ ಆಧಾರದಲ್ಲಿ ನಿರ್ಧರಿಸಲಾಯಿತು. ಈ ಪ್ರಶ್ನೆಯನ್ನು ಸರ್ವೋಚ್ಚ ನ್ಯಾಯಾಲಯವು ಕೇಳಲಿಲ್ಲ. ಮೀಸಲಾತಿಯ ಬಹುಮುಖ್ಯ ಮಾನದಂಡ ಪ್ರಾತಿನಿಧ್ಯ ನೀಡುವುದಾಗಿದೆ. ಈ ಮಾನದಂಡದ ಆಧಾರದಲ್ಲಿ ಉನ್ನತ ಜಾತಿಗಳಲ್ಲಿ ಆರ್ಥಿಕವಾಗಿ ದುರ್ಬಲ ವರ್ಗಕ್ಕೆ ಮೀಸಲಾತಿ ನೀಡುವುದು ಸಾಧ್ಯವೇ ಇಲ್ಲ. ಏಕೆಂದರೆ ಅವರು ಸಂಸತ್ತಿನಲ್ಲಿ, ವಿಧಾನ ಸಭೆಗಳಲ್ಲಿ, ಸಂಬಂಧಿಸಿದ ಮಂತ್ರಿಮಂಡಳಗಳಲ್ಲಿ, ಉದ್ಯೋಗಗಳಲ್ಲಿ, ಕೈಗಾರಿಕೋದ್ಯಮಗಳಲ್ಲಿ ಅವುಗಳ ಜನಸಂಖ್ಯೆಯ ಪ್ರಮಾಣಕ್ಕಿಂತ ಅದೆಷ್ಟೋ ಪಟ್ಟು ಹೆಚ್ಚಿನ ಪ್ರಾತಿನಿಧ್ಯ ಪಡೆದಿದ್ದಾವೆ. ಹಾಗಾದರೆ ಈಡಬ್ಲುಎಸ್‌ಗೆ ಆಧಾರವೇನು? ಏನೂ ಇಲ್ಲ. ಇದೊಂದು ಸಂವಿಧಾನ–ವಿರೋಧಿ ನಡೆಯಾಗಿದೆ, ಇದೊಂದು ರಾಜಕೀಯ ಭ್ರಷ್ಟಾಚಾರದ ನಿದರ್ಶನವಾಗಿದೆ ಮತ್ತು ಇದೊಂದು ‘ಓಟ್ ಬ್ಯಾಂಕಿ’ನ ರಾಜಕಾರಣವಾಗಿದೆ. ಈ ಮೀಸಲಾತಿಗೆ ವರಮಾನದ ಮಿತಿ ವಾರ್ಷಿಕ ರೂ. 8 ಲಕ್ಷ, ಅಂದರೆ ದಿನಕ್ಕೆ ರೂ. 2222.22. ದಿನದ ವರಮಾನ ರೂ. 2000ಕ್ಕೂ ಮೇಲ್ಪಟ್ಟವರನ್ನು ಬಡವರು ಅಥವಾ ಆರ್ಥಿಕವಾಗಿ ದುರ್ಬಲರು ಎಂದು ಹೇಗೆ ಪರಿಗಣಿಸುತ್ತೀರಿ?

ಮೀಸಲಾತಿ ಎನ್ನುವುದು ಸಂವಿಧಾನದತ್ತ ಹಕ್ಕು. ಇದು ದತ್ತಿ–ದಾನ–ಭಿಕ್ಷೆಯಲ್ಲ. ಆದರೆ ಇಂದು ಬಿಜೆಪಿ–ಆರ್‌ಎಸ್‌ಎಸ್ ಸರ್ಕಾರ ಮಾನವ ಹಕ್ಕಿನ ಪ್ರಣಾಳಿಕೆಯನ್ನು ಅಲ್ಲಗಳೆಯುತ್ತಿದೆ. ಪ್ರಧಾನಮಂತ್ರಿ ಅವರ ಕೆಳಗಿ ಮಾತುಗಳನ್ನು ಇದಕ್ಕೆ ಪುರಾವೆಯಾಗಿ ಪರಿಗಣಿಸಬಹುದು.

“--- there had been an emphasis on people’s rights in the last many years as many felt deprived of equality and justice. The demand now, he said, is that the society should deliberate on its duties and responsibilities as well” (ಸಂವಿಧಾನ ದಿವಸ್: ನವೆಂಬರ್ 26, 2019)

“-------At the same time, we also have to admit that in the 75 years after Independence, a malaise has afflicted our society, our nation and all of us. It is that we turned away from our duties and did not give them primacy. In the last 75 years, we only kept talking about rights, fighting for rights and wasting our time. The issue of rights may be right to some extent in certain circumstances, but neglecting one's duties completely has played a huge role in keeping India vulnerable” ‘ಆಜಾದೀ ಕ ಅಮೃತ ಮಹೋತ್ಸವ’ದಲ್ಲಿ ನೀಡಿದ ಉದ್ಘಾಟನಾ ಭಾಷಣ; ಜನವರಿ 20. 2022).

ಹಕ್ಕಿನ ಪ್ರಣಾಳಿಕೆಯ ಬಗ್ಗೆ ಇದು ಪ್ರಧಾನಿಗಳ ಸೈದ್ಧಾಂತಿಕ ನಿಲುವಾಗಿದೆ. ಹಕ್ಕುಗಳ ಬಗ್ಗೆ ಹೋರಾಟ ಮಾಡುವುದು ಪ್ರಧಾನಿಗಳಿಗೆ ‘ವೇಸ್ಟ್ ಆಫ್ ಟೈಮ್’ ಆಗಿದೆ ಮತ್ತು ಇದರಿಂದ ದೇಶ ದುರ್ಬಲವಾಗಿದೆಯಂತೆ. ೦ ು ್ ು ಾ ೦ ್ ನ ್ ು ್ಕ ಗ ು ರಿ ೦ ು ಾ ಗಿ ಟ್ಟು ಕೊ ೦ ಡು



ಈ ಮಾತನ್ನು ಪ್ರಧಾನಿಗಳು ಹೇಳುತ್ತಿದ್ದಾರೆ? ಈ ದೇಶದ 30 ಕೋಟಿಗೂ ಮೀರಿದ ಪ.ಜಾ. ಮತ್ತು ಪ.ಪಂ. ಸಮುದಾಯಗಳನ್ನು ಮತ್ತು ಸರಿ ಸುಮಾರು ಅಷ್ಟೇ ಇರುವ ಕಾರ್ಮಿಕ ವರ್ಗವನ್ನು ಗುರಿಯಾಗಿಟ್ಟುಕೊಂಡು ಹೇಳುತ್ತಿದ್ದಾರೆ ಎಂಬುದರ ಬಗ್ಗೆ ಅನುಮಾನಕ್ಕೆ ಆಸ್ಪದವಿಲ್ಲ. ಇದೇ ಸಿದ್ಧಾಂತವನ್ನು ವಿತ್ತ ಮಂತ್ರಿ 2019–20ರ ಬಜೆಟ್ ಭಾಷಣದಲ್ಲಿ ಹೀಗೆ ಹೇಳುತ್ತಾರೆ.

‘In the first 50 years after independence, we emphasized on Rights. Making 75 years of our independence, we should place emphasis on our Duties towards India’ (Budget Speech 2019-20. Para 105).

ಹಕ್ಕಿನ ಸಿದ್ಧಾಂತವನ್ನು, ಅದನ್ನು ಆಧಾರ ಮಾಡಿಕೊಂಡಿರುವ ಮೀಸಲಾತಿ ಪ್ರಣಾಳಿಕೆಯನ್ನು ಬಿಜೆಪಿ–ಆರ್‌ಎಸ್‌ಎಸ್ ಸರ್ಕಾರಗಳು ತಿರಸ್ಕರಿಸುತ್ತಿರುವುದಕ್ಕೆ ಇನ್ನೇನು ಪುರಾವೆ ಬೇಕು? ಮೀಸಲಾತಿಯನ್ನು ನೇರವಾಗಿ ರದ್ದು ಪಡಿಸುವುದಕ್ಕೆ ಬದಲಾಗಿ ಅದನ್ನು ಅಪ್ರಸ್ತುತಗೊಳಿಸುತ್ತಿರುವುದಕ್ಕೆ, ಅದರ ಡಾ. ಬಿ.ಆರ್. ಅಂಬೇಡ್ಕರ್ ಪ್ರಣೀತ ಸೈದ್ಧಾಂತಿಕ ನೆಲೆಯನ್ನು ಹುಸಿಗೊಳಿಸುತ್ತುರುವುದಕ್ಕೆ ಇನ್ನೇನು ಸಾಕ್ಷಿ ಬೇಕು?

ಮೀಸಲಾತಿಯನ್ನು ಇಂದಿನ ಸರ್ಕಾರಗಳು ಅಪ್ರಸ್ತುತಗೊಳಿಸುತ್ತಿರುವುದಕ್ಕೆ ಮತ್ತೊಂದು ನಿದರ್ಶನವೆಂದರೆ ಸಾರ್ವಜನಿಕ ಉದ್ದಿಮೆಗಳನ್ನು–ಸಾರ್ವಜನಿಕ ಆಸ್ತಿಗಳನ್ನು ಖಾಸಗಿಯವರಿಗೆ ಮಾರಾಟ ಮಾಡುತ್ತಿರುವುದರಲ್ಲಿ ಹಾಗೂ ಸರ್ಕಾರಿ ಇಲಾಖೆಗಳಲ್ಲಿನ ಖಾಲಿ ಹುದ್ದೆಗಳನ್ನು ತುಂಬದಿರುವುದರಲ್ಲಿ ಕಾಣಬಹುದು. ಮೀಸಲಾತಿಯ ಮೂಲ ಸರ್ಕಾರಿ ನೌಕರಿಗಳು ಮತ್ತು ಸಾರ್ವಜನಿಕ ಉದ್ದಿಮೆಗಳಲ್ಲಿನ ಹುದ್ದೆಗಳು. ಇವುಗಳನ್ನು ನಿಧಾನವಾಗಿ ಇಲ್ಲದಂತೆ ಮಾಡಲಾಗುತ್ತಿದೆ. ಸಾರ್ವಜನಿಕ ಆಸ್ತಿಗಳನ್ನು ಮಾರಾಟ ಮಾಡುವುದಕ್ಕಾಗಿಯೇ ಒಕ್ಕೂಟ ಸರ್ಕಾರವು ‘ಮಾನಿಟೈಸೇಶನ್ ಆಫ್ ಲ್ಯಾಂಡ್ ಕಾರ್ಪೊರೇಶನ್ ಎಂಬುದನ್ನು ಸ್ಥಾಪಿಸಿದೆ. ರೈಲ್ವೆಯಲ್ಲಿನ ಲಕ್ಷಾಂತರ ಎಕರೆ ಜಮೀನು, ರೈಲು ಮಾರ್ಗಗಳು, ತೈಲದ ಕೊಳವೆ ಮಾರ್ಗಗಳು, ದೂರ ಸಂಪರ್ಕ ಸ್ಥಾವರಗಳು–ಮಾರ್ಗಗಳು, ಕ್ರೀಡಾಂಗಣಗಳು, ವಿಮಾನ ನಿಲ್ದಾಣಗಳು, ಬಂದರುಗಳು, ವಿಮಾ ಸಂಸ್ಥೆಗಳು –– ಹೀಗೆ ಕಳೆದ 70 ವರ್ಷಗಳಲ್ಲಿ ನಮ್ಮ ದೇಶದ ನೂರಾರು ಕೋಟಿ ಜನರ ತೆರಿಗೆ ಹಣದಿಂದ ನಿರ್ಮಾಣ ಮಾಡಿರುವ ಅಮೂಲ್ಯ ಆಸ್ತಿ–ಜಮೀನು–ಬಂಡವಾಳವನ್ನು ಖಾಸಗಿ ಬಂಡವಳಿಗರಿಗೆ ಬೆಳ್ಳಿ ತಟ್ಟೆಯ ಮೇಲಿಟ್ಟು ಮಾರಾಟ ಮಾಡುತ್ತಿದೆ. ಇದರಿಂದಾಗಿ ಸಾರ್ವಜನಿಕ ನೌಕರಿಗಳು–ಹುದ್ದೆಗಳು ಇಲ್ಲವಾಗುತ್ತಿವೆ. ಖಾಸಗಿ–ಕಾರ್ಪೊರೇಟುಗಳು ಉದ್ಯೋಗಗಳಲ್ಲಿ ಮೀಸಲಾತಿ ನೀಡುತ್ತಿಲ್ಲ.

ಕರ್ನಾಟಕದಲ್ಲಿ ಖಾಲಿಯಿರುವ ಹುದ್ದೆಗಳ ವರ್ಗವಾರು ವಿವರ

ವರ್ಗಗಳು	ರಾಜ್ಯ ವಲಯದಲ್ಲಿನ ಖಾಲಿ ಹುದೆಗಳು	ಜಿಲ್ಲಾ ವಲಯದಲ್ಲಿನ ಖಾಲಿ ಹುದ್ದೆಗಳು	ಒಟ್ಟು ಸರ್ಕಾರಿ ಖಾಲಿ ಹುದ್ದೆಗಳು
‘ಎ’	4279	4579	8858
‘ಬಿ’	15036	4831	19867
‘ಸಿ’	76737	74146	150883
‘ಡಿ’	40288	30447	70735
ಇತರೆ	–	32	32
ಒಟ್ಟು	**138867**	**114035**	**252902**

ಮೂಲ:ಕರ್ನಾಟಕ ಬಜೆಟ್ ಸಂಪುಟಗಳು: 2021–22.ಅನುಬಂಧ ಕೋಷ್ಟಕ– ‘ಬಿ’

ಒಟ್ಟು ಮಂಜೂರಾದ 7.69 ಲಕ್ಷ ಹುದ್ದೆಗಳಲ್ಲಿ ಖಾಲಿಯಿರುವ ಹುದ್ದೆಗಳು 2.53 ಲಕ್ಷ. ಅಂದರೆ ಮಂಜೂರಾದ ಹುದ್ದೆಗಳಲ್ಲಿ ಶೇ. 32.89 ರಷ್ಟು ಹುದ್ದೆಗಳು ಖಾಲಿ ಇವೆ. ಇವುಗಳನ್ನು ತುಂಬಿದರೆ ಪ. ಜಾ(ಶೇ. 15) ಮತ್ತು ಪ. ಪಂ(ಶೇ.3)ಗಳ ಯುವಕ–ಯುವತಿಯರಿಗೆ ಕ್ರಮವಾಗಿ 37935 ಮತ್ತು 7527 ಉದ್ಯೋಗಗಳು ದೊರೆಯುತ್ತವೆ. ದಲಿತರಿಗೆ ಮತ್ತು ಆದಿವಾಸಿಗಳಿಗೆ ಉದ್ಯೋಗದ ಅವಕಾಶಗಳನ್ನು ತಪ್ಪಿಸುವುದಕ್ಕಾಗಿಯೇ ಸರ್ಕಾರಗಳು ಇಂದು ಖಾಯಂ ಉದ್ಯೋಗಗಳನ್ನು ನೀಡುವುದಕ್ಕೆ ಬದಲಾಗಿ ಗುತ್ತಿಗೆ ಮತ್ತು ಹೊರಗುತ್ತಿಗೆ ವಿಧಾನದಲ್ಲಿ ಮೀಸಲಾತಿ ನಿಯಮ ಪಾಲಿಸದೆ ನೌಕರರನ್ನು ನೇಮಿಸಿಕೊಳ್ಳುತ್ತಿದೆ. ಇಲ್ಲಿ ಸಾಮಾಜಿಕ ಭದ್ರತೆಯೂ ಇಲ್ಲ–ಉದ್ಯೋಗ ಭದ್ರತೆಯೂ ಇಲ್ಲ, ಪಿಂಚಣಿ ಸೌಲಭ್ಯವೂ ಇಲ್ಲ. ಇದನ್ನು ‘ಸರ್ಕಾರ ಪ್ರಣೀತ ಶೋಷಣೆ’ ಎಂದು ಕರೆಯಬಹುದು. ಒಂದು ರಾಜ್ಯದಲ್ಲಿಯೇ ಖಾಲಿಯಿರುವ ಹುದ್ದೆಗಳು 2.52 ಲಕ್ಷವಾದರೆ, ದೇಶದ 28 ರಾಜ್ಯಗಳು ಮತ್ತು 8 ಒಕ್ಕೂಟಾಡಳಿತ ಪ್ರದೇಶಗಳಲ್ಲಿ ಖಾಲಿ ಸರ್ಕಾರಿ ಉದ್ಯೋಗಗಳು ಎಷ್ಟಿರಬೇಕು? ಇದು ಸರಿಸುಮಾರು 60 ಲಕ್ಷ ಎಂದು ಹೇಳಲಾಗಿದೆ.

ನಮ್ಮ ಬೇಡಿಕೆ: (1). ಕರ್ನಾಟಕ ಸರ್ಕಾರವು ಖಾಲಿಯಿರುವ ಹುದ್ದೆಗಳನ್ನು ತುಂಬಬೇಕು. (2). ಹುದ್ದೆಗೆ ಗುತ್ತಿಗೆ ಕಾರ್ಮಿಕ ಪದ್ಧತಿ/ಹೊರಗುತ್ತಿಗೆ ವಿಧಾನಗಳನ್ನು ನಿಲ್ಲಿಸಬೇಕು. (3). ಖಾಸಗಿ ವಲಯದಲ್ಲಿಯೂ ಮೀಸಲಾತಿ ಜಾರಿಗೊಳಿಸಬೇಕು. (4). ಅಸಂಘಟಿತ ವಲಯದಲ್ಲಿನ ಕಾರ್ಮಿಕರಿಗೆ ಸಾಮಾಜಿಕ ಭದ್ರತೆಯನ್ನು ನೀಡಬೇಕು. (5). ಉದ್ಯೋಗವನ್ನು ಮಾನವ ಹಕ್ಕು ಎಂದು ಘೋಷಿಸಬೇಕು. (6). ದೈನಂದಿನ ಕನಿಷ್ಟ ವೇತನವನ್ನು ರೂ. 21000ಕ್ಕೆ ನಿರ್ಧರಿಸಬೇಕು. (7). ಪ.ಜಾ. ಮತ್ತು ಪ.ಪಂ. ಮಿಸಲಾತಿಯನ್ನು ಅವರ ಜನಸಂಖ್ಯೆಗೆ ಅನುಗುಣವಾಗಿ ಏರಿಸಬೇಕು. ಇದಕ್ಕಾಗಿ ಕಾಲ ವಿಳಂಬ ಮಾಡಕೂಡದು. (8). ಉದ್ಯೋಗ ನೀತಿಯು ಸರ್ಕಾರದ ಆದ್ಯತೆಯಾಗಬೇಕು (9). ಚಾತುರ್ವರ್ಣ ಪ್ರಣೀತ ಸೇವೆ/ಕರ್ತವ್ಯ ಪ್ರಣಾಳಿಕೆಯನ್ನು ಕೈಬಿಟ್ಟು ಹಕ್ಕು ಪ್ರಣೀತ ನೀತಿಯನ್ನು ಸರ್ಕಾರ ಅಳವಡಿಸಿಕೊಳ್ಳಬೇಕು.

ಉದಯಪುರ ಹತ್ಯೆ: ಅಪರಾಧಿಗಳನ್ನು ಶಿಕ್ಷಿಸಿ ತೀಸ್ತಾ, ಜುಬೇರ್ ಮತ್ತು ಶ್ರೀಕುಮಾರ್ ಅವರನ್ನು ಬಿಡುಗಡೆ ಮಾಡಿ



ರಾಜಾಸ್ತಾನ ರಾಜ್ಯದ ಉದಯಪುರದಲ್ಲಿ ನಡೆದ ಭೀಕರ ಹತ್ಯೆಯನ್ನು ಸಾರ್ವತ್ರಿಕವಾಗಿ ಖಂಡಿಸಲಾಗಿದೆ. ಆಡಳಿತವು ಈ ಕಗ್ಗೊಲೆ ನಡೆಸಿದವರನ್ನು ಬಂಧಿಸುವ ಕೆಲಸ ಮಾಡಿದೆ. ತಪ್ಪಿತಸ್ಥರಿಗೆ ಕಠಿಣವಾದ ಶಿಕ್ಷೆಯಾಗಬೇಕು. ದೇಶದಲ್ಲಿ ಹೆಚ್ಚುತ್ತಿರುವ ದ್ವೇಷ ಮತ್ತು ಹಿಂಸಾಚಾರದ ವಾತಾವರಣವು ನಮ್ಮ ಸಮಾಜವನ್ನು ಅಮಾನವೀಯಗೊಳಿಸುತ್ತಿದೆ. ಈ ದ್ವೇಷದ ಸುರಳಿ ಇಲ್ಲಿಗೇ ಅಂತ್ಯವಾಗಬೇಕು. ಕೇಂದ್ರ ಸರ್ಕಾರವು ಪ್ರಕರಣವನ್ನು ಎನ್.ಐ.ಎ.ಗೆ ವಹಿಸುವಂತೆ ಆದೇಶಿಸಿರುವುದು ದ್ವೇಷ ಮತ್ತು ಹಿಂಸಾಚಾರದ ಬೆಂಕಿಯು ಉರಿಯುವಂತೆ ಮಾಡಬಾರದು.

ಸಾಮಾಜಿಕ ಮಾಧ್ಯಮದಲ್ಲಿ ಕೋಮು ಭಾವೋದ್ರೇಕಗಳನ್ನು ಹುಟ್ಟುಹಾಕುವ ಗುರಿಯನ್ನು ಹೊಂದಿರುವ ನಕಲಿ/ಸುಳ್ಳು ಸುದ್ದಿಗಳು, ವಿಷಕಾರಿ ದ್ವೇಷ ಮತ್ತು ಹಿಂಸಾಚಾರದ ಕಿಡಿಹೊತ್ತಿಸುವಲ್ಲಿ ಅಪಾರ ಕೊಡುಗೆ ನೀಡುತ್ತವೆ. ಇಂತಹ ಸುಳ್ಳು ಸುದ್ದಿಗಳನ್ನು ಬಹಿರಂಗಪಡಿಸುವುದು ಮತ್ತು ಸತ್ಯಗಳನ್ನು ಜನರ ಮುಂದಿಡುವುದು ಕೋಮುದ್ವೇಷವನ್ನು ಕುಗ್ಗಿಸಲು ಕೊಡುಗೆ ನೀಡುತ್ತದೆ. 'ಆಲ್ಟ್ ನ್ಯೂಸ್' ಪೋರ್ಟಲ್ ಈ ದಿಸೆಯಲ್ಲಿ ಉತ್ತಮ ಸೇವೆಯನ್ನು ಮಾಡಿದೆ. ವಿಪರ್ಯಾಸವೆಂದರೆ ಅದರ ಸಹಸ್ಥಾಪಕ, ಮೊಹಮ್ಮದ್ ಜುಬೇರ್ ಅವರನ್ನು 2018 ರಲ್ಲಿ ಮಾಡಿದ ಒಂದು ಟ್ವೀಟ್‌ನ ಸಂಬಂಧ ಐ.ಪಿ.ಸಿ.ಯ 153ಎ (ವಿವಿಧ ಗುಂಪುಗಳ ನಡುವೆ ದ್ವೇಷವನ್ನು ಉತ್ತೇಜಿಸುವ) ಆರೋಪದ ಅಡಿಯಲ್ಲಿ ಈಗ ಬಂಧಿಸಲಾಗಿದೆ. ಸ್ಪಷ್ಟವಾಗಿ, ಮೋದಿ ಸರ್ಕಾರವು ತಪ್ಪು ಮಾಹಿತಿಯನ್ನು ಮತ್ತು ನಕಲಿ ಸುದ್ದಿಗಳನ್ನು ಬಯಲಿಗೆಳೆಯುವ ಯಾವುದೇ ಸಂಸ್ಥೆಗೆ ಹೆದರುತ್ತದೆ ಎಂಬುದು ಇಲ್ಲಿ ಸಾಬೀತಾಗುತ್ತದೆ. ಈ ಬಂಧನಕ್ಕೆ ಯಾವುದೇ ಆಧಾರವಿಲ್ಲ ಮತ್ತು ಜುಬೇರ್ ಅವರನ್ನು ಕೂಡಲೇ ಬಿಡುಗಡೆ ಮಾಡಬೇಕು.

ಜುಬೇರ್ ಬಂಧನಕ್ಕೊಳಗಾದ ದಿನ ಪ್ರಧಾನಿ ಮೋದಿಯವರು ಜಿ–7 ಶೃಂಗಸಭೆಯಲ್ಲಿ ಆಹ್ವಾನಿತರಾಗಿ ಭಾಗವಹಿಸಿದ್ದರು ಮತ್ತು ಅವರು ಅಲ್ಲಿ "ಅಭಿವ್ಯಕ್ತಿ ಮತ್ತು ಅಭಿಪ್ರಾಯದ ಸ್ವಾತಂತ್ರ್ಯಗಳನ್ನು, ಆನ್‌ಲೈನ್ ಮತ್ತು ಆಫ್‌ಲೈನ್ ಎರಡೂ ಮಾಧ್ಯಮಗಳಲ್ಲಿ ರಕ್ಷಿಸಲು ಮತ್ತು ಮುಕ್ತ ಮತ್ತು ಸ್ವತಂತ್ರ ಮಾಧ್ಯಮ ನೆಲೆಗಟ್ಟನ್ನು ರಕ್ಷಿಸುವುದನ್ನು ಖಾತ್ರಿಪಡಿಸುವ " ಜಂಟಿ ಹೇಳಿಕೆಗೆ ಸಹಿ ಹಾಕಿದರು. ಪೈಶಾಚಿಕತೆ ಮತ್ತು ದ್ವಂದ್ವವು ಇದಕ್ಕಿಂತ ಹೆಚ್ಚು ಸ್ಪಷ್ಟವಾಗಿ ಕಾಣುವುದು ಸಾಧ್ಯವಿಲ್ಲ.

ತೀಸ್ತಾ ಸೆಟಲ್ವಾಡ್, ಶ್ರೀಕುಮಾರ್ ಮತ್ತು ಸಂಜೀವ್ ಭಟ್ (ಈಗಾಗಲೇ ಬೇರೆ ಪ್ರಕರಣದಲ್ಲಿ ಜೈಲು ಸೇರಿದ್ದಾರೆ) ಬಂಧನದ ಬೆನ್ನಲ್ಲೇ ಜುಬೇರ್ ಬಂಧನವಾಗಿದೆ. 2002ರ ಗುಜರಾತ್ ಹಿಂಸಾಚಾರದ ಸಂತ್ರಸ್ತರಿಗೆ ನ್ಯಾಯಕ್ಕಾಗಿ ತೀಸ್ತಾ ನಿರಂತರವಾಗಿ ದಣಿವರಿಯದ ಹೋರಾಟ ನಡೆಸಿದರು. ಇದರಿಂದ ಹಿಂಸಾಚಾರದ ಒಟ್ಟು 68 ಪ್ರಕರಣಗಳಲ್ಲಿ 120 ಅಪರಾಧಿಗಳು ನ್ಯಾಯಾಲಯದಿಂದ ಶಿಕ್ಷೆಗೆ ಗುರಿಯಾಗುವಂತಾಯಿತು. ಭಾರತದಲ್ಲಿ ಯಾವುದೇ ಕೋಮು ಗಲಭೆಯ ಅಪರಾಧಿಗಳನ್ನು ಶಿಕ್ಷಿಸುವ ವಿಷಯದಲ್ಲಿ ಇದೊಂದು ದಾಖಲೆಯಾಗಿದೆ.

ತೀಸ್ತಾ ಅವರ ಬಂಧನವು ಜನರ ಸಾಂವಿಧಾನಿಕವಾಗಿ ಖಾತರಿಪಡಿಸಿದ ಪ್ರಜಾಸತ್ತಾತ್ಮಕ ಹಕ್ಕುಗಳ ಮೇಲಿನ ಭೀಕರ ದಾಳಿಯಾಗಿದೆ. ಭೀಕರ ಕೋಮುಗಲಭೆಗಳ ವಿಷಯದಲ್ಲಿ ಆಡಳಿತದ ಪಾತ್ರವನ್ನು ಜನರು ಪ್ರಶ್ನಿಸುವ ಧೈರ್ಯ ಮಾಡಬಾರದು ಎಂಬ ಸ್ಪಷ್ಟ ಸಂಕೇತವನ್ನು ಇದು ಕಳುಹಿಸುತ್ತದೆ.

ವಿಪರ್ಯಾಸವೆಂದರೆ, ಗುಜರಾತ್ ಪೊಲೀಸರು ತೀಸ್ತಾ ಅವರನ್ನು ಬಂಧಿಸಲು ದೇಶದ ಸರ್ವೋಚ್ಚ ನ್ಯಾಯಾಲಯವೇ ಕಾರಣವಾಯಿತು. ಗುಜರಾತ್ ಕೋಮುಗಲಭೆಯಲ್ಲಿ ಕ್ರೂರವಾಗಿ ಹತ್ಯೆಗೀಡಾದ ಮಾಜಿ ಕಾಂಗ್ರೆಸ್ ಸಂಸದ ಎಹ್ಸಾನ್ ಜಾಫ್ರಿ ಅವರ ಪತ್ನಿ ಜಾಕಿಯಾ ಜಾಫ್ರಿ ಪರವಾಗಿ ತೀಸ್ತಾ ಅವರು ನಡೆಸುತ್ತಿದ್ದ ಪ್ರಕರಣವನ್ನು ತ್ರಿಸದಸ್ಯ ಪೀಠ ವಜಾಗೊಳಿಸಿದೆ.

ಗುಜರಾತ್ ರಾಜ್ಯದ ಮುಖ್ಯಮಂತ್ರಿಯಾಗಿ ಈ ಕೋಮುಗಲಭೆಯಲ್ಲಿ ಮೋದಿಯವರ ಪಾತ್ರದ ಬಗ್ಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ತನಿಖೆ ನಡೆಸಿದ ರೀತಿಯಲ್ಲಿ ನ್ಯಾಯಾಲಯಕ್ಕೆ ಯಾವುದೇ ತಪ್ಪು ಕಂಡಿಲ್ಲ.!! ಮೋದಿಯನ್ನು ದೋಷಮುಕ್ತಗೊಳಿಸಿದ ತೀರ್ಪು, "ಕೇವಲ ರಾಜ್ಯ ಆಡಳಿತದ ವೈಫಲ್ಯ ಅಥವಾ ನಿಷ್ಕ್ರಿಯತೆ" ಯಲ್ಲಿ "ಪಿತೂರಿಯನ್ನು ಊಹಿಸಲು ಯಾವುದೇ ಆಧಾರವಿಲ್ಲ" ಎಂದು ಹೇಳುತ್ತದೆ. ಇನ್ನೂ ಕೆಟ್ಟದ್ದದ್ದೆಂದರೆ ಈ ತೀರ್ಪು ನೇರವಾಗಿ ನ್ಯಾಯವನ್ನು ಕೋರುವ ಅರ್ಜಿದಾರರನ್ನು ಆರೋಪಿಯಾಗಿ ಪರಿವರ್ತಿಸುತ್ತದೆ. "ಸಂಕುಚಿತ ಉದ್ದೇಶದಿಂದ ಕೆಲವರು ಈ ವಿಷಯದಲ್ಲಿ ಉರಿ ಹಚ್ಚಲು ಪ್ರಯತ್ನಿಸಿದರು" ಎಂದದ್ದಲ್ಲದೇ, ತೀರ್ಪು "ಇಂತಹ ಪ್ರಕ್ರಿಯೆಯ ದುರುಪಯೋಗದಲ್ಲಿ ತೊಡಗಿರುವವರೆಲ್ಲರೂ ಕಾನೂನು ಪ್ರಕಾರ ಕಾರಾಗೃಹದಲ್ಲಿರಬೇಕು ಎಂದು ಹೇಳುವ ಮೂಲಕ ಬಂಧಿಸುವಂತೆ ನಿರ್ದೇಶಿಸುತ್ತದೆ.

ಯಾವುದೇ ನ್ಯಾಯಾಲಯವು ಸ್ಥಾಪಿಸಿದ ಎಸ್.ಐ.ಟಿ.ಯ ವರದಿಯ ವಿರುದ್ಧದ ಮೇಲ್ಮನವಿಗಳು "ಪ್ರಕ್ರಿಯೆಯ ದುರುಪಯೋಗ?" ಹೇಗಾಗುತ್ತದೆ? ಇನ್ನು ಮುಂದೆ ಎಸ್.ಐ.ಟಿ. ವರದಿಗಳು ನ್ಯಾಯಾಂಗ ಮೇಲ್ಮನವಿಯ ವ್ಯಾಪ್ತಿಯಿಂದ ಹೊರಗಿರುತ್ತವೆಯೇ?

ಗುಜರಾತ್ ಎಸ್.ಐ.ಟಿ.ಗೆ ನೀಡಿರುವ ಈ 'ಕ್ಲೀನ್ ಚಿಟ್' ಅಥವಾ ದೋಷಮುಕ್ತತೆಯು ಮಾನವ ಹಕ್ಕುಗಳ ಆಯೋಗವು ಮೇ 2002 ರಲ್ಲಿ ಹೇಳಿದ್ದಕ್ಕೆ ವಿರುದ್ಧವಾಗಿದೆ. ಅಷ್ಟೇ ಅಲ್ಲ, ಏಪ್ರಿಲ್ 2004 ರಲ್ಲಿ ಬೆಸ್ಟ್ ಬೇಕರಿ ಪ್ರಕರಣದ ಸುಪ್ರೀಂ ಕೋರ್ಟ್ ತೀರ್ಪು ಹಾಗೂ ನರೋಡಾ ಪಾಟಿಯಾ ಪ್ರಕರಣದ ಕುರಿತು ಗುಜರಾತ್ ಹೈಕೋರ್ಟ್ ನೀಡಿದ ತೀರ್ಪು ಮತ್ತು ಮೋದಿಯವರ ಕುರಿತ ಎಸ್.ಐ.ಟಿ.ಯ ವಿಚಾರಣೆಯಲ್ಲಿನ ಅಸಮರ್ಪಕತೆ ಮತ್ತು ಅಸಂಗತತೆಗಳ ಕುರಿತ ತೀರ್ಪಿಗೂ ವಿರುದ್ಧವಾಗಿದೆ.

ಎನ್.ಎಚ್.ಆರ್.ಸಿ.ಯು "ತನಿಖಾ ಪ್ರಕ್ರಿಯೆಯ ವಿಶ್ವಾಸಾರ್ಹತೆ ಮತ್ತು ತನಿಖೆ ನಡೆಸುವವರ ಸಾಮರ್ಥ್ಯದಲ್ಲಿ ವ್ಯಾಪಕ ನಂಬಿಕೆಯ ಕೊರತೆಯಿದೆ..." ಎಂದು ಗಮನಿಸಿತ್ತು. ಹಾಗೂ ಮುಂದುವರೆದು, "ಆದ್ದರಿಂದ ಅಪಾಯವು ದೊಡ್ಡ ಪ್ರಮಾಣದಲ್ಲಿ ಮುಂದುವರಿಯುತ್ತದೆ ಎಂದು ಆಯೋಗವು ಎಚ್ಚರಿಸಲು ಬಯಸುತ್ತದೆ. ಮತ್ತು ಎಸಗಿದ ಅಪರಾಧಗಳನ್ನು ತನಿಖೆ ಮಾಡಲು ಮತ್ತು ವಿಚಾರಣೆಗೆ ಒಳಪಡಿಸುವ ಪ್ರಯತ್ನವು ಹೆಚ್ಚಿನ ಕೌಶಲ್ಯ ಮತ್ತು ನಿರ್ಣಯದಿಂದ ನಿರ್ದೇಶಿಸಲ್ಪಡಬೇಕು. ಹೆಚ್ಚಿನ ಸಮಗ್ರತೆ ಮತ್ತು ಸ್ವಾತಂತ್ರ್ಯದಿಂದ ಪ್ರಕ್ರಿಯೆಗಳು ಜರುಗಬೇಕು. ಇಲ್ಲದಿದ್ದರೆ ಈಗ ಆಗಿರುವಂತೆ 'ಬಾಹ್ಯ ರಾಜಕೀಯ ಮತ್ತು ಇತರ ಪ್ರಭಾವಗಳಿಂದ' ನ್ಯಾಯಾಂಗ ಪ್ರಕ್ರಿಯೆಯ ಅನಪೇಕ್ಷಿತ ಗರ್ಭಪಾತವಾದಂತಾಗುತ್ತದೆ ಎಂದಿತ್ತು.

ಸುಪ್ರೀಂ ಕೋರ್ಟ್ ತನ್ನ 2004 ರ ತೀರ್ಪಿನಲ್ಲಿ ಇನ್ನೂ ಹೆಚ್ಚು ಕಟುವಾಗಿ ಹೇಳಿತ್ತು: "ಪ್ರಕರಣದ ದಾಖಲೆಗಳ ಮೇಲೆ ಸುಮ್ಮನೇ ಕುತೂಹಲದಿಂದ ಯಾರಾದರೂ ಒಮ್ಮೆ ಕಣ್ಣು ಹಾಯಿಸಿದರೆ, ಇಲ್ಲಿ ನ್ಯಾಯ ವಿತರಣಾ ವ್ಯವಸ್ಥೆಯ ಮೇಲೆಯೇ ಸವಾರಿ

ಸುಪ್ರೀಂ ಕೋರ್ಟ್ ತನ್ನ 2004 ರ ತೀರ್ಪಿನಲ್ಲಿ ಇನ್ನೂ ಹೆಚ್ಚು ಕಟುವಾಗಿ ಹೇಳಿತ್ತು: "ಪ್ರಕರಣದ ದಾಖಲೆಗಳ ಮೇಲೆ ಸುಮ್ಮನೇ ಕುತೂಹಲದಿಂದ ಯಾರಾದರೂ ಒಮ್ಮೆ ಕಣ್ಣು ಹಾಯಿಸಿದರೆ, ಇಲ್ಲಿ ನ್ಯಾಯ ವಿತರಣಾ ವ್ಯವಸ್ಥೆಯ ಮೇಲೆಯೇ ಸವಾರಿ ಮಾಡಲಾಗುತ್ತಿದೆ ಮತ್ತು ಅಕ್ಷರಶಃ ನ್ಯಾಯಾಂಗ ವ್ಯವಸ್ಥೆಯನ್ನು ದುರುಪಯೋಗಪಡಿಸಿಕೊಳ್ಳಲು ಮತ್ತು ವಿರೂಪಗೊಳಿಸಲು ಅನುಮತಿಸಲಾಗಿದೆ ಮತ್ತು ಕುತಂತ್ರದಿಂದ ನ್ಯಾಯ ವಿತರಣಾ ವ್ಯವಸ್ಥೆಯನ್ನು ವಿಕಲಾಂಗಗೊಳಿಸಲಾಗಿದೆ ಎಂಬ ಭಾವನೆ ಬರುತ್ತದೆ.'' ಎಂದು ಹೇಳಿತ್ತು.

ಪ್ರಕಾಶ್ ಕಾರತ್

ಮಾಡಲಾಗುತ್ತಿದೆ ಮತ್ತು ಅಕ್ಷರಶಃ ನ್ಯಾಯಾಂಗ ವ್ಯವಸ್ಥೆಯನ್ನು ದುರುಪಯೋಗಪಡಿಸಿಕೊಳ್ಳಲು ಮತ್ತು ವಿರೂಪಗೊಳಿಸಲು ಅನುಮತಿಸಲಾಗಿದೆ ಮತ್ತು ಕುತಂತ್ರದಿಂದ ನ್ಯಾಯ ವಿತರಣಾ ವ್ಯವಸ್ಥೆಯನ್ನು ವಿಕಲಾಂಗಗೊಳಿಸಲಾಗಿದೆ ಎಂಬ ಭಾವನೆ ಬರುತ್ತದೆ." ಎಂದು ಹೇಳಿತ್ತು.

"ಆಧುನಿಕ–ದಿನದ 'ನೀರೋಗಳು' ಬೆಸ್ಟ್ ಬೇಕರಿ ಮತ್ತು ಮುಗ್ಧ ಮಕ್ಕಳು ಮತ್ತು ಅಸಹಾಯಕ ಮಹಿಳೆಯರು ಬೆಂಕಿಯಲ್ಲಿ ಧಗ ಧಗ ಹೊತ್ತಿ ಉರಿಯುತ್ತಿರುವಾಗ ಬೇರೆಲ್ಲೋ ನೋಡುತ್ತಿದ್ದರು ಮತ್ತು ಬಹುಶಃ ದುಷ್ಕೃತ್ಯದ ಅಪರಾಧಿಗಳನ್ನು ಹೇಗೆ ಉಳಿಸಬಹುದು ಅಥವಾ ರಕ್ಷಿಸಬಹುದು ಎಂದು ಬಹುಶಃ ಚರ್ಚಿಸುತ್ತಿದ್ದರು." ಎಂದು ಸಹ ಹೇಳಿತ್ತು.

ನರೋಡಾ ಪಾಟಿಯಾ ಪ್ರಕರಣದ ಗುಜರಾತ್ ಹೈಕೋರ್ಟ್ ತೀರ್ಪು ಎಸ್.ಐ.ಟಿ. ತನಿಖೆಯನ್ನು ನೇರವಾಗಿ ಪ್ರಶ್ನಿಸಿದೆ ಮತ್ತು ಹೀಗೆ ಹೇಳಿದೆ: "ಆದಾಗ್ಯೂ, ಪೊಲೀಸರು ಮತ್ತು ಎಸ್.ಐ.ಟಿ. ನಡೆಸಿದ ತನಿಖೆ ಅಸಮರ್ಪಕ ವಿಧಾನದ್ದಾಗಿದೆ ಮತ್ತು ಅಸಮರ್ಥ ರೀತಿಯಲ್ಲಿ ವಿಚಾರಣೆ ನಡೆಸಲಾಗಿದೆ. ಇದು ಸಂಬಂಧಪಟ್ಟ ಎಲ್ಲರ ಉದ್ದೇಶಗಳ ಬಗ್ಗೆ ಹೇಳುತ್ತದೆ."

ಆ ದಿನ ರಾತ್ರಿ ನಡೆದ ಕಾನೂನು ಮತ್ತು ಸುವ್ಯವಸ್ಥೆಯ ಕುರಿತ ಪರಿಶೀಲನಾ ಸಭೆಯಲ್ಲಿ ಮಾತ್ರ ಎಹ್ಸಾನ್ ಜಾಫ್ರಿ ಹತ್ಯೆಯಾದ ಗುಲ್ಬರ್ಗ್ ಸೊಸೈಟಿ ದಾಳಿಯ ಬಗ್ಗೆ ನಾನು ಕೇಳಿದ್ದೇನೆ ಎಂದು ಹೇಳುವ ಮೂಲಕ, ಶಸ್ತ್ರಸಜ್ಜಿತ ಗುಂಪುಗಳಿಂದ ಗುಲ್ಬರ್ಗ್ ಸಮಾಜದ ಮೇಲೆ ನಡೆಯುತ್ತಿರುವ ದಾಳಿಯ ಬಗ್ಗೆ ಆಗ ಯಾವುದೇ ಮಾಹಿತಿ ಸಿಕ್ಕಿರಲಿಲ್ಲ ಎಂದು ಮೋದಿ ಎಸ್‌ಐಟಿ ಮುಂದೆ ಹೇಳಿದರು. ಆದರೆ ಜಾಫ್ರಿ ಅವರು ಸಹಾಯಕ್ಕಾಗಿ ಮುಖ್ಯಮಂತ್ರಿ ಮೋದಿಯವರಿಗೆ ದೂರವಾಣಿ ಕರೆ ಮಾಡಿದ್ದು, ಮೋದಿ ಜಾಫ್ರಿಯವರ ಮಾತನ್ನು ಕೇಳಲಿಲ್ಲ, ವಾಸ್ತವವಾಗಿ ಮೋದಿಯವರು ಜಾಫ್ರಿಯವರನ್ನು ನಿಂದಿಸಿದರು ಎಂದು ಎಸ್.ಐ.ಟಿ.ಯ ಮುಂದೆ ಸಾಕ್ಷಿಗಳು ಸಾಕ್ಷ್ಯ ನುಡಿದರು. ಆದರೂ, ಎಸ್.ಐ.ಟಿ.ಯು ಈ ಕುರಿತು ಪ್ರಮಾಣ ಮಾಡಿ ಹೇಳಿದ ಸಾಕ್ಷಿಗಳ ಸಮ್ಮುಖದಲ್ಲಿ ಮೋದಿಯವರನ್ನು ಪಾಟಿ ಸವಾಲಿಗೆ ಒಡ್ಡದಿರಲು ನಿರ್ಧರಿಸಿತು.



ಪ್ರಸ್ತುತ ರಜಾಕಾಲದ ಪೀಠದ ತೀರ್ಪು ಹಿಂದಿನ ನ್ಯಾಯಾಂಗ ತೀರ್ಪುಗಳ ಈ ಸಂಪೂರ್ಣ ಸತ್ವವನ್ನು ನಿರ್ಲಕ್ಷಿಸುತ್ತದೆ ಮತ್ತು ತಿರಸ್ಕರಿಸುತ್ತದೆ. ಆದ್ದರಿಂದ ಇಲ್ಲಿ ನ್ಯಾಯ ಪ್ರಕ್ರಿಯೆಯ ಗರ್ಭಪಾತವಾಗಿದೆ ಎಂದೇ ಹೇಳಬೇಕಾಗುತ್ತದೆ. ತೀಸ್ತಾ ಮತ್ತು ಶ್ರೀಕುಮಾರ್ ಅವರನ್ನು ಕೂಡಲೇ ಬಿಡುಗಡೆ ಮಾಡಬೇಕು. ಸಂವಿಧಾನಬದ್ಧವಾಗಿ ಸ್ಥಾಪಿಸಲ್ಪಟ್ಟ ಸ್ವತಂತ್ರ ಸಂಸ್ಥೆಗಳು ಮತ್ತು ಪ್ರಾಧಿಕಾರಗಳ ಪಾವಿತ್ರ್ಯತೆಯನ್ನು ಎತ್ತಿಹಿಡಿಯಬೇಕು ಮತ್ತು ಬಲಪಡಿಸಬೇಕು. ನ್ಯಾಯದ ವಿತರಣೆಯಲ್ಲಿ ಇಂತಹ ಅಘಾತಕಾರಿ ಗರ್ಭಪಾತಗಳು ಸಂಭವಿಸುವ ಸ್ಥಿತಿ ಇರಲು ಸಾಧ್ಯವಿಲ್ಲ ಮತ್ತು ಇರಬಾರದು.

ಅನು: ಆರ್. ರಾಮಕೃಷ್ಣ

ಕಾರ್ಪೋರೇಟ್ –ಹಿಂದುತ್ವದ ಆಳ್ವಿಕೆ ಯಿಂದ ಸಂವಿಧಾನ ಬುಡಮೇಲು ವಿವಿಧ ಸಂಘಟನೆಗಳ ದುಂಡು ಮೇಜಿನ ಸಭೆಯ ವಿಶ್ಲೇಷಣೆ



ಜನತಂತ್ರದ ಮೂಲಕ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಪ್ರಜಾಪ್ರಭುತ್ವ, ಸಾಮಾಜಿಕ ನ್ಯಾಯ, ಧರ್ಮನಿರಪೇಕ್ಷತೆ, ಒಕ್ಕೂಟ ವ್ಯವಸ್ಥೆ ಮುಂತಾದ ಸಂವಿಧಾನದ ಮೂಲಭೂತ ಆಧಾರಸ್ಥಂಭ ಗಳನ್ನು ಹಾಗೂ ಜನತೆಯ ಪರಮಾಧಿಕಾರವನ್ನು ಖಾತರಿಪಡಿಸುವ ಸ್ವತಂತ್ರ ನ್ಯಾಯಾಂಗ, ಸ್ವಾಯತ್ತ ತನಿಖಾ ಸಂಸ್ಥೆಗಳನ್ನು ವ್ಯವಸ್ಥಿತವಾಗಿ ಹಾಳುಗೆಡುವುತ್ತಿದೆ. ಕಾನೂನು ಅಂಗೀಕರಿಸುವ ಸಂಸದೀಯ ಪರಮಾಧಿಕಾರವನ್ನು ಜನತೆಯ ಬದುಕನ್ನು ಬಲಿಗೊಡುವ ಕಾರ್ಪೊರೇಟ್ ಹಿತಗಳನ್ನು ನಗ್ನವಾಗಿ ಬೆಂಬಲಿಸುವ ಕಾಯ್ದೆಗಳನ್ನು ದೇಶದ ಮೇಲೆ ಹೇರಲು ಬಳಸುತ್ತಿದೆ. ಜನತೆಯ ಪ್ರತಿರೋಧವನ್ನು, ಭಿನ್ನಾಭಿಪ್ರಾಯದ ಸ್ವಾತಂತ್ರ್ಯ ವನ್ನು ಫ್ಯಾಸಿಸ್ಟ್ ಕ್ರಮಗಳ ಮೂಲಕ ದಮನಿಸಲಾಗುತ್ತಿದೆ.

ಹೀಗೆ ದೇಶದಲ್ಲಿ ರಾಷ್ಟ್ರೀಯ ಬಿಕ್ಕಟ್ಟು ಸೃಷ್ಟಿ ಯಾಗಿದೆ ಎಂದು 2022 ಜೂನ್ 25,26 ರಂದು ಬೆಂಗಳೂರಿನ ಗಾಂಧಿ ಭವನದಲ್ಲಿ ಎರಡು ದಿನಗಳ ಕಾಲ "ರಾಷ್ಟ್ರೀಯ ಬಿಕ್ಕಟ್ಟು–ನಾಗರಿಕ ಸಮಾಜದ ಪಾತ್ರ" ಕುರಿತು ದುಂಡು ಮೇಜಿನ ಸಭೆ ಹಾಗೂ ಜನ ಬದುಕಿನ ಸಮಾವೇಶ ನಡೆಯಿತು.

ಜನ ಸಂಗ್ರಾಮ ಪರಿಷತ್ –ಜನತಂತ್ರ ಪ್ರಯೋಗಶಾಲಾ ನೇತೃತ್ವದಲ್ಲಿ ಜನಾಂದೋಲನ ಮಹಾ ಮೈತ್ರಿ, ಸಿಟಿಜನ್ ಪಾರ್ ಡೆಮಾಕ್ರಸಿ, ಸೊಸೈಟಿ ಫಾರ್ ಕಮ್ಯುನಲ್ ಹಾರ್ಮನಿ, ಸಂಯುಕ್ತ ಹೋರಾಟ ಕರ್ನಾಟಕ ದ ಸಹಕಾರದೊಂದಿಗೆ ಸಂಘಟಿಸಿದ್ದ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಜನ ಸಂಘಟನೆಗಳ ಮುಖಂಡರು, ನಾಗರಿಕ ಹಕ್ಕುಗಳ ಕಾರ್ಯಕರ್ತರು, ಸಾಮಾಜಿಕ ಕಾರ್ಯಕರ್ತರು, ಕಾರ್ಪೊರೇಟ್ ಹಿಂದುತ್ವದ ಆಳ್ವಿಕೆಯು ಸಂವಿಧಾನವನ್ನು ಬುಡಮೇಲು ಮಾಡುತ್ತಿದ್ದು, ದೇಶದಲ್ಲಿ ಒಂದು ವಿಶಿಷ್ಟ ಸನ್ನಿವೇಶ ವನ್ನು ಉಂಟು ಮಾಡಿದೆ. ಇಂದಿರಾಗಾಂಧಿ ಪುಟ 14 ಕ್ಕೆ

ಸ್ವಾತಂತ್ರ್ಯದ 75ನೇ ವರ್ಷ

ಸ್ವಾತಂತ್ರ್ಯ ಹೋರಾಟ ಮತ್ತು ಕೋಮುವಾದಿ–ವಿಛಿದ್ರಕಾರಿ ಶಕ್ತಿಗಳು



ಭಾರತವೀಗ 75ನೇ ಸ್ವಾತಂತ್ರ್ಯೋತ್ಸವದತ್ತ ಸಾಗುತ್ತಿದೆ. ತ್ಯಾಗ, ಬಲಿದಾನಗಳಿಂದ ಗಳಿಸಿದ ಸ್ವಾತಂತ್ರ್ಯ ಕಳೆದುಕೊಳ್ಳುವ ಅಪಾಯದಲ್ಲಿ ದೇಶದ ಜನತೆ ಇದ್ದಾರೆ. ದೇಶದಲ್ಲಿ ಕೋಮುವಾದೀ ಶಕ್ತಿಗಳು ಬೆಳವಣಿಗೆ ಸ್ವಾತಂತ್ರ್ಯಕ್ಕೆ ಸಂಚಕಾರ ತರುವ ಬೆದರಿಕೆಯನ್ನು ಒಡ್ಡುತ್ತಿವೆ. ಈ ಶಕ್ತಿಗಳ ಇಂತಹ ಪಾತ್ರ ಸ್ವಾತಂತ್ರ್ಯ ಸಂಗ್ರಾಮ ಕಾಲದಿಂದಲೂ ಇದೆ ಎನ್ನುವುದನ್ನು ಐತಿಹಾಸಿಕವಾಗಿ ಗುರುತಿಸಿದ್ದಾರೆ ಲೇಖಕರು.

ಕೆ.ಎನ್. ಉಮೇಶ್

ಭಾರತದ ಕಾರ್ಮಿಕ ವರ್ಗವು ಒಂದೆಡೆ ತಾನು ಕಷ್ಟಪಟ್ಟು ಗಳಿಸಿದ ಹಕ್ಕುಗಳನ್ನು ರಕ್ಷಿಸುವ ಹೋರಾಟದಲ್ಲಿ ನವ ಉದಾರವಾದಿ ನೀತಿಗಳ ಆಕ್ರಮಣದ ವಿರುದ್ಧ, ಮತ್ತು ಮತ್ತೊಂದೆಡೆ ಪ್ರಸ್ತುತ ಆಳುವ ವರ್ಗದ ಆಳ್ವಿಕೆಯು ಉತ್ತೇಜಿಸುತ್ತಿರುವ ಹತಾಶ ವಿಛಿದ್ರಕಾರಿ ಶಕ್ತಿಗಳ ಕುತಂತ್ರದ ವಿರುದ್ಧ ವರ್ಗ ಏಕತೆಯನ್ನು ಎತ್ತಿಹಿಡಿಯುವ ಹೋರಾಟದಲ್ಲಿ ತೊಡಗಿದೆ. ಭಾರತ ಸ್ವಾತಂತ್ರ್ಯದ 75 ನೇ ವರ್ಷದಲ್ಲಿ ನಡೆಸುತ್ತಿರುವ ಈ ಕದನವು ಹೆಚ್ಚು ಮಹತ್ವದ್ದಾಗಿದೆ. ದೇಶದ ಸ್ವಾತಂತ್ರ್ಯ ಮತ್ತು ಸ್ವಾತಂತ್ರ್ಯ ಹೋರಾಟದ ಪ್ರತಿಯೊಂದು ಮೌಲ್ಯಗಳು ಮತ್ತು ಸಾಧನೆಗಳ ಮೇಲೆ ಘೋರ ಮತ್ತು ವಿನಾಶಕಾರಿ ಆಕ್ರಮಣವನ್ನು ನಡೆಸುತ್ತಿರುವ ಈ ಅಪರಾಧಿಗಳು ಆಡಳಿತದಲ್ಲಿ ಭಾಗವಹಿಸುತ್ತಲೇ, ಅನೈಕ್ಯತೆ, ಅವನತಿಯ, ವಿಷವನ್ನು ಹರಡುತ್ತಾ, ಸ್ವಾತಂತ್ರದ 'ಅಮೃತ್ ಮಹೋತ್ಸವ ವರ್ಷ' ಎಂದು ಘೋಷಿಸುತ್ತಿರುವುದು ಬಹಳ ಗಂಭೀರ ವಿಷಯವಾಗಿದೆ.

ಭಾರತದ ಕಾರ್ಮಿಕ ವರ್ಗವು ಸಾಮ್ರಾಜ್ಯಶಾಹಿ ಬ್ರಿಟಿಷ್ ವಸಾಹತುಶಾಹಿ ಆಳ್ವಿಕೆಯಲ್ಲಿ ಮತ್ತು ಸ್ವಾತಂತ್ರ್ಯದ ನಂತರದ ಭಾರತದ ಆಳುವ ವರ್ಗದ ಆಳ್ವಿಕೆಯಲ್ಲಿ ಎಲ್ಲಾ ಪ್ರತಿಕೂಲ ಪರಿಸ್ಥಿತಿಗಳಲ್ಲೂ ಆಳುವ ವರ್ಗದ ಆಕ್ರಮಣಗಳನ್ನು ಎದುರಿಸಿ ನಿಂತಿದೆ. ದೇಶದ ಇತಿಹಾಸ ಇದಕ್ಕೆ ಎಲ್ಲ ಅರ್ಥದಲ್ಲೂ ಸಾಕ್ಷಿಯಾಗಿ ನಿಂತಿದೆ.

ಆಗಿನ ಬ್ರಿಟಿಷ್–ಭಾರತದ ವಿವಿದ ಭಾಗಗಳಲ್ಲಿ ಕಾರ್ಮಿಕ ವರ್ಗದ ಹೋರಾಟಗಳು ವಿಸ್ತರಿಸುತ್ತಿರುವಾಗ ಮತ್ತು ಸ್ವಾತಂತ್ರ್ಯ ಚಳವಳಿಯ ಸಮಯದಲ್ಲಿ ಬ್ರಿಟಿಷ್ ಆಡಳಿತದ ವಿರುದ್ಧ ಜನರು ತೀವ್ರವಾಗಿ ಹೋರಾಡುತ್ತಿರುವಾಗ, ಆರ್.ಎಸ್.ಎಸ್.ನಂತಹ ವಿಛಿದ್ರಕಾರಿ ಬಲಪಂಥೀಯ ಕೋಮುವಾದಿ ಶಕ್ತಿಗಳ ಹರಿವು ಕೂಡ ಬೆಳೆಯುತ್ತ ಸಾಗುತ್ತಿತ್ತು, ಅವರ ನಾಯಕರು ಬ್ರಿಟಿಷರಿಗೆ ಸಂಪೂರ್ಣ ಶರಣಾಗಿ, ಬ್ರಿಟಿಷ್ ಸಾಮ್ರಾಜ್ಯಶಾಹಿಯ ಹಿತಾಸಕ್ತಿಗಳನ್ನು ರಕ್ಷಿಸುವಲ್ಲಿ ಅದರ ವಿಭಜಿಸಿ–ಆಳುವ ತಂತ್ರದಲ್ಲಿ ಒಂದು ಸಾಧನವಾಗಿ, ಸಕ್ರಿಯವಾಗಿ ಮತ್ತು ನಿಷ್ಠೆಯಿಂದ ಸೇವೆ ಸಲ್ಲಿಸುತ್ತಿದ್ದರು. ಆದರೆ ದೇಶಕ್ಕೆ ಸ್ವಾತಂತ್ರ್ಯ ಬಂದಿದ್ದರಿಂದ, ಈ ದ್ರೋಹಿಗಳಿಗೆ ತಮ್ಮ ಉದ್ದೇಶವನ್ನು ಈಡೇರಿಸಿಕೊಳ್ಳಲು ಸಾಧ್ಯವಾಗಲಿಲ್ಲ.

ಹೆಜ್ಜೆಗುರುತನ್ನು ಮೂಡಿಸಿದ ಕಾರ್ಮಿಕ ವರ್ಗದ ಹೋರಾಟಗಳು


ಕಾರ್ಮಿಕ ವರ್ಗದ ಹೋರಾಟಗಳು ಉದ್ದಗಲಕ್ಕೂ ಉಲ್ಬಣಗೊಳ್ಳುತ್ತಿದ್ದಂತೆ,. 1922 ರೈಲ್ವೆ, ಉಕ್ಕು ಮತ್ತು ಜವಳಿ ಕಾರ್ಮಿಕರ ಬಹು ದಿನದ ಪ್ರಮುಖ ಮುಷ್ಕರಗಳಿಗೆ ಸಾಕ್ಷಿಯಾಯಿತು. ಲಭ್ಯವಿರುವ ದಾಖಲೆಗಳ ಪ್ರಕಾರ 1928 ರಲ್ಲಿ ಸರಿ ಸುಮಾರು 35 ಲಕ್ಷಕ್ಕೂ ಹೆಚ್ಚು ಮಾನವ ದಿನಗಳು ನಷ್ಟವಾದವು.. ಬಹುತೇಕ ಇಡೀ ದೇಶವು ನಿರ್ದಿಷ್ಟವಾಗಿ ಬಾಂಬೆ, ಕಾನ್ಪುರ್, ಕಲ್ಕತ್ತಾ, ಖರಗ್ಪುರ, ಬೆಂಗಳೂರು, ಜಮ್ಶೆಡ್ಪುರ, ಝರಿಯಾ, ಧನ್ಬಾದ್, ನಾಗ್ಪುರ, ಮದ್ರಾಸ್ ಪ್ರೆಸಿಡೆನ್ಸಿ, ಅಸ್ಸಾಂನ ದಿಗ್ಬೋಯಿ ಇತ್ಯಾದಿ ಕೈಗಾರಿಕಾ ಕೇಂದ್ರಗಳು. ಕಾರ್ಮಿಕರ ಹೋರಾಟಗಳ ರಂಗಭೂಮಿಯಾಗಿ ಮಾರ್ಪಟ್ಟವು. 1939 ರಲ್ಲಿ 49.9 ಲಕ್ಷ, 1940 ರಲ್ಲಿ 75.7 ಲಕ್ಷ, 1942 ರಲ್ಲಿ 57.7 ಲಕ್ಷ ಕೆಲಸದ ದಿನಗಳು ನಷ್ಟವಾದವು. ಮತ್ತು ಈ ಪ್ರಕ್ರಿಯೆಯು 1945 ರವರೆಗೆ ಮುಂದುವರೆಯಿತು, ಆ ವರ್ಷ 7.82 ಲಕ್ಷ ಕಾರ್ಮಿಕರನ್ನು ಒಳಗೊಂಡ 33.4 ಲಕ್ಷಗಳ ಕೆಲಸದ ದಿನಗಳ ನಷ್ಟಕ್ಕೆ ಸಾಕ್ಷಿಯಾಯಿತು..



ಕಾರ್ಮಿಕ ವರ್ಗದ ಈ ಹೋರಾಟಗಳು ತಮ್ಮ ಸ್ವಂತ ಆರ್ಥಿಕ ಬೇಡಿಕೆಗಳಿಗಾಗಿ ಮಾತ್ರವಲ್ಲದೆ ವಸಾಹತುಶಾಹಿ ಬ್ರಿಟಿಷ್ ಸಾಮ್ರಾಜ್ಯಶಾಹಿಗಳಿಂದ ಭಾರತದ ಸ್ವಾತಂತ್ರ್ಯಕ್ಕಾಗಿಯೂ ನಡೆದವು. ಈ ರೀತಿ ಕಾರ್ಮಿಕ ವರ್ಗದ ಹೋರಾಟಗಳು ಸ್ವಾತಂತ್ರ್ಯ ಹೋರಾಟದೊಂದಿಗೆ ಹೆಣೆದುಕೊಂಡಿದ್ದವು ಮತ್ತು ಬೆರೆತಿದ್ದವು. ಕಾರ್ಮಿಕ ವರ್ಗವು ಸ್ವಾತಂತ್ರ್ಯ ಚಳುವಳಿಯ ಬಹುತೇಕ ಎಲ್ಲಾ ಕರೆಗಳಲ್ಲಿ ಬೃಹತ್ ಭಾಗವಹಿಸುವಿಕೆಯೊಂದಿಗೆ ಸ್ವಾತಂತ್ರ್ಯ ಚಳುವಳಿಯ ಭಾಗವಾಯಿತು. ಚಳವಳಿಯ ಭಾಗವಾಗಿರುವುದು ಮಾತ್ರವಲ್ಲದೆ ಪೂರ್ಣ ಸ್ವರಾಜ್, ಇಂಕ್ವಿಲಾಬ್ ಜಿಂದಾಬಾದನಂತಹ ಕ್ರಾಂತಿಕಾರಿ ಘೋಷಣೆಗಳ ಹೊರಹೊಮ್ಮುವಿಕೆಗೆ ಅನುವು ಮಾಡಿಕೊಡುವ ಚಳವಳಿಗೆ ಅಗತ್ಯವಾದ ತೀಕ್ಷ್ಣತೆಯನ್ನು ಒದಗಿಸಿತು ಮತ್ತು ಈ ಕಾರಣಕ್ಕಾಗಿ ಅಪಾರ ತ್ಯಾಗಗಳನ್ನು ಮಾಡಲಾಯಿತು. ಈ ಕ್ರಾಂತಿಕಾರಿಗಳ ಸಮರಶೀಲತೆಯಿಂದ ನೇಣುಗಂಬವು ತುಂಬಿತ್ತು. ಈ ಸಂಘ ಪಕ್ಷವು ಭಾರತವನ್ನು ಒಂದು ಆಧುನಿಕ ರಾಷ್ಟ್ರವಾಗಿ ರೂಪಿಸಲು ಅನುವು ಮಾಡಿಕೊಟ್ಟವು. ಆದರೆ ಸ್ವಾತಂತ್ರ್ಯ ಚಳುವಳಿಯಲ್ಲಿ ಬಂಡವಾಳಶಾಹಿ ವರ್ಗದ ನಾಯಕತ್ವವು ಕ್ರಾಂತಿಕಾರಿ ಪರಿವರ್ತನೆಯ ಪ್ರಕ್ರಿಯೆಯನ್ನು ಮೊಟಕುಗೊಳಿಸಿತು. ಇಂದು ಸ್ವಾತಂತ್ರ್ಯದ 75 ನೇ ವರ್ಷದಲ್ಲಿಯೂ ಇದು ದೃಢವಾಗುತ್ತಿದೆ.

ಆದರೆ ಹತಾಶ ವಿಛಿದ್ರಕಾರಿ ಶಕ್ತಿಗಳು ಬ್ರಿಟಿಷ್ ಸಿಂಹಾಸನಕ್ಕೆ ನಿಷ್ಠೆ ಹೊಂದಿದ್ದವು.

ಕಾರ್ಮಿಕ ವರ್ಗದ ಹೋರಾಟಗಳಲ್ಲಿ ಈ ರೀತಿ ಕ್ರಾಂತಿಕಾರಿ ಪ್ರವೃತ್ತಿಗಳು ಹೆಚ್ಚುತ್ತಿರುವಾಗ, ವಸಾಹತುಶಾಹಿ ಬ್ರಿಟಿಷ್ ಆಡಳಿತಗಾರರು ಬ್ರಿಟಿಷ್ ಸಿಂಹಾಸನಕ್ಕೆ ತಮ್ಮ ನಿಷ್ಠೆಯನ್ನು ಹೊಂದಿದ್ದ ದೇಶೀಯ ಆಳುವ ವರ್ಗದ ಸಣ್ಣ ವಿಭಾಗದ ಬೆಂಬಲವನ್ನು ಹೊಂದಿದ್ದ ಹತಾಶ ವಿಛಿದ್ರಕಾರಿ ಕೋಮುವಾದಿ ಶಕ್ತಿಗಳನ್ನು ಪೋಷಿಸಿದರು,. 1925 ರಲ್ಲಿ ರಾಷ್ಟ್ರೀಯ ಸ್ವಯಂಸೇವಕ ಸಂಘ (ಆರ್‌ಎಸ್‌ಎಸ್) ರಚನೆಯೊಂದಿಗೆ ಇದು ಹೆಚ್ಚು ಸ್ಪಷ್ಟವಾಯಿತು. ಅಖಿಲ ಭಾರತ ಮುಸ್ಲಿಂ ಲೀಗ್ 1930 ರಿಂದ ಪ್ರತ್ಯೇಕ ಮುಸ್ಲಿಂ ಬಹುಸಂಖ್ಯಾತ ರಾಷ್ಟ್ರವಾದ ಪಾಕಿಸ್ತಾನಕ್ಕಾಗಿ ತನ್ನ ಬಲವಾದ ಬೇಡಿಕೆಯನ್ನು ಎತ್ತಲು ಪ್ರಾರಂಭಿಸಿತು.



ಕೋಲ್ಕತ್ತಾ 1946 ರಲ್ಲಿ

ಆರ್‌ಎಸ್‌ಎಸ್ ಸಿದ್ಧಾಂತವಾದಿ ವಿ.ಡಿ. ಸಾವರ್ಕರ್ ಮತ್ತು ಮಾಜಿ ಪ್ರಧಾನಿ ಎ.ಬಿ.ವಾಜಪೇಯಿ ಮುಂತಾದ ಅವರ ಉನ್ನತ ನಾಯಕರ ಕ್ಷಮಾದಾನ ಅರ್ಜಿಗಳು ಮತ್ತು ತಪ್ಪೊಪ್ಪಿಗೆಗಳು ಬ್ರಿಟೀಶರಿಗೆ ಇದ್ದ ಅವರ ನಿಷ್ಠೆಯನ್ನು ಬಯಲುಗೊಳಿಸುತ್ತವೆ. ಅಕ್ಟೋಬರ್–ನವೆಂಬರ್, 1913 ರಲ್ಲಿ. ಗವರ್ನರ್ ಜನರಲ್ ಕೌನ್ಸಿಲ್‌ನ ಗೃಹ ಸದಸ್ಯ ಸರ್ ರೆಜಿನಾಲ್ಡ್ ಕ್ರಾಡಾಕ್ ಅಂಡಮಾನಿಗೆ ಭೇಟಿ ನೀಡಲು ಬಂದಾಗ ವಿ.ಡಿ.ಸಾವರಕರ (ಅಪರಾಧಿ ಸಂಖ್ಯೆ 32778) ಅವರಿಗೆ ವೈಯಕ್ತಿಕವಾಗಿ ಸಲ್ಲಿಸಿದ ಈ ಕೆಳಗೆ ಉಲ್ಲೇಖಿಸಿದ ಕ್ಷಮಾದಾನ ಅರ್ಜಿಯು ಈ ಆಘಾತಕಾರಿ ವಿಷಯವನ್ನು ಬಹಿರಂಗಗೊಳಿಸುತ್ತದೆ.

"ನಾನು ಈ ಕೆಳಗಿನ ಅಂಶಗಳನ್ನು ತಮ್ಮ ಪರಿಶೀಲನೆಗಾಗಿ ಸಲ್ಲಿಸಲು ಅನುಮತಿ ಕೋರುತ್ತೇನೆ: "..........ಇದಲ್ಲದೆ ನನ್ನ ಪರಿವರ್ತನೆಯು ಭಾರತ ಮತ್ತು ವಿದೇಶಗಳಲ್ಲಿನ ದಾರಿ ತಪ್ಪಿದ, ಹಿಂದೆ ನನ್ನನ್ನು ತಮ್ಮ ಮಾರ್ಗದರ್ಶಕರಾಗಿ ನೋಡುತ್ತಿದ್ದ ಎಲ್ಲ ಯುವಕರನ್ನು ಸಾಂವಿಧಾನಿಕ ಮಾರ್ಗಕ್ಕೆ ತಿರುಗಿ ಕರೆ ತರುತ್ತದೆ, ತಾವು ಇಷ್ಟಪಡುವ ಯಾವುದೇ ಸಾಮರ್ಥ್ಯದಲ್ಲಿ ಸರ್ಕಾರಕ್ಕೆ ಸೇವೆ ಸಲ್ಲಿಸಲು ನಾನು ಸಿದ್ಧನಿದ್ದೇನೆ, ಏಕೆಂದರೆ ನನ್ನ ಮತಾಂತರವು ಆತ್ಮಸಾಕ್ಷಿಯಾಗಿರುವುದರಿಂದ ನನ್ನ ಮುಂದಿನ ನಡವಳಿಕೆಯು ಹೀಗಿರುತ್ತದೆ ಎಂದು ನಾನು ಭಾವಿಸುತ್ತೇನೆ, ನನ್ನನ್ನು ಜೈಲಿನಲ್ಲಿ ಇರಿಸುವುದರಿಂದ ಏನನ್ನೂ ಪಡೆಯಲಾಗುವುದಿಲ್ಲ, ಶಕ್ತಿಶಾಲಿಗಳು ಮಾತ್ರ ಕರುಣೆಯನ್ನು ತೋರಬಹುದು ಮತ್ತು ಸರ್ಕಾರದ ದತ್ತು ಮಗನಾದ ನಾನು ಸರಕಾರದ ಬಾಗಿಲಿಗೆ ಹೊರತುಪಡಿಸಿ ಬೇರೆಲ್ಲಿಗೆ ಹೋಗಲು ಸಾಧ್ಯ? ಆದ್ದರಿಂದ ತಾವು ದಯವಿಟ್ಟು ಈ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕು ಎಂದು ಕೋರುತ್ತೇನೆ." [ಒತ್ತು ಸೇರಿಸಲಾಗಿದೆ]. ಇದೊಂದೇ ಅಲ್ಲ ಸಾವರ್ಕರ್. ಅವರು 1911, 1913, 1914, 1918 ಮತ್ತು 1920 ರಲ್ಲಿ ಸೇರಿ ಐದು ಕ್ಷಮಾದಾನ ಅರ್ಜಿಗಳನ್ನು ಸಲ್ಲಿಸಿದರು. ನಾವು ಅವರ 1911, 1914 ಮತ್ತು 1918 ರ ಕ್ಷಮಾದಾನ ಅರ್ಜಿಗಳ ಉಲ್ಲೇಖವನ್ನು ಕಾಣುತ್ತೇವೆ. ದುಃಖಕರವೆಂದರೆ, ಇವುಗಳ ಪ್ರತ್ಯೆಗಳು ಆರ್ಕಿವ್‌ಗಳಲ್ಲಿ ಲಭ್ಯವಿಲ್ಲ.

ಕ್ವಿಟ್ ಇಂಡಿಯಾ ಚಳವಳಿಯ ಭಾಗವಾಗಿ 27.8.1942 ರಂದು ನಡೆದ ಬಟೇಶ್ವರ ಅರಣ್ಯ ಕಚೇರಿಯ ಘೇರಾವ್‌ನಲ್ಲಿ ಮಾಜಿ ಪ್ರಧಾನಿ ಎ.ಬಿ.ವಾಜಪೇಯಿ ಭಾಗವಹಿಸಿದ್ದಾಗಿ ಆರ್‌ಎಸ್‌ಎಸ್ ಹೇಳಿಕೊಳ್ಳುತ್ತಿದೆ. ಇದು ಸುಳ್ಳು ಎಂದು ಸಾಬೀತಾಗಿದೆ. ಏಕೆಂದರೆ, 1.9.1942 ರಂದು ಆಗ್ರಾದ ಎರಡನೇ ದರ್ಜೆ ಮಾಜಿಸ್ಟ್ರೇಟ್ ಕೋರ್ಟ್‌ನಲ್ಲಿ ಅವರು "ನಾನು ಗುಂಪಿನ ಭಾಗವಾಗಿದ್ದೆ, ಆದರೆ ನಾನು ಅದರ ಉದ್ದೇಶಗಳನ್ನು ಹಂಚಿಕೊಳ್ಳಲಿಲ್ಲ ಮತ್ತು ನಾನು ಯಾವುದೇ ಅಪರಾಧ ಕೃತ್ಯದಲ್ಲಿ ಭಾಗವಹಿಸಲಿಲ್ಲ." ಎಂದು ಹೇಳಿದ್ದು ದಾಖಲೆಯಲ್ಲಿದೆ.

ಫ್ಯಾಸಿಸ್ಟ್ ಮುಸೊಲಿನಿ ಮತ್ತು ಮೂಂಜೆ ಸಂಪರ್ಕ–ಕೊಂಡಿ:

ಭಗತ್ ಸಿಂಗ್ ಮತ್ತು ಅವರ ಸಂಗಡಿಗರ, ಪರಮೋಚ್ಚ ಬಲಿದಾನಗಳಿಂದ ಇಡೀ ದೇಶವು ಭಾವೋದ್ವೇಗಕ್ಕೆ ಒಳಗಾದ ಸಮಯದಲ್ಲಿ, 1927 ರಿಂದ 1937 ರವರೆಗೆ, ನಂತರ ಅಧ್ಯಕ್ಷತೆಯನ್ನು ವಿ.ಡಿ.ಸಾವರ್ಕರ್ ಅವರಿಗೆ ಹಸ್ತಾಂತರಿಸುವವರೆಗೂ ಹಿಂದೂ ಮಹಾಸಭಾದ ಅಧ್ಯಕ್ಷ ರಾಗಿದ್ದ ಡಾ.ಬಿ.ಎಸ್. ಮೂಂಜೆಯವರು 1931 ರಲ್ಲಿ ಇಟಲಿಗೆ ಭೇಟಿ ನೀಡಿ ಅದರ ಪ್ರಧಾನಿಯಾಗಿದ್ದ ಫ್ಯಾಸಿಸ್ಟ್ ಸರ್ವಾಧಿಕಾರಿ ಬೆನಿಟೊ ಮುಸೊಲಿನಿಯವರನ್ನು ಭೇಟಿಯಾದರು. ಮೂಂಜೆ ಆರ್‌ಎಸ್‌ಎಸ್ ಸ್ಥಾಪಿಸಿದ ಡಾ. ಹೆಡ್ಗೆವಾರ್‌ರ ರಾಜಕೀಯ ಮಾರ್ಗದರ್ಶಕರಾಗಿದ್ದರು. ಮೂಂಜೆಯವರು ಫ್ಯಾಸಿಸ್ಟ್ ಮತ್ತು ನಾಜಿ ಸಿದ್ಧಾಂತದಿಂದ ಎಷ್ಟು ಆಕರ್ಷಿತರಾಗಿದ್ದರೆಂದರೆ, ಅವರು ಹಿಂದೂಗಳ ಮನಸ್ಸನ್ನು ತರಬೇತುಗೊಳಿಸಲು ಭೋನ್ಸಾಲಾ ಮಿಲಿಟರಿ ಶಾಲೆಯನ್ನು ತೆರೆದರು. ಮಹಾತ್ಮಾ ಗಾಂಧಿಯವರ



'ಸೈಮನ್ ಹಿಂತಿರುಗಿ' ಆಂದೋಲನ

ಹಂತಕರಾದ ನಾಥೂರಾಮ್ ಗೋಡ್ಸೆ ಮತ್ತು ಅವರ ಸಹೋದರ ಗೋಪಾಲ್ ಗೋಡ್ಸೆ, ಆ ಚಿಂತನೆಗಳ ಶಾಲೆಯ ಮುಖ್ಯ ಉತ್ಪನ್ನಗಳಾಗಿದ್ದರು.

ಅವರದೇ ಸ್ವಂತ ದಾಖಲೆಗಳು ಸತ್ಯವನ್ನು ಬಹಿರಂಗಪಡಿಸುತ್ತವೆ:

ಸ್ವಾತಂತ್ರ್ಯ ಚಳವಳಿಯ ಬಗ್ಗೆ ಆರ್‌ಎಸ್‌ಎಸ್ ನಾಯಕತ್ವದ ಧೋರಣೆಯು ಆರ್‌ಎಸ್‌ಎಸ್‌ನ ಎರಡನೇ ಸರಸಂಘಚಾಲಕ್ ಗೋಳ್ವಾಲ್ಕರರ ಈ ಕೆಳಗಿನ ಹೇಳಿಕೆಯಿಂದ (ಶ್ರೀ ಗುರೂಜಿ ಸಮಗ್ರ ದರ್ಶನ, ಸಂಪುಟ. IV, ಪುಟ 39): ಸ್ಪಷ್ಟವಾಗುತ್ತದೆ.

ದೇಶದಲ್ಲಿ ಕಾಲಕಾಲಕ್ಕೆ ಬೆಳೆಯುತ್ತಿರುವ ಪರಿಸ್ಥಿತಿಯಿಂದ ಮನಸ್ಸಿನಲ್ಲಿ ಸ್ವಲ್ಪ ಅಶಾಂತಿ ಇತ್ತು. 1942ರಲ್ಲಿ ಇಂತಹ ಅಶಾಂತಿ ಇತ್ತು.. ಅದಕ್ಕೂ ಮುನ್ನ 1930-31ರ ಚಳವಳಿ ನಡೆದ ಸಮಯದಲ್ಲಿ ಕೆಲವು ಜನರು ಡಾಕ್ಟರ್‌ಜಿ (ಹೆಡ್ಗೆವಾರ್) ಬಳಿಗೆ ಹೋಗಿದ್ದರು. ಈ ಹೋರಾಟವು ಭಾರತಕ್ಕೆ ಸ್ವಾತಂತ್ರ್ಯವನ್ನು ನೀಡಲಿದ್ದು, ಸಂಘವು ಅದರಲ್ಲಿ ಭಾಗವಹಿಸುವಲ್ಲಿ ಹಿಂಜರಿಯಬಾರದು ಎಂದು ನಿಯೋಗವು ಡಾಕ್ಟರಜಿಯವರನ್ನು ವಿನಂತಿಸಿತು. ಆ ಸಮಯದಲ್ಲಿ ಒಬ್ಬ ಸಜ್ಜನ ಡಾಕ್ಟರ್‌ಜಿಗೆ ತಾನು ಜೈಲಿಗೆ ಹೋಗಲೂ ಸಿದ್ಧ ಎಂದು ಹೇಳಿದಾಗ, ಡಾಕ್ಟರ್‌ಜಿ ಅವರಿಗೆ ಹೀಗೆ ಹೇಳುತ್ತಾರೆ:

"ಖಂಡಿತವಾಗಿಯೂ ಹೋಗು, ಆದರೆ ಆಗ ನಿನ್ನ ಸಂಸಾರವನ್ನು ಯಾರು ನೋಡಿಕೊಳ್ಳುತ್ತಾರೆ" ಆ ಮಹಾನುಭಾವನು ಉತ್ತರಿಸುತ್ತಾನೆ, "ನಾನು ಎರಡು ವರ್ಷಗಳ ಕುಟುಂಬದ ಖರ್ಚುಗಳನ್ನು ನಿರ್ವಹಿಸಲು ಮಾತ್ರವಲ್ಲದೆ ಅವಶ್ಯಕತೆಗೆ ಅನುಗುಣವಾಗಿ ದಂಡವನ್ನು ಪಾವತಿಸಲು ಸಾಕಷ್ಟು ಸಂಪನ್ಮೂಲಗಳನ್ನು ಸಂಗ್ರಹಿಸಿಟ್ಟಿದ್ದೇನೆ". ಆಗ ಡಾಕ್ಟರಜಿ ಅವರಿಗೆ, "ನೀವು ಸಂಪನ್ಮೂಲಗಳನ್ನು ಸಂಪೂರ್ಣವಾಗಿ ವ್ಯವಸ್ಥೆಗೊಳಿಸಿದ್ದರೆ ಎರಡು ವರ್ಷಗಳ ಕಾಲ ಸಂಘದಲ್ಲಿ ಕೆಲಸ ಮಾಡಲು ಹೊರಗೆ ಬಾ" ಎಂದು ಹೇಳುತ್ತಾರೆ. ಮನೆಗೆ ಹಿಂದಿರುಗಿದ ನಂತರ, ಆ ಮಹಾನುಭಾವನು ಜೈಲಿಗೂ ಹೋಗಲಿಲ್ಲ ಅಥವಾ ಸಂಘಕ್ಕಾಗಿ ಕೆಲಸ ಮಾಡಲೂ ಹೊರಗೆ ಬರಲಿಲ್ಲ.

ಇದೇ ರೀತಿಯಲ್ಲಿ, 1942 ರಲ್ಲಿ, ಪ್ರಕ್ಷುಬ್ಧತೆ ಪ್ರಾರಂಭವಾದಾಗ, ಗೋಳ್ವಾಲ್ಕರ್ ಅವರು "ಆರ್‌ಎಸ್‌ಎಸ್‌ನ ದಿನನಿತ್ಯದ ಕೆಲಸವನ್ನು ಮುಂದುವರಿಸಬೇಕು ಮತ್ತು ಬ್ರಿಟಿಷರನ್ನು ಕೆರಳಿಸುವ ಯಾವ ಚಟುವಟಿಕೆಯನ್ನೂ ಮಾಡಬಾರದು" ಎಂಬ ಸೂಚನೆಗಳನ್ನು ನೀಡಿದ್ದರು. 1942 ರಲ್ಲಿ ಸಹ ಹಲವರ ಹೃದಯದಲ್ಲಿ ಚಳುವಳಿಯಲ್ಲಿ ಭಾಗವಹಿಸುವ ಕುರಿತು ಬಲವಾದ ಭಾವನೆಯಿತ್ತು. ಆ ಸಮಯದಲ್ಲಿಯೂ ಸಂಘದ ತನ್ನ ದೈನಂದಿಕ ಕಾರ್ಯವನ್ನು ಮುಂದುವರಿಸಿತು. ಮತ್ತು "ನೇರವಾಗಿ ಏನನ್ನೂ ಮಾಡುವುದಿಲ್ಲ" ಎಂದು ಸಂಘ ಪ್ರತಿಜ್ಞೆ ಮಾಡಿತ್ತು.. ಬ್ರಿಟಿಷರ ವಿರುದ್ಧ ಹೋರಾಡುವುದು ಕಾರ್ಯಸೂಚಿಯ ಭಾಗವಾಗಿಲ್ಲ ಎಂದು ಆರ್‌ಎಸ್‌ಎಸ್ ಸಿದ್ಧಾಂತವು ಸ್ಪಷ್ಟವಾಗಿ ಹೇಳುತ್ತದೆ, "ನಮ್ಮ ಪ್ರತಿಜ್ಞೆಯಲ್ಲಿ ನಾವು ಧರ್ಮ ಮತ್ತು ಸಂಸ್ಕೃತಿಯನ್ನು ರಕ್ಷಿಸುವ ಮೂಲಕ ದೇಶದ ಸ್ವಾತಂತ್ರ್ಯದ ಬಗ್ಗೆ ಮಾತನಾಡಿದ್ದೇವೆ, ಆದರೆ ಭಾರತದಿಂದ ಬ್ರಿಟಿಷರ ನಿರ್ಗಮನದ ಉಲ್ಲೇಖಿಸುತ್ತಿಲ್ಲ.." (ಶ್ರೀ ಗುರೂಜಿ ಸಮಗ್ರ ದರ್ಶನ ಸಂಪುಟ IV, ಪುಟ 40,)

ಜೀವನ ಚರಿತ್ರೆ ದಾವೆಗಳನ್ನು ನಿರಾಕರಿಸುತ್ತದೆ

ಆರೆಸ್ಸೆಸ್ ಪ್ರಕಟಿಸಿದ ಹೆಡ್ಗೆವಾರ್ ಜೀವನ ಚರಿತ್ರೆಯ ಪ್ರಕಾರ, ಗಾಂಧಿಯವರು 1930 ರಲ್ಲಿ ಉಪ್ಪಿನ ಸತ್ಯಾಗ್ರಹವನ್ನು ಪ್ರಾರಂಭಿಸಿದಾಗ, ಹೆಡ್ಗೆವಾರ "ಸಂಘವು ಸತ್ಯಾಗ್ರಹದಲ್ಲಿ ಭಾಗವಹಿಸುವುದಿಲ್ಲ. ಆದಾಗ್ಯೂ ಸತ್ಯಾಗ್ರಹದಲ್ಲಿ ವೈಯಕ್ತಿಕವಾಗಿ ಭಾಗವಹಿಸಲು ಇಚ್ಛಿಸುವವರನ್ನು ನಿಷೇಧಿಸಲಾಗಿಲ್ಲ, ಆದರೆ ಸಂಘದ ಯಾವುದೇ ಜವಾಬ್ದಾರಿಯುತ ಕಾರ್ಯಕರ್ತ ಸತ್ಯಾಗ್ರಹದಲ್ಲಿ ಭಾಗವಹಿಸಬಾರದು". ಎಂದು ಎಲ್ಲೆಡೆ ಮಾಹಿತಿ ಕಳುಹಿಸಿದ್ದರು.

ಹಿಂದಿನ ವರ್ಷದ ನೌಕಾ ದಂಗೆಯ ನಂತರ ಮಾರ್ಚ್ 1947 ರಲ್ಲಿ ಅಂತಿಮವಾಗಿ ಭಾರತವನ್ನು ತೊರೆಯಲು ಬ್ರಿಟಿಷರು ನಿರ್ಧಾರವನ್ನು ತೆಗೆದುಕೊಂಡಾಗಲೂ ಸಹ, ಗೋಳ್ವಾಲ್ಕರ್ ಭಾರತದ ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸಲು ಬಯಸಿದ್ದ ಆರ್‌ಎಸ್‌ಎಸ್ ಕಾರ್ಯಕರ್ತರನ್ನು ಟೀಕಿಸುತ್ತಲೇ ಇದ್ದರು ಆದಾಗ್ಯೂ, ಹೆಡ್ಗೆವಾರ್ ಅವರು ವೈಯಕ್ತಿಕ ಸಾಮರ್ಥ್ಯದಲ್ಲಿ ಭಾಗವಹಿಸಿದ್ದರು ಮತ್ತು ಜೈಲಿಗೆ ಹೋದರು. ಆದರೆ ಸ್ವಾತಂತ್ರ್ಯ ಹೋರಾಟಗಾರನ ಉದ್ದೇಶದಿಂದ ಅಲ್ಲ. ಆರ್‌ಎಸ್‌ಎಸ್ ಪ್ರಕಟಿಸಿದ ಜೀವನಚರಿತ್ರೆಯ ಪ್ರಕಾರ, ಅವರು ಜೈಲಿಗೆ ಹೋದದ್ದು, "ಸ್ವಾತಂತ್ರ್ಯ ಬಯಸುವ, ಸ್ವಯಂ ತ್ಯಾಗಕ್ಕೆ ಸಿದ್ಧರಿದ್ದ ಪ್ರತಿಷ್ಠಿತ ಜನರ ಗುಂಪಿನೊಂದಿಗೆ ಸಂಘದ ಗುರಿಗಳ ಕುರಿತು ಚರ್ಚಿಸಲು ಮತ್ತು ಅದರ ಚಟುವಟಿಕೆಯಲ್ಲಿ ಭಾಗವಹಿಸುವಂತೆ ಅವರಿಗೆ ಮನವರಿಕೆ ಮಾಡಲು ಅವಕಾಶ ಸಿಗುತ್ತದೆ ಎನ್ನುವ ವಿಶ್ವಾಸದಿಂದ" ತಮ್ಮ ವಿಚ್ಛಿದ್ರಕಾರಕ ಉದ್ದೇಶಗಳಿಗಾಗಿ ಕಾಂಗ್ರೆಸ್ ಕಾರ್ಯಕರ್ತರನ್ನು ಬಳಸಿಕೊಳ್ಳಲು ಹಿಂದೂ ಮತ್ತು ಮುಸ್ಲಿಂ ಪಂಥೀಯ ಗುಂಪುಗಳು ನಡೆಸುತ್ತಿರುವ ಕುತಂತ್ರಗಳಿಂದ ಎಚ್ಚೆತ್ತ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು 1934 ರಲ್ಲಿ ನಿರ್ಣಯವನ್ನು ಅಂಗೀಕರಿಸಿ, ಕಾಂಗ್ರೆಸ್ ಪಕ್ಷದ ಸದಸ್ಯರು ಆರ್‌ಎಸ್‌ಎಸ್, ಹಿಂದೂ ಮಹಾಸಭಾ ಮತ್ತು ಮುಸ್ಲೀಂ ಲೀಗ ನ ಸದಸ್ಯರಾಗುವುದನ್ನು ನಿಷೇಧಿಸಿತು.

ದಶಕದ ಅಂತ್ಯದ ವೇಳೆಗೆ, ಡಿಸೆಂಬರ್ 1940 ರಲ್ಲಿ, ಗಾಂಧೀಜಿ ಕ್ವಿಟ್ ಇಂಡಿಯಾಕ್ಕಾಗಿ ಸತ್ಯಾಗ್ರಹವನ್ನು ಪ್ರಾರಂಭಿಸಿದಾಗ, ವಸಾಹತುಶಾಹಿ ಸರ್ಕಾರದ ಗೃಹ ಇಲಾಖೆಯ ಒಂದು ಟಿಪ್ಪಣಿಯು ಆರ್‌ಎಸ್‌ಎಸ್ ನಾಯಕರು ಗೃಹ ಇಲಾಖೆಯ ಕಾರ್ಯದರ್ಶಿಯನ್ನು ಭೇಟಿಯಾಗಿ "ಸಂಘವು ನಾಗರಿಕ ರಕ್ಷಕ ಪಡೆಗೆ ಹೆಚ್ಚಿನ ಸಂಖ್ಯೆಯಲ್ಲಿ ಸೇರಲು ತನ್ನ ಸದಸ್ಯರಿಗೆ ಉತ್ತೇಜನ ನೀಡುವುದಾಗಿ ಭರವಸೆ ನೀಡಿದ್ದರು" ಎಂದು ಬಹಿರಂಗಪಡಿಸುತ್ತದೆ. "ಆಂತರಿಕ ಭದ್ರತೆಗಾಗಿ ವಿಶೇಷ ಕ್ರಮಗಳಲ್ಲಿ" ಒಂದಾಗಿ ಸಾಮ್ರಾಜ್ಯಶಾಹಿ ಸರ್ಕಾರವು ನಾಗರಿಕ ರಕ್ಷಕ ಪಡೆಯನ್ನು ಸ್ಥಾಪಿಸಿತ್ತು.

ಬ್ರಿಟಿಷ್-ಸರ್ಕಾರದ ದಾಖಲೆಗಳಲ್ಲಿ ಆರ್‌ಎಸ್‌ಎಸ್ ಮತ್ತು ಅದರ ಪಾತ್ರ

ಕ್ವಿಟ್ ಇಂಡಿಯಾ ಚಳವಳಿಯನ್ನು ಪ್ರಾರಂಭಿಸಿದ ಒಂದೂವರೆ ವರ್ಷಗಳ ನಂತರ, ಬ್ರಿಟಿಷ್-ರಾಜ್ ನ ಬಾಂಬೆ ಸರ್ಕಾರವು ಒಂದು ಜ್ಞಾಪಕ ಪತ್ರದಲ್ಲಿ "ಸಂಘವು ತನ್ನನ್ನು ತಾನು ನಿಷ್ಠುರವಾಗಿ ಕಾನೂನಿನ ಚೌಕಟ್ಟಿನೊಳಗೆ ಇಟ್ಟುಕೊಂಡಿದೆ ಮತ್ತು ಚಳವಳಿಯಲ್ಲಿ ಭಾಗವಹಿಸುವದನ್ನು ನಿರ್ದಿಷ್ಟವಾಗಿ ನಿರಾಕರಿಸಿದೆ." ಎಂದು ಗಣನೀಯ ತೃಪ್ತಿಯೊಂದಿಗೆ ಗಮನಿಸಿದೆ, ಆದರೆ ಆರೆಸ್ಸೆಸ್ ನಾಯಕತ್ವವು ಸ್ವಾತಂತ್ರ್ಯ ಹೋರಾಟದಲ್ಲಿ ಭಾಗವಹಿಸದಿರಲು ಒಂದು ಕುತೂಹಲಕಾರಿ ಕಾರಣವನ್ನು ಹೊಂದಿತ್ತು. ಅನಾವಶ್ಯಕವಾಗಿ, ಬ್ರಿಟಿಷರಿಂದ ನಿರ್ಮಿತ ಕ್ಷಾಮವು ಬಂಗಾಳದಲ್ಲಿ ಕನಿಷ್ಠ ಮೂರು ಮಿಲಿಯನ್ ಭಾರತೀಯರನ್ನು ಕೊಂದ ಕೆಲವು ತಿಂಗಳುಗಳ ಮೊದಲು ಜೂನ್ 1942 ರಂದು ನೀಡಿದ ಭಾಷಣದಲ್ಲಿ ಗೋಳ್ವಾಲ್ಕರ್ ಹೀಗೆ ಹೇಳುತ್ತಾರೆ "ಸಮಾಜದ ಪ್ರಸ್ತುತ ಅಧೋಗತಿಗೆ ಬೇರೆ ಯಾರನ್ನೂ ದೂಷಿಸಲು ಸಂಘವು ಬಯಸುವುದಿಲ್ಲ. ಜನರು ಇತರರನ್ನು ದೂಷಿಸಲು ಪ್ರಾರಂಭಿಸುವಲ್ಲಿ, ಮೂಲತಃ ದೌರ್ಬಲ್ಯವಿದೆ. ದುರ್ಬಲರಿಗೆ ಮಾಡಿದ ಅನ್ಯಾಯಕ್ಕೆ ಬಲಿಷ್ಠರನ್ನು ದೂಷಿಸುವುದು ವ್ಯರ್ಥ...ಸಂಘವು ಇತರರನ್ನು ನಿಂದಿಸುವುದರಲ್ಲಿ ಅಥವಾ ಟೀಕಿಸುವುದರಲ್ಲಿ ತನ್ನ ಅಮೂಲ್ಯ ಸಮಯವನ್ನು ವ್ಯರ್ಥಮಾಡಲು ಬಯಸುವುದಿಲ್ಲ. ದೊಡ್ಡ ಮೀನುಗಳು ಚಿಕ್ಕ ಮೀನುಗಳನ್ನು ತಿನ್ನುತ್ತವೆ ಎಂದು ನಮಗೆ ತಿಳಿದಿದ್ದರೆ, ದೊಡ್ಡ ಮೀನುಗಳನ್ನು ದೂಷಿಸುವುದು ಹುಚ್ಚುತನವಾಗಿದೆ. ಒಳ್ಳೆಯದು ಅಥವಾ ಕೆಟ್ಟದ್ದು ಸಾರ್ವಕಾಲಿಕ ಸತ್ಯ ಅದು ಪ್ರಕೃತಿಯ ಸಹಜ ನಿಯಮ. ಅದನ್ನು ಅನ್ಯಾಯವೆಂದು ಕರೆಯುವುದರಿಂದ ಈ ನಿಯಮವು ಬದಲಾಗುವುದಿಲ್ಲ".

ನಾಥೂರಾಮ್ ಗೋಡ್ಸೆಯಿಂದ ಮಹಾತ್ಮ ಗಾಂಧಿ ಹತ್ಯೆಯ ಕೆಲವು ದಿನಗಳ ನಂತರ 30.1.1948 ರಂದು ಆರ್‌ಎಸ್‌ಎಸ್ ನಾಯಕರನ್ನು ಬಂಧಿಸಲಾಯಿತು ಮತ್ತು ಸಂಘಟನೆಯನ್ನು ನಿಷೇಧಿಸಲಾಯಿತು. ಫೆಬ್ರವರಿ 4 ರಂದು ಹೊರಡಿಸಿದ ಪ್ರಕಟಣೆಯಲ್ಲಿ ಸರ್ಕಾರವು ಹೀಗೆ ವಿವರಿಸಿದೆ.

".. ನಮ್ಮ ದೇಶದಲ್ಲಿ ರಾಷ್ಟ್ರದ ಸ್ವಾತಂತ್ರ್ಯಕ್ಕೆ ಧಕ್ಕೆ ತರಲು.. ಕೆಲಸ ಮಾಡುತ್ತಿರುವ, ದ್ವೇಷ ಮತ್ತು ಹಿಂಸಾಚಾರದ ಶಕ್ತಿಗಳನ್ನು ಬೇರುಸಹಿತ ಕಿತ್ತೊಗೆಯಲು.. ಭಾರತ ಸರ್ಕಾರವು ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಕಾನೂನುಬಾಹಿರ ಎಂದು ಘೋಷಿಸಲು ನಿರ್ಧರಿಸಿದೆ. ದೇಶದ ಹಲವಾರು ಭಾಗಗಳಲ್ಲಿ, ರಾಷ್ಟ್ರೀಯ ಸ್ವಯಂಸೇವಕ ಸಂಘದ ಕೆಲವು ಸದಸ್ಯರು ಬೆಂಕಿ ಹಚ್ಚುವಿಕೆ, ದರೋಡೆ, ಡಕಾಯಿತ ಮತ್ತು ಕೊಲೆಗಳನ್ನು ಒಳಗೊಂಡ ಹಿಂಸಾಚಾರದ ಕೃತ್ಯಗಳಲ್ಲಿ ತೊಡಗಿದ್ದಾರೆ ಮತ್ತು ಅಕ್ರಮ ಶಸ್ತ್ರಾಸ್ತ್ರ ಮತ್ತು ಮದ್ದುಗುಂಡುಗಳನ್ನು ಸಂಗ್ರಹಿಸಿದ್ದಾರೆ. ಅವರು ಭಯೋತ್ಪಾದಕ ವಿಧಾನಗಳನ್ನು ನಡೆಸುವಂತೆ ಮತ್ತು ಗುಂಡು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸುವಂತೆ... ಜನರನ್ನು ಪ್ರೇರೇಪಿಸುವ ಕರಪತ್ರಗಳನ್ನು ವಿತರಣೆ ಮಾಡುತ್ತಿರುವುದು ಕಂಡುಬಂದಿದೆ. ಸಂಘದ ಚಟುವಟಿಕೆಗಳಿಂದ ಪ್ರಾಯೋಜಿತ ಮತ್ತು ಪ್ರೇರಿತವಾದ ಹಿಂಸಾಚಾರದ ಆರಾಧನೆಯು ಅನೇಕ ಜನರನ್ನು ಬಲಿ ತೆಗೆದು ಕೊಂಡಿದೆ. ಇತ್ತೀಚಿನ ಮತ್ತು ಅತ್ಯಂತ ಅಮೂಲ್ಯವಾದ ಬಲಿ ಗಾಂಧೀಜಿಯೇ. ಇಂತಹ ಸನ್ನಿವೇಶಗಳಲ್ಲಿ ಹಿಂಸಾಚಾರದ ಮರು-ಪ್ರತ್ಯಕ್ಷತೆಯನ್ನು ನಿಗ್ರಹಿಸಲು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳುವುದು ಸರ್ಕಾರದ ಬದ್ಧ ಕರ್ತವ್ಯವಾಗಿದೆ ಮತ್ತು ಈ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿ; ಸರ್ಕಾರ ಸಂಘವನ್ನು, ಕಾನೂನು ಬಾಹಿರ ಸಂಘ ಎಂದು ಘೋಷಿಸಿದೆ.

ಆರ್‌ಎಸ್‌ಎಸ್ ಇಂದು ತಮ್ಮವರೆಂದು ಹೇಳಿಕೊಳ್ಳುವ, ಸರ್ದಾರ್ ವಲ್ಲಭಭಾಯಿ ಪಟೇಲ್ ಅವರು ಆ ವರ್ಷದ ಸೆಪ್ಟೆಂಬರ್‌ನಲ್ಲಿ ಗೋಳ್ವಾಲ್ಕರ್‌ಗೆ ಪತ್ರ ಬರೆದು ಆರ್‌ಎಸ್‌ಎಸ್ ಅನ್ನು ನಿಷೇಧಿಸಲು ಕಾರಣಗಳನ್ನು ವಿವರಿಸಿದ್ದರು. ಅವರು ಹೀಗೆ ಹೇಳಿದ್ದಾರೆ: "ಆರ್‌ಎಸ್‌ಎಸ್‌ನ ಭಾಷಣಗಳು ಕೋಮು ವಿಷದಿಂದ ತುಂಬಿವೆ, ಈ.. ವಿಷದ ಅಂತಿಮ ಪರಿಣಾಮವಾಗಿ ದೇಶವು ಗಾಂಧೀಜಿಯವರ ಅಮೂಲ್ಯವಾದ ಜೀವವನ್ನು ಕಳೆದುಕೊಳ್ಳಬೇಕಾಯಿತು. ಆರ್‌ಎಸ್‌ಎಸ್ ಪರವಾಗಿ ಸರ್ಕಾರ ಅಥವಾ ಜನರ ಸಹಾನುಭೂತಿಯ ಒಂದು ತುಣುಕೂ ಉಳಿದಿಲ್ಲ. ವಾಸ್ತವವಾಗಿ ವಿರೋಧ ಬೆಳೆದಿದೆ.. ಗಾಂಧೀಜಿಯವರ ಮರಣದ ನಂತರ ಆರ್‌ಎಸ್‌ಎಸ್‌ನವರು ಸಂತೋಷ ವ್ಯಕ್ತಪಡಿಸಿದಾಗ ಮತ್ತು ಸಿಹಿ ಹಂಚಿದಾಗ ವಿರೋಧವು ಮತ್ತಷ್ಟು ತೀಕ್ಷ್ಣವಾಗಿದೆ.. ಈ ಪರಿಸ್ಥಿತಿಗಳಲ್ಲಿ ಆರ್‌ಎಸ್‌ಎಸ್ ವಿರುದ್ಧ ಕ್ರಮ ಕೈಗೊಳ್ಳುವುದು ಸರ್ಕಾರಕ್ಕೆ ಅನಿವಾರ್ಯವಾಯಿತು." 1948 ರ ಜುಲೈನಲ್ಲಿ, ಪಟೇಲ್, ಹಿಂದೂ ಮಹಾಸಭಾ ನಾಯಕ ಶ್ಯಾಮ ಪ್ರಸಾದ್ ಮುಖರ್ಜಿ ಅವರಿಗೆ ಇದೇ ರೀತಿಯ ಪತ್ರ ಬರೆದರು.

ಮನುಸ್ಮೃತಿ
ಆರ್‌ಎಸ್‌ಎಸ್ ನ ಹೃದಯವನ್ನು ಆಳುತ್ತಿದೆ

ನಾಲ್ಕು ತಿಂಗಳ ನಂತರ, ಕರಡು ಸಮಿತಿಯು ಸಂವಿಧಾನವನ್ನು ರಚಿಸುವ ಪ್ರಕ್ರಿಯೆಯನ್ನು ಪೂರ್ಣಗೊಳಿಸಿದ ನಂತರ, ತನ್ನ ಪತ್ರಿಕೆ ಆರ್ಗನೈಸರ್ ನಲ್ಲಿ ನವೆಂಬರ್ 30, 1949 ರಂದು ಪ್ರಕಟವಾದ ಲೇಖನದಲ್ಲಿ ಆರ್‌ಎಸ್‌ಎಸ್ ಸಂವಿಧಾನಕ್ಕೆ ಆಕ್ಷೇಪಣೆಯನ್ನು ಎತ್ತುತ್ತಾ ಹೀಗೆ ಹೇಳಿತು:

"ಆದರೆ ನಮ್ಮ ಸಂವಿಧಾನದಲ್ಲಿ, ಪ್ರಾಚೀನ ಭಾರತದಲ್ಲಿನ ಆ ವಿಶಿಷ್ಟವಾದ ಸಂವಿಧಾನಾತ್ಮಕ ಅಭಿವೃದ್ಧಿಯ ಬಗ್ಗೆ ಯಾವುದೇ ಉಲ್ಲೇಖವಿಲ್ಲ... ಇಂದಿಗೂ ಮನುಸ್ಮೃತಿಯಲ್ಲಿ ನಮೂದಿಸಿದ ಮನುವಿನ ಕಾನೂನುಗಳು ಪ್ರಪಂಚದ ಮೆಚ್ಚುಗೆಯನ್ನು ಪಡೆಯುತ್ತಿವೆ. ಮತ್ತು ಸ್ವಯಂಪ್ರೇರಿತ ವಿಧೇಯತೆ ಮತ್ತು ಅನುಸರಣೆಯನ್ನು ಹೊರಹೊಮ್ಮಿಸುತ್ತಿವೆ. ಆದರೆ ನಮ್ಮ ಸಂವಿಧಾನ ಪಂಡಿತರಿಗೆ ಅದು ಏನೂ ಅರ್ಥವಾಗುತ್ತಿಲ್ಲ."


ಹೀಗೆ ಇದು ಆರ್‌ಎಸ್‌ಎಸ್ ನ ಪ್ರತಿಗಾಮಿ ಮನಸ್ಥಿತಿಯ ಒಳನೋಟವನ್ನು ನೀಡುತ್ತದೆ. ಅದು ಮನುಸ್ಮೃತಿಯನ್ನು ಸಂವಿಧಾನಕ್ಕಿಂತ ಶ್ರೇಷ್ಠವೆಂದು ಪರಿಗಣಿಸುತ್ತದೆ. ಮನುಸ್ಮೃತಿಯು ಸುಪ್ರಸಿದ್ಧವಾಗಿರುವ ಕಾನೂನು ಸಂಹಿತೆಯಾಗಿದೆ, ಅದರ ಪ್ರಕಾರ, "ಬ್ರಾಹ್ಮಣರ ಸೇವೆಯು ಮಾತ್ರ ಶೂದ್ರರಿಗೆ ಅತ್ಯುತ್ತಮ ಉದ್ಯೋಗವೆಂದು ಘೋಷಿಸಲಾಗಿದೆ; ಯಾಕೆಂದರೆ ಇದನ್ನು ಹೊರತುಪಡಿಸಿ ಅವನು ಏನು ಮಾಡಿದರೂ ಅದು ಅವನಿಗೆ ಫಲ ನೀಡುವುದಿಲ್ಲ. ಇದು ಶೂದ್ರನು ಸಂಪತ್ತನ್ನು ಗಳಿಸುವುದನ್ನು ನಿಷೇಧಿಸುತ್ತದೆ. ಅವನು ಎಷ್ಟೇ ಸಮರ್ಥನಾಗಿದ್ದರೂ; ಸಂಪತ್ತು ಗಳಿಸಿದ ಶೂದ್ರನು ಬ್ರಾಹ್ಮಣರಿಗೆ ನೋವು ಕೊಡುತ್ತಾನೆ".

ಸಂವಿಧಾನವನ್ನು ಅಧಿಕೃತವಾಗಿ ದೇಶವು ಅಂಗೀಕರಿಸಿದ ನಂತರವೂ ಸಂವಿಧಾನದ ಬದಲಿಗೆ ಮನುಸ್ಮೃತಿಯನ್ನು ಜಾರಿಗೆ ತರುವ ಆರ್‌ಎಸ್‌ಎಸ್‌ನ ಅಭಿಯಾನವು ಮುಂದಿನ ವರ್ಷವೂ ಮುಂದುವರೆಯಿತು. "ಮನು ನಮ್ಮ ಹೃದಯವನ್ನು ಆಳುತ್ತಾನೆ" ಎಂಬ ಶೀರ್ಷಿಕೆಯ ಸಂಪಾದಕೀಯದಲ್ಲಿ ಆರ್‌ಎಸ್‌ಎಸ್ ಧಿಕ್ಕಾರದ ಧ್ವನಿಯಲ್ಲಿ ಇದನ್ನೇ ಪ್ರತಿಪಾದಿಸುತ್ತದೆ.

ಪ್ರಸ್ತುತ ರಾಜಕೀಯ ವ್ಯವಸ್ಥೆ:
ನಾಚಿಕೆಯಿಲ್ಲದ ದೇಶದ್ರೋಹಿಗಳ ಭಂಡಾರ

ಸ್ವಾತಂತ್ರ್ಯದ ಈ 75 ನೇ ವರ್ಷದಲ್ಲಿ, ಈ ಫ್ಯಾಸಿಸ್ಟ್ ಆರ್‌ಎಸ್‌ಎಸ್ನ ರಿಮೋಟ್ ಕಂಟ್ರೋಲ್ಲಲ್ಲಿ ನಡೆಯುತ್ತಿರುವ ಈಗಿನ ಮೋದಿ ನೇತೃತ್ವದ ಬಿಜೆಪಿ-ಎನ್‌ಡಿಎ ಸರ್ಕಾರವು ಕೇಂದ್ರ ಮತ್ತು ಹಲವಾರು ರಾಜ್ಯಗಳಲ್ಲಿ ಆಳುತ್ತಿದೆ. ಈ ವರ್ಷವನ್ನು ಅಮೃತ್

ಪುಟ 10 ಕ್ಕೆ


ಒಡೆದದ್ದು ಮೂರು ಗುಮ್ಮಟಗಳನ್ನಲ್ಲ, ಸಂವಿಧಾನದ ಆಧಾರ ಸ್ತಂಭಗಳನ್ನು





ಅಭದ್ರತೆ, ಸಾವಿನ ಕುಣಿಯಲ್ಲಿ ಪೌರಕಾರ್ಮಿಕರ ಜೀವನ: ಬದಲಾವಣೆಯ ಹೋರಾಟಕ್ಕೆ ಸಮಾವೇಶದಲ್ಲಿ ಕರೆ

ತುಮಕೂರು: ದೇಶದ ಸರ್ವೋಚ್ಚ ನ್ಯಾಯಾಲಯ 2014ರಲ್ಲಿಯೇ ಯಾವುದೇ ಮುಂಜಾಗ್ರತಾ ಪರಿಕರಗಳಿಲ್ಲದೆ ಪೌರಕಾರ್ಮಿಕರನ್ನು ಕೆಲಸಕ್ಕೆ ನಿಯೋಜಿಸಿದರೆ ಅದು ಶಿಕ್ಷಾರ್ಹ ಅಪರಾಧ ಎಂದು ಹೇಳಿದೆ. ಆದರೆ ವರ್ಷಕ್ಕೆ ನೂರಾರು ಪಿ.ಕೆ.ಎಸ್.ಗಳು ಮಲಗುಂಡಿ ಸ್ವಚ್ಚಗೊಳಿಸುವ ವೇಳೆ ಮೃತಪಟ್ಟರು ಇದುವರೆಗೂ ಯಾವ ಅಧಿಕಾರಿಯ ವಿರುದ್ದವೂ ಶಿಕ್ಷೆಯಾಗಿಲ್ಲ. ಈ ವಿಚಾರದಲ್ಲಿ ಸರಕಾರವೇ ಮೊದಲ ಅಪರಾಧಿ ಎಂದು ನ್ಯಾ. ನಾಗಮೋಹನ್ ದಾಸ್ ಅಭಿಪ್ರಾಯಪಟ್ಟಿದ್ದಾರೆ.

ನಗರದ ಬಾಲಭವನದಲ್ಲಿ ಸಿಯಟಿಯು ನೇತೃತ್ವದ ಕರ್ನಾಟಕ ರಾಜ್ಯ ಮುನ್ಸಿಪಲ್ ಕಾರ್ಮಿಕರ ಸಂಘ ಮುನ್ಸಿಪಲ್ ಕಾರ್ಮಿಕರಿಗೆ ಸಮಾನ ಕೆಲಸಕ್ಕೆ ಸಮಾನ ವೇತನ ಎಂಬ ಬೇಡಿಕೆ ಹಿನ್ನೇಲೆಯಲ್ಲಿ ಆಯೋಜಿಸಿದ್ದ ರಾಜ್ಯ ಸಮಾವೇಶವನ್ನು ಉದ್ಘಾಟಿಸಿ ಮಾತನಾಡುತಿದ್ದ ಅವರು, ಲಕ್ಷಾಂತರ ಸಂಖ್ಯೆಯಲ್ಲಿರುವ ಮುನ್ಸಿಪಲ್ ನೌಕರರನ್ನು ಕಸ ಗುಡಿಸುವವರು, ಕಸ ಎತ್ತುವವರು, ಸಾಗಿಸುವವರು ಹೀಗೆ ಹಲವು ವಿಭಾಗಗಳಾಗಿ ವಿಂಗಡಿಸಿ, ಒಡೆದು ಆಳುವ ನೀತಿಯನ್ನು ಅನುಸರಿಸುವ ಮೂಲಕ ನಮ್ಮ ಧ್ವನಿ ಹೆಚ್ಚಾಗದಂತೆ ಮಾಡುತ್ತಿದೆ ಎಂದರು.

ನಿರುದ್ಯೋಗವೆಂದರೆ ಕೇವಲ ಕೆಲಸವಿಲ್ಲದೆ ಇರುವುದು ಎಂದರ್ಥವಲ್ಲ. ಇದರ ಹಿಂದೆ ಕಳ್ಳತನ, ಸುಲಿಗೆ, ದರೋಡೆ, ಭಯೋತ್ಪಾದನೆಯಂತಹ ಸಮಾಜ ವಿದ್ರೋಹಿ ಕೃತ್ಯಗಳು ಅಡಗಿರುವುದರಿಂದ ಸರಕಾರಗಳು ನಿರುದ್ಯೋಗ ಸಮಸ್ಯೆಯ ನಿವಾರಣೆಗೆ ಮುಂದಾಗಬೇಕು. ಆದರೆ ಆಳುವ ಸರಕಾರಗಳಿಗೆ ನಿರುದ್ಯೋಗ ಒಂದು ರಾಜಕೀಯ ವಿಷಯವಾಗಿದೆಯೇ ಹೊರತು ಇದರ ಹಿಂದಿನ ಸಮಾಜೋ ಅರ್ಥಿಕ ಸಮಸ್ಯೆಗಳ ಪರಿಚಯವೇ ಇಲ್ಲ. ಎಲ್ಲವನ್ನು ಚುನಾವಣೆಯ ದೃಷ್ಟಿಕೋನದಿಂದ ನೋಡಲಾಗುತ್ತಿದೆ ಎಂದು ನ್ಯಾ. ನಾಗಮೋಹನ್ ದಾಸ್ ನುಡಿದರು.

ಸಮಾನ ಶಿಕ್ಷಣ ಎಂಬುದು ಮರೀಚಿಕೆಯಾಗಿದೆ. ಐಸಿಎಇ, ಸಿಬಿಎಸ್ಇ, ಖಾಸಗಿ, ಸರಕಾರಿ, ಅನುದಾನಿತ, ಅನುದಾನರಹಿತ ಹೀಗೆ ಹಲವು ಭಾಗಗಳಾಗಿ ವಿಂಗಡಿಸಿ, ಬಡವರು, ತಳಸಮುದಾಯದ ಮಕ್ಕಳಿಗೆ ಗುಣಮಟ್ಟದ ಶಿಕ್ಷಣದಿಂದ ವಂಚಿಸಲಾಗುತ್ತಿದೆ. ದೊಡ್ಡ ಕಟ್ಟಡ, ಪೀಠೋಪಕರಣ, ಪ್ರಯೋಗಾಲಯಗಳೇ ಶಿಕ್ಷಣವೆಂದು ಸರಕಾರಗಳು ತಿಳಿದಂತಿದೆ. ಮಾನವೀಯ ಕಳಕಳಿ, ಸಮಾಜಿಕ ಸ್ಪಂದನೆ ಇಲ್ಲದ ಶಿಕ್ಷಣ, ಜನರ ಕಷ್ಟಗಳಿಗೆ ಪರಿಹಾರ ದೊರಕಿಸುವಂತಹ ಶಿಕ್ಷಣ ಇಲ್ಲವಾಗಿದೆ. ಜಾತಿ, ಧರ್ಮ, ಭಾಷೆಯ ಹೆಸರಿನಲ್ಲಿ ಮಕ್ಕಳಲ್ಲಿ ವಿಷಬೀಜ ಬಿತ್ತಿ, ಹಾಳು ಮಾಡಲಾಗುತ್ತಿದೆ ಎಂದು ನಾಗಮೋಹನ್ ದಾಸ್ ಕಳವಳ ವ್ಯಕ್ತಪಡಿಸಿದರು.

ಇಂದು ಶಿಕ್ಷಣ ಪಡೆದವರಲ್ಲಿ ನಿರುದ್ಯೋಗಿಗಳು, ಅರೆಉದ್ಯೋಗಿಗಳು, ಉದ್ಯೋಗಕ್ಕೆ ಆರ್ಹರಲ್ಲದವರ ಕಾಣಬಹುದಾಗಿದೆ. ಪದವಿ ಪಡೆದ ಶೇ.80 ರಷ್ಟು ಯುವಜನರಿಗೆ ಉದ್ಯೋಗಕ್ಕೆ ಬೇಕಾದ ಕೌಶಲ್ಯವೇ ಇಲ್ಲ. ದೇಶದಲ್ಲಿ 60.40 ಲಕ್ಷ ಹುದ್ದೆಗಳು ಖಾಲಿ ಇವೆ. ಕರ್ನಾಟಕದಲ್ಲಿಯೇ ಸುಮಾರು 2.59 ಲಕ್ಷ ಮಂಜೂರಾದ ಹುದ್ದೆಗಳೇ ಖಾಲಿ ಇವೆ. ಇವುಗಳನ್ನು ತುಂಬುವಾಗ ರೋಸ್ಟರ್ ಪದ್ಧತಿ ಅನುಸರಿಸಬೇಕು. ಆಗ ತಳಸಮುದಾಯಗಳಿಗೆ ಉದ್ಯೋಗ ದೊರೆತು ಅವರು ಅರ್ಥಿಕವಾಗಿ, ಸಾಮಾಜಿಕವಾಗಿ ಮುಂದೆ ಬರುತ್ತಾರೆ ಎಂಬ ಕಾರಣಕ್ಕೆ ಹುದ್ದೆಗಳನ್ನು ತುಂಬದೇ, ಗುತ್ತಿಗೆ, ಹೊರಗುತ್ತಿಗೆ ಆಧಾರದಲ್ಲಿ ಜೀತದಾಳುಗಳಂತೆ ದುಡಿಸಿಕೊಳ್ಳಲಾಗುತ್ತಿದೆ. ರಾಜ್ಯದ 29 ಇಲಾಖೆಗಳಲ್ಲಿ ಶೇ.30 ರಷ್ಟು ಉದ್ಯೋಗಿಗಳು ಹೊರಗುತ್ತಿಗೆ ಆಧಾರದಲ್ಲಿಯೇ ನೇಮಕಗೊಂಡವರು. ಇವರಿಗೆ ಯಾವುದೇ ಕಾರ್ಮಿಕ ಕಾಯ್ದೆ ಅನ್ವಯ ಆಗಲ್ಲ. ಇದು ಈ ದೇಶದ ದುರಂತ ಎಂದರು.

ದೇಶದಲ್ಲಿ ವಿಜ್ಞಾನ ತಂತ್ರಜ್ಞಾನ ಇಷ್ಟೊಂದು ಮುಂದುವರೆದಿದ್ದರೂ ಪೌರಕಾರ್ಮಿಕರ ಕೆಲಸಗಳಿಗೆ ಇವು ಬಳಕೆಯಾಗುತ್ತಿಲ್ಲ. ಇಂದಿಗೂ ಶೌಚಗುಂಡಿಗೆ ಪೌರಕಾರ್ಮಿಕರೇ ಇಳಿದು ಸ್ವಚ್ಚಗೊಳಿಸಬೇಕಿದೆ. ಒಂದು ವರದಿಯ ಪ್ರಕಾರ ವರ್ಷಕ್ಕೆ 300 ಜನ ಪೌರಕಾರ್ಮಿಕರು ತಾವು ಸೇವಾನಿರತರಾಗಿರುವಾಗಲೇ ಸಾವನ್ನಪ್ಪುತಿದ್ದಾರೆ. ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕೆಂಬ ನಿಮ್ಮ ಬೇಡಿಕೆ ನ್ಯಾಯಯುತವಾಗಿದೆ. 2017ರಲ್ಲಿ ಸರಕಾರದ ಆದೇಶ ಇದೆ. ಹಾಗಾಗಿ ಕಾನೂನಾತ್ಮಕ ಹೋರಾಟದಲ್ಲಿ ನಾನು ಸದಾ ನಿಮ್ಮೊಂದಿಗೆ ಇರುತ್ತೇನೆ. ಜನಪರ ಹೋರಾಟಗಳೇ ಜನರ ಸಮಸ್ಯೆಗಳ ಪರಿಹಾರಕ್ಕೆ ಇರುವ ಮದ್ದು, ಹಾಗಾಗಿ ಎಲ್ಲರೂ ಒಗ್ಗೂಡಿ ಹೋರಾಟ ನಡೆಸುವಂತೆ ನ್ಯಾ. ನಾಗಮೋಹನ್ ದಾಸ್ ಪೌರಕಾರ್ಮಿಕರಿಗೆ ಸಲಹೆ ನೀಡಿದರು.

ಹಿರಿಯ ಚಿಂತಕ ಕೆ. ದೊರೆರಾಜು ಮಾತನಾಡಿ, ಪೌರಕಾರ್ಮಿಕರನ್ನು ಘನತೆಯಿಂದ ನಡೆಸಿಕೊಳ್ಳದಿರುವುದು ಈ ದೇಶದ ದುರಂತ. ಒಂದು ದಿನ ಅವರ ಕೆಲಸಕ್ಕೆ ಸಾಮೂಹಿಕ ರಜೆ ಹಾಕಿದರೆ, ಇಡೀ ದೇಶವೇ ಕೊಚ್ಚೆಗುಂಡಿಯಂತಾಗುತ್ತದೆ. ಹಾಗಾಗಿ ಪೌರಕಾರ್ಮಿಕರ ವೇತನ ಕುರಿತಂತೆ ಒಂದು ರಾಷ್ಟ್ರೀಯ ನೀತಿಯ ಅಗತ್ಯವಿದೆ. ಪೌರಕಾರ್ಮಿಕರನ್ನು ತಮ್ಮ ಬದುಕಿನ ಉನ್ನತ್ತಿಕರಣದತ್ತ ಗಮನಹರಿಸಬೇಕು. ನಮ್ಮಂತೆ ನಮ್ಮ ಮಕ್ಕಳು ಪೌರಕಾರ್ಮಿಕರಂತೆ ನೋಡಿಕೊಂಡರೆ, ಅದಕ್ಕಿಂತ ದೊಡ್ಡ ಬದಲಾವಣೆ ಮತ್ತೊಂದಿಲ್ಲ. ಈ ನಿಟ್ಟಿನಲ್ಲಿ ಎಲ್ಲಾ ಪೌರಕಾರ್ಮಿಕರು ಚಿಂತನೆ ನಡೆಸಬೇಕಿದೆ ಎಂದರು.

ತುಮಕೂರು ಮಹಾನಗರಪಾಲಿಕೆ ಆಯುಕ್ತರಾದ ಶ್ರೀಮತಿ ರೇಣುಕ ಮಾತನಾಡಿ, ಸಮಾನ ಕೆಲಸಕ್ಕೆ ಸಮಾನ ವೇತನ ಕುರಿತಂತೆ ನಿರ್ದೇಶಕರ ಕಚೇರಿಯಲ್ಲಿ ಈಗಾಗಲೇ ಚರ್ಚೆ ಸಾಧ್ಯವಾದಷ್ಟು ಮಕ್ಕಳನ್ನು ಒಳ್ಳೆಯ ವಿದ್ಯಾವಂತರನ್ನಾಗಿಸಿ, ಉತ್ತಮ ಪ್ರಜೆಗಳಾಗಿ ರೂಪಿಸಿ ಎಂದು ಸಲಹೆ ನೀಡಿದರು.

ವೇದಿಕೆಯಲ್ಲಿ ಸ್ಲಂ ಜನಾಂದೋಲನದ ನರಸಿಂಹಮೂರ್ತಿಅವರು ಮಾತನಾಡಿ ಮುನಿಸಿಪಲ್ ಕಾರ್ಮಿಕರ ಐಕ್ಯ ಹೋರಾಟವನ್ನು ನಡೆಸಬೇಕಾಗಿದೆ ಎಂದರು.

ಪ್ರಾಸ್ತವಿಕ ನುಡಿಗಳನ್ನು ಅಡಿದ ಸೈಯದ್ ಮುಜೀಬ್ ಅವರು ನಾಗರಿಕ ಅಗತ್ಯಗಳಾದ ಸ್ವಚ್ಚತೆ, ನೀರು ಸರಬರಾಜು, ಒಳ ಚರಂಡಿ, ಪಾರ್ಕ್, ಸ್ಮಶಾಣಗಳಲ್ಲಿ ದುಡಿಯುವ ಕಾರ್ಮಿಕರು 80% ರಷ್ಟು ಗುತ್ತಿಗೆ ಆಧಾರದಲ್ಲಿ ಇದ್ದಾರೆ. ಅವರಿಗೆ ಕಾನೂನು ಬದ್ದ ಸೌಲಭ್ಯಗಳನ್ನು ನೀಡದ ವಂಚಿಸಲಾಗುತ್ತಿದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕರ್ನಾಟಕ ರಾಜ್ಯ ಮುನ್ಸಿಪಲ್ ಕಾರ್ಮಿಕರ ಸಂಘದ ಅಧ್ಯಕ್ಷ ಹರೀಶ್ ನಾಯ್ಕ ವಹಿಸಿದ್ದರು.

ಸಿಐಟಿಯುನ ಎನ್.ಕೆ. ಸುಬ್ರಮಣ್ಯ, ನಿರೂಪಿಸಿದ, ಸಿ. ವೆಂಕಟೇಶ್ ಸ್ವಾಗತಿಸಿ, ಕುಮಾರ್ ವಂದಿಸಿದರು, ಸೇರಿದಂತೆ ಹಲವರು ಉಪಸ್ಥಿತರಿದ್ದರು. ವೇದಿಕೆಯಲ್ಲಿ ಶಿವರಾಜು, ಸ್ಯಾಮ್ ಸನ್, ಲಕ್ಷ್ಮಣ್ ಹಂದ್ರಾಳ್, ಶಾನೂನು ಗುಡ್ಡಾರ್, ಪ್ರಕಾಶ್, ಡಿ.ಎಸ್.ಎಸ್.ಪಿ. ಎನ್. ರಾಮಯ್ಯ, ಸಪಾಯಿ ಕರ್ಮಚಾರಿ ಕಾವಲು ಸಮಿತಿಯ ಓಬಳೇಶ್ ಇತರರು ಇದ್ದರು.

ಸ್ವಾತಂತ್ರ್ಯದ 75ನೇ ವರ್ಷ........ ಪುಟ 9 ರಿಂದ

ವರ್ಷ ಎಂದು ಹೆಸರಿಸಲಾಗಿದ್ದರೂ ಸಹ, ಭಾರತವನ್ನು ರಾಷ್ಟ್ರಪ್ರಭುತ್ವವಾಗಿ ಕಟ್ಟಿದ ಇದುವರೆಗಿನ ಕಲ್ಪನೆಯನ್ನು ರದ್ದುಗೊಳಿಸಲು ಅವರು ನಡೆಸುತ್ತಿರುವ ಸಿನಿಕತನದ ಹತಾಶ ಕುತಂತ್ರಗಳು ಪ್ರತಿಯೊಂದು ರೀತಿಯ ವಿಷ–ಪ್ರಾಶನಕ್ಕೆ ಸಾಕ್ಷಿಯಾಗಿದೆ.

ಪ್ರಸ್ತುತ ವ್ಯವಸ್ಥೆಯ ರಾಜಕೀಯ ಅರ್ಥಶಾಸ್ತ್ರವು ನವ ಉದಾರವಾದಿ ನೀತಿಗಳ ಅಡೆತಡೆಯಿಲ್ಲದ ಮುಂದುವರಿಕೆಯ ಮೂಲಕ ಹೆಚ್ಚುವರಿ ಮೌಲ್ಯವನ್ನು ಸುಲಿಗೆ ಮಾಡಲು ಮತ್ತು ಬೆರಳೆಣಿಕೆಯಷ್ಟು ಜನರು ಖಾಸಗಿ ಲಾಭಕ್ಕಾಗಿ ರಾಷ್ಟ್ರೀಯ ಸಂಪತ್ತಿನ ಸ್ವಾಧೀನಪಡಿಸಿಕೊಳ್ಳಲು ಅವಕಾಶ ಮಾಡಿ ಕೊಡುತ್ತಿದೆ.. ಈ ವಿಚ್ಛಿದ್ರಕಾರಿ ಶಕ್ತಿಗಳಿಂದ ಧರ್ಮ, ಜಾತಿ, ಉಪಜಾತಿ, ಭಾಷೆ ಮತ್ತು ಪ್ರದೇಶದ ಅಸ್ಮಿತೆಗಳನ್ನು ಮುನ್ನೆಲೆಗೆ ತರುವ ಮೂಲಕ, ಒಂದು ಅಸ್ಮಿತೆಯಾಗಿ ವರ್ಗವನ್ನು ನಿರಾಕರಿಸುವ ಆಧುನಿಕೋತ್ತರ ಚಿಂತನೆಯನ್ನು ಮುಂದುವರಿಸಲಾಗುತ್ತಿದೆ. ಆಡಳಿತದಲ್ಲಿ ಕೋಮುವಾದಿ– ಕಾರ್ಪೊರೇಟ್ ನಂಟು ಒಂದು ಕಡೆ ನವ ಉದಾರವಾದವನ್ನು ಆಕ್ರಮಣಕಾರಿಯಾಗಿ ಅನುಸರಿಸುತ್ತಿದೆ ಮತ್ತು ಇನ್ನೊಂದು ಕಡೆ ವಿಚ್ಛಿದ್ರಕಾರಿ ಶಕ್ತಿಗಳನ್ನು ಪ್ರೋತ್ಸಾಹಿಸುತ್ತಿದೆ. ಅವರ ಸ್ಫೂರ್ತಿ ಮತ್ತು ಚಟುವಟಿಕೆಗಳ ಮೂಲ ಭಾರತದ ಸಂವಿಧಾನವಲ್ಲ ಬದಲಾಗಿ, ಎಮ್.ಎಸ್.ಗೋಳ್ವಾಲ್ಕರ್. ಬರೆದ "ನಾವು ಅಥವಾ ನಮ್ಮ ರಾಷ್ಟವಾದ"ದ ವ್ಯಾಖ್ಯಾನ (ವೀ ಅಂಡ್ ಅವರ್ ನೇಶನ್ ವುಡ್ ಡಿಫೈನ್ಡ್)" (1939) ಮತ್ತು "ಬಂಚ್ ಆಫ್ ಥಾಟ್ಸ್ (1966) ಪುಸ್ತಕಗಳು. ರಾಷ್ಟ್ರ, ರಾಷ್ಟ್ರೀಯತೆ ಮತ್ತು ರಾಜ್ಯದ ಕಲ್ಪನೆಯನ್ನು ಚಿತ್ರಿಸುತಿದ್ದರೆ, ಎರಡನೆಯದು ಆ ವಿಚಾರಗಳನ್ನು ಮತ್ತಷ್ಟು ಸ್ಪಷ್ಟಪಡಿಸುತ್ತದೆ ಮತ್ತು ಮುಸ್ಲಿಮರು, ಕ್ರಿಶ್ಚಿಯನ್ನರು ಮತ್ತು ಕಮ್ಯೂನಿಸ್ಟರನ್ನು ಆಂತರಿಕ ಶತ್ರುಗಳೆಂದು ಘೋಷಿಸುತ್ತದೆ ಮತ್ತು ಏಕೀಕೃತ ದೇಶಕ್ಕಾಗಿ ವಾದಿಸುತ್ತದೆ. ಇದರ ಸಂಪೂರ್ಣ ಹರವು ಸ್ವಾತಂತ್ರ್ಯದ 75 ನೇ ವರ್ಷದಲ್ಲಿ ಕೇಂದ್ರ ಮತ್ತು ರಾಜ್ಯಗಳಲ್ಲಿ ಆರೆಸ್ಸೆಸ್, ಬಿಜೆಪಿಯ ವಿವಿಧ ಅಂಗಸಂಸ್ಥೆಗಳಿಂದ ಮತ್ತು ಅವರ ಸರ್ಕಾರಗಳಿಂದ ಅನಾವರಣಗೊಂಡಿದೆ.

ಇಂತಹ ವಿಷಪೂರಿತ ವಿಚಾರಗಳು ಮತ್ತು ತತ್ತ್ವಶಾಸ್ತ್ರವನ್ನು ಅಳವಡಿಸಿಕೊಂಡಿರುವ, ಸ್ವಾತಂತ್ರ್ಯ ಹೋರಾಟಕ್ಕೆ ದ್ರೋಹ ಬಗೆದ, ಅದೇ ದ್ರೋಹಿಗಳ ಕುಲದ ಈಗಿನ ಕುಡಿ, ಅತ್ಯಂತ ದುರದೃಷ್ಟವಶಾತ್ ಪ್ರಸ್ತುತ ಸಮಯದಲ್ಲಿ ದೇಶದ ಆಡಳಿತವನ್ನು ಆಕ್ರಮಿಸಿಕೊಂಡಿದೆ ವಾಸ್ತವವಾಗಿ' ಭಾರತದ ಸಂವಿಧಾನವನ್ನು ಮನುಸ್ಮೃತಿಯಿಂದ ಬದಲಾಯಿಸುವ ಹತಾಶ ಪ್ರಯತ್ನದಲ್ಲಿ ಸ್ವತಂತ್ರ ಭಾರತದ ಏಳುವರೆ ದಶಕಗಳ ಸುದೀರ್ಘ ಅವಧಿಯ ಎಲ್ಲಾ ಸಾಧನೆಗಳಾದ, ಧರ್ಮ, ಜಾತಿ ಅಥವಾ ಪಂಥವನ್ನು ಮೀರಿ ಸಾಧಿಸಿದ ಜನರ ಐಕ್ಯತೆ,, ಸ್ವಾವಲಂಬಿ ಆರ್ಥಿಕತೆ, ಪ್ರಜಾಪ್ರಭುತ್ವ ಸಂಸ್ಥೆಗಳು ಮತ್ತು ಮತ್ತಿತರ ಎಲ್ಲಾ ಸಾಂವಿಧಾನಿಕ ಮೌಲ್ಯಗಳ ವಿರುದ್ಧ ವಿನಾಶಕಾರಿ ಯುದ್ಧವನ್ನು ಘೋಷಿಸಿದೆ. "ಆಜಾದಿ ಕಾ ಅಮೃತ್ ಮಹೋತ್ಸವ" ಎಂದು ಕರೆಯಲ್ಪಡುವ ಅವರು ಠಂಕಿಸಿದ ಬಿಲ್ಲೆ ಜನರನ್ನು ಮೋಸಗೊಳಿಸುವ ಸಂಶಯಾಸ್ಪದ ಮತ್ತು ಮೋಸಗೊಳಿಸುವ ಚಿಲ್ಲರೆ ಕೆಲಸವಾಗಿದೆ. ಈ ಸಂಶಯಾಸ್ಪದ ಬೂಟಾಟಿಕೆಯನ್ನು ಸಂಪೂರ್ಣವಾಗಿ ಬಹಿರಂಗಪಡಿಸಬೇಕು ಮತ್ತು ತಡೆದು ನಿಲ್ಲಿಸಬೇಕಿದೆ.

ಕಾರ್ಮಿಕ ವರ್ಗ ತನ್ನ ಪಾತ್ರವನ್ನು ನಿರ್ವಹಿಸಬೇಕು:

ದೇಶದ ಕಾರ್ಮಿಕ ವರ್ಗವು ಸ್ವಾತಂತ್ರ್ಯ ಚಳವಳಿಯ ಸಮಯದಲ್ಲಿ ತನ್ನ ಐತಿಹಾಸಿಕ ಪಾತ್ರವನ್ನು ವಹಿಸಿದೆ ಮಾತ್ರವಲ್ಲದೆ ತನ್ನ ವರ್ಗದ ಹಿತಾಸಕ್ತಿಗಳನ್ನು ಕಾಪಾಡುವುದರೊಂದಿಗೆ ರಾಷ್ಟ್ರದ ಏಕತೆ ಮತ್ತು ಸಮಗ್ರತೆಗಾಗಿ ಹೋರಾಡುತ್ತಾ, ಸಾಮ್ರಾಜ್ಯಶಾಹಿ ವಿರೋಧಿ ಧ್ವಜವನ್ನು ಉನ್ನತ ಮಟ್ಟದಲ್ಲಿ ಎತ್ತಿ ಹಿಡಿದಿದೆ. ಬ್ರಿಟೀಷ್ ಸಾಮ್ರಾಜ್ಯಶಾಹಿಗೆ ತಮ್ಮ ನಿಷ್ಠೆಯನ್ನು ಘೋಷಿಸುವ ಮೂಲಕ ಸ್ವಾತಂತ್ರ್ಯ ಹೋರಾಟಕ್ಕೆ ದ್ರೋಹ ಬಗೆದ ಶಕ್ತಿಗಳೇ ಈ ಮೂಲಭೂತ ಮೌಲ್ಯಗಳಾದ ಏಕತೆ, ರಾಷ್ಟ್ರೀಯ ಸಮಗ್ರತೆ ಮತ್ತು ಸಾರ್ವಭೌಮತ್ವಕ್ಕೆ ಗಂಭೀರ ಸವಾಲುಗಳನ್ನು ಒಡ್ಡುತ್ತಿರುವ ಹಿನ್ನೆಲೆಯಲ್ಲಿ, ತನ್ನ ಐತಿಹಾಸಿಕ ಜವಾಬ್ದಾರಿಯನ್ನು ನಿರ್ವಹಿಸಲು ಮತ್ತೆ ಮುಂಚೂಣಿಗೆ ಬರಬೇಕಾದದ್ದು ಕಾರ್ಮಿಕ ವರ್ಗದ ಜವಾಬ್ದಾರಿಯಾಗಿದೆ.

“ರಾಷ್ಟ್ರವನ್ನು ಉಳಿಸಿ; ಜನರನ್ನು ರಕ್ಷಿಸಿ”. ಘೋಷಣೆಯೊಂದಿಗೆ, 28–29 ಮಾರ್ಚ್ ರಂದು ಎರಡು ದಿನಗಳ ದೇಶವ್ಯಾಪಿ ಸಾರ್ವತ್ರಿಕ ಮುಷ್ಕರದ ಮೂಲಕ ಕಾರ್ಮಿಕ ವರ್ಗ ತಾನು ಇದಕ್ಕೆ ಸಿದ್ಧವೆಂದು ಘೋಷಿಸಿದೆ. ಶ್ರಮಜೀವಿಗಳು, ಕಾರ್ಮಿಕರು, ರೈತರು, ಕೃಷಿ ಕಾರ್ಮಿಕರು ಮತ್ತು ಸಮಾಜದ ಎಲ್ಲಾ ಪ್ರಗತಿಪರ ವರ್ಗಗಳ ಎಲ್ಲಾ ವಿಭಾಗಗಳನ್ನು ಒಗ್ಗೂಡಿಸಿ ಈ ಹೋರಾಟವನ್ನು ಮತ್ತಷ್ಟು ಬಲಪಡಿಸುವ, ವಿಸ್ತರಿಸುವ ಮತ್ತು ಹೊಸ ಎತ್ತರಕ್ಕೆ ಕೊಂಡೊಯ್ಯುವ ಅಗತ್ಯವಿದೆ. ಈ ದೇಶದ ಸಂಪತ್ತನ್ನು ಉತ್ಪಾದಿಸುವ ಕಾರ್ಮಿಕರು, ರೈತರು ಮತ್ತು ಶ್ರಮಜೀವಿಗಳ ಹಿತಾಸಕ್ತಿಗಳಿಗೆ ದ್ರೋಹ ಬಗೆಯುತ್ತಿರುವ ಮತ್ತು ವಿದೇಶಿ ಕಾರ್ಪೊರೇಟ್ ದಣಿಗಳಿಗೆ ಸೇವೆ ಸಲ್ಲಿಸುತ್ತಿರುವ ಈ ಸ್ವಯಂ ಘೋಷಿತ “ದೇಶಭಕ್ತರು” ಮತ್ತು ದೇಶದ್ರೋಹಿಗಳನ್ನು ಬಯಲುಗೊಳಿಸಬೇಕು.

“ತಲುಪದವರನ್ನು ತಲುಪಿ – ವರ್ಗವನ್ನು ಏಕೀಕರಿಸಿ – ನವ ಉದಾರವಾದಿ ನೀತಿಗಳನ್ನು ಮತ್ತು ವಿಭಜನೆಯ ಕುತಂತ್ರಗಳನ್ನು ಸೋಲಿಸಿ” ಎನ್ನುವ ಸಿಐಟಿಯು ಕರೆಯನ್ನು ಕಟ್ಟುನಿಟ್ಟಾಗಿ ಅನುಷ್ಠಾನಗೊಳಿಸುವುದರಿಂದ ಮತ್ತು ಹೋರಾಟ ಗಳನ್ನು ನಿರಾಕರಣೆ ಮತ್ತು ಪ್ರತಿರೋಧದ ಮಟ್ಟಕ್ಕೆ ಏರಿಸುವ ಮೂಲಕ ಮಾತ್ರ ಇದನ್ನು ಸಾಧಿಸಬಹುದು

ನಮ್ಮ ಸ್ವಾತಂತ್ರ್ಯದ ಈ 75 ನೇ ವರ್ಷದಲ್ಲಿ ಭವಿಷ್ಯದ ಪೀಳಿಗೆಗೆ ಉತ್ತಮ ಜೀವನಕ್ಕಾಗಿ ತಮ್ಮ ಸರ್ವಸ್ವವನ್ನೂ ತ್ಯಾಗ ಮಾಡಿದ ನಮ್ಮ ಪೂರ್ವಜರ ಕನಸುಗಳನ್ನು ನನಸಾಗಿಸುವ ಮಹತ್ತರ ಕಾರ್ಯಕ್ಕೆ ನಮ್ಮನ್ನು ನಾವು ಸಮರ್ಪಿಸಿಕೊಳ್ಳೋಣ.

ಭೂರಹಿತ ಕುಟುಂಬಗಳಿಗೆ ಸೇರಿದ ಅಥವಾ ಅಲ್ಪ ಭೂಮಿ ಹೊಂದಿರುವ ಮಹಿಳೆಯರಿಗೆ ಕೆಲಸ ಮಾಡಲು "ನಿರುತ್ಸಾಹಕ್ಕೊಳಗಾಗುವ" ವೈಭೋಗವೇನೂ ಇಲ್ಲ, ಇವರು "ಕಡ್ಡಾಯ" ಕೆಲಸಗಾರರು. ಅವರ ಕುಟುಂಬಗಳು ಉಣ್ಣಬೇಕಾದರೆ ಇವರು ಕೆಲಸ ಮಾಡಲೇಬೇಕು. ಈ 'ಕಡ್ಡಾಯ' ಮಹಿಳಾ ಕಾರ್ಮಿಕರ ಕೆಲಸ ಎಂದಿಗೂ ಮುಗಿಯುವುದಿಲ್ಲ.

ಭಾರತವು ಸ್ವಾತಂತ್ರ್ಯದ 75 ನೇ ವರ್ಷವನ್ನು ಆಚರಿಸುತ್ತಿರುವಾಗ, ಈ 'ಕಡ್ಡಾಯ' ಕೆಲಸಗಾರ್ತಿಯನ್ನು ಗುರುತಿಸಬೇಕು, ಆಕೆಯನ್ನು ಆಕೆಯ ಸಮಸ್ಯೆಗಳನ್ನು ಪರಿಹರಿಸುವ ಕಾನೂನುಗಳು ಮತ್ತು ನೀತಿಗಳ ಮೂಲಕ ರಕ್ಷಿಸಬೇಕು.

ಗ್ರಾಮೀಣ ಪ್ರದೇಶದ 'ಕಡ್ಡಾಯ' ಮಹಿಳಾ ಕಾರ್ಮಿಕರು

ಬೃಂದಾ ಕಾರಟ್ **ಅನು: ಲವಿತ್ರ ವಸ್ತ್ರದ**

2022 ರ ಮಾರ್ಚ್‌ನಲ್ಲಿ ಗ್ರಾಮೀಣ ಶ್ರಮ ಭಾಗವಹಿಸುವಿಕೆಯ ಪ್ರಮಾಣ ಪುರುಷರಲ್ಲಿ 67.24% ರಷ್ಟಿದ್ದರೆ, ಗ್ರಾಮೀಣ ಮಹಿಳೆಯರಲ್ಲಿ ಅದು ಕೇವಲ 9.92% ಎಂದು ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ (ಸಿಎಂಐಇ) ವರದಿ ಮಾಡಿದೆ. ಇದು ಒಂದು ಆತಂಕದ ಸಂಗತಿ. ಸಿಎಂಐಇ ಪ್ರಕಾರ, ಲಕ್ಷಾಂತರ ಕಾರ್ಮಿಕರು "ಬಹುಶಃ ಉದ್ಯೋಗವನ್ನು ಪಡೆಯುವಲ್ಲಿನ ವೈಫಲ್ಯದಿಂದ ನಿರಾಶೆಗೊಂಡಿದ್ದಾರೆ ಮತ್ತು ಯಾವುದೇ ಉದ್ಯೋಗ ಲಭ್ಯವಿಲ್ಲ ಎಂಬ ನಂಬಿಕೆಯ ಅಡಿಯಲ್ಲಿ" ಉದ್ಯೋಗವನ್ನು ಹುಡುಕುವುದನ್ನು ನಿಲ್ಲಿಸಿದ್ದಾರೆ. ಯುಎಸ್, ಕೆನಡಾ ಮತ್ತು ಆಸ್ಟ್ರೇಲಿಯಾದಂತಹ ದೇಶಗಳಲ್ಲಿ, ಕೆಲಸ ಮಾಡಲು ಸಿದ್ಧರಿರುವ ಆದರೆ ವಿವಿಧ ಕಾರಣಗಳಿಗಾಗಿ ಕೆಲಸ ಹುಡುಕುವುದನ್ನು ಬಿಟ್ಟುಬಿಡುವ ಅಂತಹ ಕಾರ್ಮಿಕರನ್ನು 'ನಿರುತ್ಸಾಹಗೊಂಡ ಕೆಲಸಗಾರರು' ಎಂದು ಕರೆಯಲಾಗುತ್ತದೆ ಮತ್ತು ಅವರನ್ನು ನಿರುದ್ಯೋಗಿ ವರ್ಗಕ್ಕೆ ಸೇರಿಸಲಾಗುತ್ತದೆ. ಇಂತಹ ವಿದ್ಯಮಾನವನ್ನು ಭಾರತದಲ್ಲಿ ಯಾವುದೇ ಅಧಿಕೃತ ಕಾರ್ಮಿಕ ಸಮೀಕ್ಷೆಗಳಿಂದ ಸೆರೆಹಿಡಿಯಲಾಗಿಲ್ಲ. ಮಹಿಳೆಯರು "ಕೆಲಸ ಬಿಡುತ್ತಿದ್ದಾರೆ" ಅಥವಾ "ಕಾರ್ಮಿಕ ಮಾರುಕಟ್ಟೆಯನ್ನು ತೊರೆಯುತ್ತಿದ್ದಾರೆ" ಎಂದು ತಪ್ಪಾಗಿ ವಿವರಿಸಲಾಗಿದೆ, ಇದು ಅವರು ಮಾಡಿದ ಆಯ್ಕೆಯಾಗಿದೆ ಎಂಬ ಅಭಿಪ್ರಾಯವನ್ನು ನೀಡುತ್ತದೆ, ಆದರೆ, ವಾಸ್ತವವಾಗಿ, ಮಹಿಳೆಯರು ಉದ್ಯೋಗದಿಂದ ಹೊರಹಾಕಲ್ಪಡುತ್ತಿದ್ದಾರೆ.



ಬುಡಮಟ್ಟದ ವಾಸ್ತವಗಳು ಸಿಎಂಐಇ ಸೂಚಿಸುವ, ಆದರೆ ಸರ್ಕಾರ ನಿರಾಕರಿಸುವುದಕ್ಕಿಂತಲೂ ಕೆಟ್ಟದಾಗಿದೆ. ಭೂರಹಿತ ಕುಟುಂಬಗಳಿಗೆ ಸೇರಿದ ಅಥವಾ ಅಲ್ಪ ಭೂಮಿ ಹೊಂದಿರುವ ಮಹಿಳೆಯರಿಗೆ "ನಿರುತ್ಸಾಹಕ್ಕೊಳಗಾಗುವ" ವೈಭೋಗವೇನೂ ಇಲ್ಲ, ಇವರು "ಕಡ್ಡಾಯ" ಕೆಲಸಗಾರರು.

ಸಂಕಟದ ಆಳ

ಮಹಾತ್ಮಾ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಕಾಯಿದೆ (ಮನರೇಗ)ಯ ಕೆಲಸದ ತಾಣಗಳು ಬಹುಶಃ ಲಕ್ಷಾಂತರ ಮಹಿಳೆಯರು ಕೆಲಸ ಮಾಡಲೇಬೇಕಾಗಿರುವುದನ್ನು ಅರ್ಥಮಾಡಿಕೊಳ್ಳಲು ಅತ್ಯುತ್ತಮ ಸ್ಥಳಗಳಾಗಿವೆ. ಕರ್ನಾಟಕದ ಕಲಬುರಗಿ ಜಿಲ್ಲೆಯಲ್ಲಿನ ಯೋಜನೆಯು 200 ಕ್ಕೂ ಹೆಚ್ಚು ಜಿನುಗು ಕೊಳಗಳನ್ನು ರಚಿಸುವುದರ ಮೇಲೆ ಕೇಂದ್ರೀಕರಿಸಿದೆ. ಇದು ಅಂತರ್ಜಲದ ಮಟ್ಟ ಕುಸಿತದ ಸಮಸ್ಯೆಯನ್ನು ಪರಿಹರಿಸಲು ಮತ್ತು ಬಾವಿಗಳ ಪುನರುಜ್ಜೀವನಕ್ಕೆ ಸಹಾಯ ಮಾಡಲು ವಿನ್ಯಾಸಗೊಳಿಸಲಾಗಿದೆ. ಈ ಯೋಜನೆಯು ನಾಲ್ಕು ಗ್ರಾಮಗಳನ್ನೊಳಗೊಂಡು ಅಂದಾಜು 300 ಕಾರ್ಮಿಕರಿಗೆ ಕೆಲವು ಕೆಲಸದ ದಿನಗಳನ್ನು ಒದಗಿಸುತ್ತದೆ. ಮಣ್ಣು ಗಟ್ಟಿಯಾಗಿರುತ್ತದೆ ಮತ್ತು ಒಣದಾಗಿರುತ್ತದೆ. ಯೋಜನೆಯು ಹಲವಾರು ಕಿಲೋಮೀಟರ್‌ಗಳಷ್ಟು ವಿಸ್ತರಿಸಿರುತ್ತದೆ. ಪುರುಷರಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರು ಮಾತ್ರ ಜೋಡಿಯಾಗಿ ಕೆಲಸ ಮಾಡುತ್ತಾರೆ. ಅವರು ಮಣ್ಣು ಅಗೆದು ಎತ್ತುತ್ತಾರೆ. ಸುಡುವ ಬಿಸಿಲಿನಲ್ಲಿ, ಅವರು ಒಂದು ದಿನದಲ್ಲಿ 10x10x1 ಗುಂಡಿಯನ್ನು ಅಗೆಯಬೇಕು. ಮಣ್ಣು ಗಟ್ಟಿಯಾಗಿರುವುದರಿಂದ ಕಲ್ಲುಮಣ್ಣು ಇರುವುದರಿಂದ ದಿನಕ್ಕೆ ಸುಮಾರು 3,000 ಕೆ.ಜಿ ಮಣ್ಣು ಅಗೆದು ಎತ್ತಬೇಕಾಗುತ್ತದೆ ಎಂದು ಸಹಾಯಕ ಪ್ರಭಾರಿ ಅಧಿಕಾರಿಯ ಅಂದಾಜು. ಮಹಿಳೆಯರಲ್ಲಿ ಹೆಚ್ಚಿನವರು ಈ ಕೆಲಸವನ್ನು ಪೂರ್ಣಗೊಳಿಸಲು ಸಾಧ್ಯವಾಗದ ಕಾರಣ, ಅವರು ನಿಗದಿ ಮಾಡಿದ ರೂ. 309 ದರವನ್ನು ಪಡೆಯುವುದಿಲ್ಲ; ಕೇವಲ ರೂ. 280 ರಿಂದ ರೂ. 285 ಕೂಲಿ ಸಿಗುತ್ತದೆ. ಸ್ಥಳದಲ್ಲಿ ಶಿಶುಕೇಂದ್ರ ಇರಲಿಲ್ಲ. ಅಲ್ಲಿ ನೀರು ಸಹ ಇರಲಿಲ್ಲ, ಆದ್ದರಿಂದ ಮಹಿಳೆಯರು ತಮ್ಮ ಎರಡು ಲೀಟರ್ ಬಾಟಲಿಗಳನ್ನು ತುಂಬಲು ನೀರಿನ ಮೂಲಕ್ಕೆ ಸುಮಾರು ಒಂದು ಕಿಲೋಮೀಟರ್ ನಡೆದುಕೊಂಡು ಹೋಗುತ್ತಿದ್ದಾರೆ. ಇದರಿಂದಾಗಿ ಕೈಕಾಲು ನೋಯುತ್ತದೆ ಮತ್ತು ಅನೇಕರಿಗೆ ತಲೆತಿರುಗುತ್ತಿದೆ ಎಂದು ಹೇಳಿದರು.

ಆದರೆ ಇಷ್ಟೆಲ್ಲ ಕಷ್ಟದ ಪರಿಸ್ಥಿತಿಗಳ ಹೊರತಾಗಿಯೂ, ಮನರೇಗ ಸೈಟ್‌ನಲ್ಲಿರುವ ಪ್ರತಿಯೊಬ್ಬ ಕಾರ್ಮಿಕರು ವರ್ಷದಲ್ಲಿ ಸುಮಾರು 40 ದಿನಗಳ ಕೆಲಸ ಮಾತ್ರ ಪಡೆಯುತ್ತಿದ್ದೇವೆ ಎಂದು ದೂರಿದರು. ಮಹಾತ್ಮಾ ಗಾಂಧಿ ಉದ್ಯೋಗ ಖಾತ್ರಿ ಕೆಲಸವನ್ನು ತಮ್ಮ ಸಂರಕ್ಷಕ ಎಂದು ಪರಿಗಣಿಸುವುದರಿಂದ ಇನ್ನು ಹೆಚ್ಚಿನ ದಿನ ಕೆಲಸ ಸಿಗಬೇಕೆಂದು ಬಯಸಿದರು. ಇಂತಹ ಕಠಿಣವಾದ ಕೆಲಸವನ್ನು ಅವರು ಇನ್ನಷ್ಟು ಮಾಡಲು ಬಯಸುತ್ತಿರುವುದು ಬಡ ಗ್ರಾಮೀಣ ಕುಟುಂಬಗಳ ಸಂಕಟದ ಆಳವನ್ನು ತಿಳಿಸುತ್ತದೆ.

ವ್ಯವಸಾಯದ ದಿನಗಳಲ್ಲಿ ಎಲ್ಲಾ ಮಹಿಳೆಯರು ಇತರರ ಜಮೀನುಗಳಲ್ಲಿ ಕೆಲಸ ಮಾಡುತ್ತಾರೆ, ಮನರೇಗ ಸೈಟ್‌ನಲ್ಲಿ ಗಳಿಸಿದಷ್ಟೇ ಹಣ ಸಂಪಾದಿಸುತ್ತಾರೆ. ಆದರೆ ಕೃಷಿ ಕಾರ್ಯಾಚರಣೆಗಳಲ್ಲಿನ ಯಾಂತ್ರೀಕರಣದಿಂದಾಗಿ ಕೆಲಸದ ದಿನಗಳು ವರ್ಷಕ್ಕೆ ಮೂರು ತಿಂಗಳಿಗಿಂತ ಕಡಿಮೆ. ಆದ್ದರಿಂದ ಅನೇಕ ಮಹಿಳೆಯರು ಅರೆಕಾಲಿಕ ಕಟ್ಟಡ ಕಾರ್ಮಿಕರಾಗುತ್ತಾರೆ. ಗುತ್ತಿಗೆದಾರರಿಗೆ ಕೆಲಸ ಮಾಡುವ ಮೇಸ್ತ್ರಿಗಳ ಒಂದು ಜಾಲ ಅವರನ್ನು ಕೆಲಸಕ್ಕೆ ತಗೊಳ್ಳುತ್ತದೆ. ಅವರು ತಮ್ಮ ಕುಟುಂಬಗಳೊಂದಿಗೆ ಅಥವಾ ಹಳ್ಳಿಯ ಇತರ ಮಹಿಳೆಯರೊಂದಿಗೆ ಕೆಲವು ತಿಂಗಳುಗಳ ವರೆಗೆ ಕಟ್ಟಡ ನಿರ್ಮಾಣ ಸ್ಥಳಗಳಿಗೆ ವಲಸೆ ಹೋಗುತ್ತಾರೆ. ನಾನು ಭೇಟಿಯಾದ ಜನರಲ್ಲಿ ಒಬ್ಬರೂ ಸಹ ಕಟ್ಟಡ ಕಾರ್ಮಿಕರಾಗಿ ನೋಂದಾಯಿಸಿಕೊಂಡಿರಲಿಲ್ಲ. ಆದ್ದರಿಂದ ಅವರು ಕಟ್ಟಡ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಕಾನೂನಾತ್ಮಕವಾಗಿ ಸಿಗುವ ಯಾವುದೇ ಪ್ರಯೋಜನಗಳಿಗೆ ಅನರ್ಹರಾಗಿದ್ದಾರೆ. ಕಟ್ಟಡ ನಿರ್ಮಾಣ ಸ್ಥಳದಲ್ಲಿ, ಪ್ರತಿಯೊಬ್ಬರೂ ದಿನಕ್ಕೆ ಕನಿಷ್ಠ 1,000 ಇಟ್ಟಿಗೆಗಳನ್ನು ಒಯ್ಯುತ್ತಿದ್ದರು, ಇವು ಸುಮಾರು ಎರಡು ಕಿಲೋಗಳಷ್ಟು ತೂಕ ಹೊಂದಿರುತ್ತವೆ. ಇತರ ಭಾರವಾದ ನಿರ್ಮಾಣ ಸಾಮಗ್ರಿಗಳನ್ನು, ಹೊತ್ತುಕೊಂಡು ಮೊದಲ ಅಥವಾ ಎರಡನೇ ಮಹಡಿಗೆ ಏರಬೇಕಾಗುತ್ತದೆ. ಅವರಿಗೆ ಪುರುಷರಿಗಿಂತ ಕಡಿಮೆ ಅಂದರೆ ದಿನಕ್ಕೆ ರೂ. 300 ವೇತನ ನೀಡಲಾಗುತ್ತದೆ.

ಬಹುವಿಧ ಕೆಲಸಗಾರ್ತಿ

ಕಟ್ಟಡ ನಿರ್ಮಾಣ ಕೆಲಸಗಳು ಸಿಗದಿದ್ದಾಗ, ಮಹಿಳೆಯರು ಇತರ ಕೆಲಸವನ್ನು ಹುಡುಕುತ್ತಾರೆ. ಅವರಲ್ಲಿ ಕೆಲವರು ಬುಟ್ಟಿಗಳು ಮತ್ತು ಪೊರಕೆಗಳನ್ನು ಮಾಡುತ್ತಾರೆ. ಅವರು ಬುಟ್ಟಿಗಳನ್ನು ಮಾರಾಟ ಮಾಡಲು ಹಳ್ಳಿಯಿಂದ ಹಳ್ಳಿಗೆ ದಿನಕ್ಕೆ ಸುಮಾರು 25 ಕಿ.ಮೀ. ಓಡಾಡಬೇಕಾಗುತ್ತದೆ. 10 ಬುಟ್ಟಿಗಳನ್ನು ತಯಾರಿಸಲು ಅವರು ಎರಡು ದಿನ ತೆಗೆದುಕೊಳ್ಳುತ್ತಾರೆ. ಪ್ರತಿ ಬುಟ್ಟಿಯಿಂದ ರೂ. 10 ಗೆ ಮಾತ್ರ ಪಡೆಯುತ್ತಾರೆ. ಕೆಲವು ಮಹಿಳೆಯರು ತಿಂಗಳಿಗೆ ಸರಾಸರಿ ಮೂರು ಅಥವಾ ನಾಲ್ಕು ದಿನಗಳ ಕಾಲ ಭೂಹಿಡುವಳಿ ಕುಟುಂಬಗಳಿಗೆ ಸ್ವಚ್ಛಗೊಳಿಸುವ ಅಥವಾ ಬೇರೆ ಸೇವೆಗಳನ್ನು ಒದಗಿಸುತ್ತಾರೆ. ಕೆಲವರು ಬಟ್ಟೆ ಹೊಲಿಯುವ ಕೆಲಸ ಮಾಡುತ್ತಾರೆ. ಅವರು ತಮ್ಮ ಮನೆಗೆಲಸವನ್ನೂ ಮಾಡುತ್ತಾರೆ.

ಆದ್ದರಿಂದ, ಮನರೇಗ ಸೈಟ್‌ನಲ್ಲಿರುವ ಮಹಿಳೆಯರ ಬಗೆಗಿನ ಪುರಾವೆಗಳ ಪ್ರಕಾರ, ಒಂದು ವರ್ಷದ ಅವಧಿಯಲ್ಲಿ ಒಬ್ಬ ಮಹಿಳೆ ಮನರೇಗ ಕೆಲಸಗಾರಳಾಗಿರುತ್ತಾಳೆ, ಕೃಷಿ ಕಾರ್ಮಿಕಳಾಗಿರುತ್ತಾಳೆ, ಕಟ್ಟಡ ಕಾರ್ಮಿಕಳಾಗಿರುತ್ತಾಳೆ, ವಲಸೆ ಕಾರ್ಮಿಕಳಾಗಿರುತ್ತಾಳೆ, ಸ್ವಯಂ ಉದ್ಯೋಗಿ ಬೀದಿ ವ್ಯಾಪಾರಿಯಾಗಿರುತ್ತಾಳೆ, ಟೈಲರ್, ಬೇರೆಯವರ ಮನೆಕೆಲಸದವಳಾಗಿರುತ್ತಾಳೆ ಮತ್ತು ತನ್ನ ಹಲವಾರು ಮನೆಗೆಲಸಗಳನ್ನು ನಿಭಾಯಿಸಬೇಕಾದ ಗೃಹಿಣಿಯಾಗಿರುತ್ತಾಳೆ.

'ಕಡ್ಡಾಯ' ಮಹಿಳಾ ಕಾರ್ಮಿಕರ ಕೆಲಸ ಎಂದಿಗೂ ಮುಗಿಯುವುದಿಲ್ಲ. ಯಾದಗಿರಿ ಜಿಲ್ಲೆಯ 45 ವರ್ಷದ 4 ಮಕ್ಕಳ ತಾಯಿ ಸಿದ್ದಮ್ಮ ತಮ್ಮ ತೋಳುಗಳನ್ನು ಚಾಚಿ ಹೇಳಿದರು: "ನನ್ನ ತೋಳುಗಳೇ ನನ್ನ ದುಡಿಮೆ... ಇದು ನನ್ನ ಕುಟುಂಬ ಬದುಕುಳಿಯಲು ಹಣ ಸಂಪಾದಿಸಲು ನಾನು ಹೊಂದಿರುವ ಆಸ್ತಿ. ನಾನು ಕೆಲಸ ಮಾಡುವಾಗ, ಅವರು ತಿನ್ನುತ್ತಾರೆ".

ಅಗತ್ಯ ವಸ್ತುಗಳ ಬೆಲೆಯೇರಿಕೆ ಮಹಿಳೆಯರಲ್ಲಿ ತರಕಾರಿಗಳು ಮತ್ತು ಬೇಳೆಕಾಳುಗಳ ಬಳಕೆಯಲ್ಲಿ ಭಾರಿ ಕಡಿತಕ್ಕೆ ಕಾರಣವಾಗಿದೆ. ತಮ್ಮ ಅಭಿಪ್ರಾಯವನ್ನು ಸಾಬೀತುಪಡಿಸಲು, ಕೆಲಸದ ಸ್ಥಳದಲ್ಲಿ ಕೆಲವು ಮಹಿಳೆಯರು ತಮ್ಮ ಊಟದ ಬುತ್ತಿಯಲ್ಲಿ ಅನ್ನ ಅಥವಾ ರೊಟ್ಟಿಯ ಜೊತೆ ಮೆಣಸಿನಕಾಯಿ ಚಟ್ನಿ ತಂದಿದ್ದರು. ಸಹೋದರಿಯರಾದ ಶೀಲವತಿ ಮತ್ತು ಚಂದ್ರಮ್ಮ, "ನಾವು ಮೆಣಸಿನಕಾಯಿ ಚಟ್ನಿ ಮಾಡಿದ ನಂತರ ನೀರು ಕುಡಿಯುತ್ತೇವೆ. ಆಗ ನಮಗೆ ಹಸಿವಾಗುವುದಿಲ್ಲ" ಎಂದರು. ಇನ್ನುಳಿದವರು ಇವರ ಮಾತಿಗೆ ಹೂಂಗುಟ್ಟಿದರು. ಕೇಂದ್ರ ಮತ್ತು ರಾಜ್ಯ ಸರ್ಕಾರಗಳ ಉಚಿತ ಆಹಾರ ಧಾನ್ಯಗಳ ಕಾರ್ಯಕ್ರಮದಿಂದ ಕೊಡುವ ತಲಾ 10 ಕೆಜಿ ಧಾನ್ಯದಿಂದ ಹೆಚ್ಚಿನ ಸಹಾಯವಾಗಿದೆ. ಆದರೆ ಅದನ್ನ ಕೊಡುವುದನ್ನು ಎಲ್ಲಿ ನಿಲ್ಲಿಸಿಬಿಡುತ್ತಾರೋ ಎನ್ನುವ ಭಯ ಕಾಡುತ್ತದೆ, ಎಂದು ಅವರು ಹೇಳಿದರು. ಬೆಲೆಯೇರಿಕೆ ಮತ್ತು ಕಡಿಮೆ ಆದಾಯದಿಂದಾಗಿ ಮಹಿಳೆಯರು ಎದುರಿಸುತ್ತಿರುವ ಪೋಷಣೆಯ ಅಭಾವವು 'ಕಡ್ಡಾಯ' ಮಹಿಳಾ ಕಾರ್ಮಿಕರ ಜೀವನದ ಮತ್ತೊಂದು ಆಯಾಮವಾಗಿದೆ.

ಕನಿಷ್ಠ ವೇತನ ಕೊಡಬೇಕಾಗಿದೆ

ಬಹುತೇಕ ಪ್ರತಿಯೊಬ್ಬ ಮಹಿಳೆಯೂ ಸಾಲದ ಸುಳಿಯಲ್ಲಿ ಸಿಲುಕಿರುವ ಬಗ್ಗೆ ಮಾತನಾಡಿದ್ದಾರೆ. ಯಾವುದೇ ಸ್ಥಿರವಾದ ಕೂಲಿಯಿಲ್ಲದ ಅನೇಕ ಕೆಲಸಗಳಿಂದ ಮಹಿಳೆಯರು ಗಳಿಸುವುದು, ಅವರು ಮಾಡುವ ಶ್ರಮದ ಮೊತ್ತಕ್ಕೆ ಯಾವುದೇ ರೀತಿಯಲ್ಲಿ ಸಮನಾಗಿರುವುದಿಲ್ಲ. ನಗರ ಪ್ರದೇಶಗಳಲ್ಲಿ ಕಾರ್ಮಿಕ ಕಾನೂನುಗಳನ್ನು ಕಳಚಿ ಹಾಕಿರುವುದರಿಂದ ಕಾರ್ಮಿಕ ಇಲಾಖೆಗಳು ದುರ್ಬಲಗೊಳ್ಳುತ್ತಿವೆ. ಕೃಷಿ ಕಾರ್ಮಿಕರ ಸಂಘಟನೆಗಳ ಪ್ರಬಲ ಚಳವಳಿಯಿಂದ ಮಾತ್ರ ಗ್ರಾಮೀಣ ಭಾರತದಲ್ಲಿ ಕನಿಷ್ಠ ವೇತನದ ಅನುಷ್ಠಾನವನ್ನು ಕಲ್ಪಿಸಬಹುದಾಗಿದೆ. ಭೂಮಿಯ ಒಡೆತನವಿರುವ ರೈತರಿಗೆ ವಾರ್ಷಿಕ 6000 ರೂ. ಗಳ ಅಲ್ಪ ನಗದು ವರ್ಗಾವಣೆ ಕೂಡ ಭೂಹೀನ ಗ್ರಾಮೀಣ ಕಾರ್ಮಿಕರಿಗೆ ಸಿಗುವುದಿಲ್ಲ. ಅವರ ಕೂಡ ಇದೇ ರೀತಿಯ ನಗದು ವರ್ಗಾವಣೆಗೆ ಅರ್ಹರಾಗಿದ್ದಾರೆ. ಕೆಲಸದ ಸ್ಥಳಗಳನ್ನು ಹೆಚ್ಚು ಕಾರ್ಮಿಕ–ಸ್ನೇಹಿಯನ್ನಾಗಿ ಮಾಡಬೇಕು.

ಗ್ರಾಮೀಣ ಭಾರತದಲ್ಲಿ ಬಂಡವಾಳಶಾಹಿ ಪ್ರಕ್ರಿಯೆಗಳು ಆಳವಾಗಿ ನುಸುಳುತ್ತಿರುವುದರೊಂದಿಗೆ, ಜೀವನೋಪಾಯದ ಆಯ್ಕೆಗಳ ಬಿಕ್ಕಟ್ಟು ಕಂಡುಬರುತ್ತಿದೆ. ಇದನ್ನು ಎದುರಿಸಲು ಬಡ ಮಹಿಳೆಯರು ವಿವಿಧ ತಂತ್ರಗಳನ್ನು ಅಳವಡಿಸಿಕೊಳ್ಳುತ್ತಿದ್ದಾರೆ. ಈ ಬಿಕ್ಕಟ್ಟಿನ ಸರಿಯಾದ ವಿಶ್ಲೇಷಣೆ ಮಾಡಲು ಸೂಕ್ಷ್ಮ ಕಣ್ಣೋಟದ ಅಗತ್ಯವಿದೆ. ಸಮಯದ ಬಳಕೆಯ ಸಮೀಕ್ಷೆಗಳ ಮೂಲಕ ಮಹಿಳೆಯರ ಕೆಲಸದ ಅದೃಶ್ಯತೆಯ ಪ್ರಶ್ನೆಯ್ನು ನಿಭಾಯಿಸಬಹುದು. ಉದಾಹರಣೆಗೆ ಫೌಂಡೇಶನ್ ಫಾರ್ ಅಗ್ರೇರಿಯನ್ ಸ್ಟಡೀಸ್ ಮಾಡಿದ ಗ್ರಾಮ ಮಟ್ಟದ ಸಮಯ ಬಳಕೆಯ ಸಮೀಕ್ಷೆಗಳು ಮಹಿಳೆಯರ ಕೆಲಸದ ವ್ಯಾಪ್ತಿಯನ್ನು ಪ್ರಕಟಪಡಿಸಿವೆ. ವಾಸ್ತವವಾಗಿ, ಬಡ ಗ್ರಾಮೀಣ ಮಹಿಳೆಯರ ಬಗ್ಗೆ ಮತ್ತು ಅವರು ತಮ್ಮ ಸಮಯವನ್ನು ಹೇಗೆ ಕಳೆಯುತ್ತಾರೆ ಎಂಬುದರ ವ್ಯಾಪಕ ಸಮೀಕ್ಷೆ ನಡೆಯುವುದು ತುರ್ತು ಅಗತ್ಯವಾಗಿದೆ. ಭಾರತವು ಸ್ವಾತಂತ್ರ್ಯದ 75 ನೇ ವರ್ಷವನ್ನು ಆಚರಿಸುತ್ತಿರುವಾಗ, 'ಕಡ್ಡಾಯ' ಮಹಿಳಾ ಕೆಲಸಗಾರ್ತಿಯನ್ನು ಗುರುತಿಸಬೇಕು, ಆಕೆಯನ್ನು ಆಕೆಯ ಸಮಸ್ಯೆಗಳನ್ನು ಪರಿಹರಿಸುವ ಕಾನೂನುಗಳು ಮತ್ತು ನೀತಿಗಳ ಮೂಲಕ ರಕ್ಷಿಸಬೇಕು.

ಕಗ್ಗತ್ತಲು ಪಸರಿಸುವ ಕೋಮುವಾದ......... ಪುಟ 5 ರಿಂದ

ಆದ್ದರಿಂದ ಸಂಘ ಪರಿವಾರವನ್ನು ಹಗುರವಾಗಿ ಪರಿಗಣಿಸಿ ನಿರ್ಲಕ್ಷಿಸಿ ಬಿಡುವ ಕಾಲ ಇದಲ್ಲ.

ಸಂಘ ಪರಿವಾರ ಮತ್ತು ಬಿಜೆಪಿಯ ಆಟಗಳಿಗೆ ಒಕ್ಕಲಿಗರನ್ನು ಆದಿ ಚುಂಚನಗಿರಿ ಮಠ ಮತ್ತು ಈಗಿನ ಮಠಾಧಿಪತಿ ನಿರ್ಮಲಾನಂದ ಸ್ವಾಮೀಜಿಗಳು ನೂಕುತ್ತಿದ್ದಾರೆ. ಸಂಘ ಪರಿವಾರದ ಬಗ್ಗೆ ಅನುಕಂಪ ಮತ್ತು ಸಹಾನುಭೂತಿ ಹೊಂದಿರುವ ಈಗಿನ ಮಠಾದೀಶರು ಸ್ವತಃ ತಮ್ಮದೇ ಮಠದ ಬಗ್ಗೆ ಪಠ್ಯಪುಸ್ತಕಗಳಲ್ಲಿ ಇದ್ದ ವಿಷಯಗಳನ್ನು ಕೈಬಿಟ್ಟರೂ ಮೌನವಾಗಿದ್ದಾರೆ. ಮಠದ ಪೀಠಕ್ಕಿಂತ ವಿಧಾನಸೌಧದ ಪೀಠದ ಆಕರ್ಷಣೆಗೆ ಒಳಗಾದಂತೆ ಕಾಣುತ್ತಿರುವ ಮಠಾಧೀಶರು, ಶೂದ್ರ ಒಕ್ಕಲಿಗರನ್ನು ವೈದಿಕರ ಯಜ್ಞ ಕುಂಡಗಳೆಡೆ ನೂಕುತ್ತಿದ್ದಾರೆ.

ಇಷ್ಟೆಲ್ಲದರ ನಡುವೆ ಬಿಜೆಪಿ ಮತ್ತು ಸಂಘ ಪರಿವಾರಕ್ಕೆ ಹಳೇ ಮೈಸೂರು ಭಾಗ ಸುಲಭದ ತುತ್ತಲ್ಲ ಎಂಬುದನ್ನು ಮೊನ್ನೆ ನಡೆದ ವಿಧಾನ ಪರಿಷತ್ ಚುನಾವಣೆ ತೋರಿಸಿಕೊಟ್ಟಿದೆ. ದಕ್ಷಿಣ ಪದವೀಧರ ಕ್ಷೇತ್ರದಲ್ಲಿ ಬಿಜೆಪಿ ಕೆಟ್ಟದಾಗಿ ಸೋತಿದೆ. ಈ ಹಿಂದೆ ಬರುತ್ತಿದ್ದ ಮತಗಳೂ ಬಾರದೆ ಬಿಜೆಪಿ ನಿರಾಶೆ ಅನುಭವಿಸಿದೆ. ಈ ಕ್ಷೇತ್ರದಲ್ಲಿ ಎಂದೂ ಗೆಲ್ಲದಿದ್ದ ಕಾಂಗ್ರೆಸ್ ಜಯಭೇರಿ ಬಾರಿಸಿದೆ. ಮುಖ್ಯವಾಗಿ ಪಠ್ಯಪುಸ್ತಕ ಪರಿಷ್ಕರಣೆ ವಿಚಾರದಲ್ಲಿ ಬಂದ ಪ್ರತಿರೋಧ ಚುನಾವಣೆಯಲ್ಲಿ ಪ್ರತಿಫಲನಗೊಂಡಿದೆ. ಸಂಘಟಿತ ಹೋರಾಟವೊಂದು ಬಿಜೆಪಿ ನಿಜವಾದ ಸ್ಥಾನ ಯಾವುದು ಎಂದು ತೋರಿಸಿದೆ. ಕೋಮುವಾದದ ಕಗ್ಗತ್ತಲನ್ನು ನೊಣೆದು ನುಂಗುವ ಕಂದೀಲುಗಳು ಇನ್ನೂ ಸಾಕಷ್ಟಿವೆ.

‘ಭಾರತದ ಪ್ರಜಾಪ್ರಭುತ್ವದ ಮೇಲಿನ ದೊಡ್ಡ ಕಪ್ಪು ಚುಕ್ಕೆ ಇನ್ನೂ ದೊಡ್ಡದಾಗಿದೆ’

ಅಮೃತ ಕಾಲವಿದು...

ಗೋವಾ, ಮಧ್ಯಪ್ರದೇಶ, ಕರ್ನಾಟಕ ಮತ್ತು ಈಗ ಮಹಾರಾಷ್ಟ್ರ...

ಹೀಗೆಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಮಹಾರಾಷ್ಟ್ರದಲ್ಲಿನ ರಾಜಕೀಯ ಬೆಳವಣಿಗೆಗಳ ಬಗ್ಗೆ ಟಿಪ್ಪಣಿ ಮಾಡುತ್ತ ಹೇಳಿದ್ದಾರೆ.

ಕೊನೆಗೂ ಮಹಾರಾಷ್ಟ್ರದಲ್ಲಿಯೂ ಕೇಂದ್ರದ ಆಳುವ ಪಕ್ಷಕ್ಕೆ ಬೇಕಾದ ಸರಕಾರ ಬಂದಿದೆ. ಎರಡೂವರೆ ವರ್ಷಗಳ ಹಿಂದೆ ಶಿವಸೇನೆಗೆ ಮುಖ್ಯಮಂತ್ರಿಪಟ್ಟ ಬಿಟ್ಟು ಕೊಡಲು ನಿರಾಕರಿಸಿ ತನ್ನದೇ ಪಕ್ಷದವರು ಮುಖ್ಯಮಂತ್ರಿಗಳಾಗಬೇಕೆಂದು ಹಟ ಹಿಡಿದು ಅಧಿಕಾರ ಕಳಕೊಂಡ ಪಕ್ಷವೇ ಈಗ ಹೇಗಾರೂ ಅಧಿಕಾರ ಪಡೆಯಲು ಅದೇ ಶಿವಸೇನಾದ ಬಂಡಾಯ ಮುಖಂಡರನ್ನು ಮುಖ್ಯಮಂತ್ರಿಯಾಗಿ ಮಾಡಿದೆ, ಈ ಪ್ರಕ್ರಿಯೆಯಲ್ಲಿ ತನ್ನ ರಾಜ್ಯಮುಂಖಂಡರನ್ನೂ ಫಜೀತಿಗೊಳಪಡಿಸಿದೆ ಎಂದು ರಾಜಕೀಯ ವೀಕ್ಷಕರು ಹೇಳುತ್ತಿದ್ದಾರೆ.

ಕೆಲವು ದಿನಗಳ ಹಿಂದೆ ಮೂರು ಏರ್‌ಕಂಡೀಷನ್ಡ್ ಬಸ್‌ಗಳು ಆಳುವ ಎಂವಿಎ ಮೈತ್ರಿಕೂಟದ ಕೆಲವು ‘ಬಂಡಾಯ’ ಶಾಸಕರನ್ನು ಗುಜರಾತಿನ ಸೂರತ್‌ಗೆ ಕೊಂಡೊಯ್ಯುವದರೊಂದಿಗೆ ಈ ಸರಕಾರ ಉರುಳಿಸುವ ಕಾರ್ಯಾಚರಣೆ ಆರಂಭವಾಗಿತ್ತು. ಅಲ್ಲಿಂದ ಈ ಶಾಸಕರನ್ನು ಅಲ್ಲಿನ ಪೋಲೀಸರ ‘ನೆರವಿ’ನಿಂದ ದೂರದ ಗುವಾಹಾಟಿಗೆ ಒಯ್ಯಲಾಯಿತು. (ಈ ಕಾರ್ಯಾಚರಣೆ ಹೇಗೆ ನಡೆಯಿತು ಎಂಬುದು ಅಲ್ಲಿಂದ ತಪ್ಪಿಸಿಕೊಂಡ ಒಬ್ಬ ಶಾಸಕರು ತಮ್ಮ ಪಕ್ಷದ ಮುಖಂಡರಿಗೆ ಕೊಟ್ಟ ವರದಿಯಿಂದ ತಿಳಿಯುತ್ತದೆ).

35 ರಲ್ಲಿ 30 ಜಿಲ್ಲೆಗಳು ಜಲಾವೃತ್ತವಾಗಿ, 100ಕ್ಕೂ ಹೆಚ್ಚು ಜನ ಪ್ರಾಣ ಕಳಕೊಂಡು, 3 ಲಕ್ಷ ಜನರು ಮನೆಮಾರು ಕಳಕೊಂಡು ಸಂಕಟಪಡುತ್ತಿದ್ದ ಅಸ್ಸಾಂನ ಜನಗಳ ಹಾಹಾಕಾರದ ನಡುವೆಯೇ ಇವರು ಒಂದು ಅತ್ಯಂತ ಐಷಾರಾಮೀ ಹೋಟೇಲಿನಲ್ಲಿ ಭವ್ಯ ಆತಿಥ್ಯ ಅನುಭವಿಸುತ್ತಿದ್ದುದು ಇಡೀ ದೇಶದ ಗಮನ ಸೆಳೆಯದೇ ಇರಲು ಸಾಧ್ಯವಿರಲಿಲ್ಲ. (ಇಂತಹ ಒಬ್ಬ ‘ಅತಿಥಿ’ ತನ್ನ ಸುತ್ತಮುತ್ತಲಿನ ಗುಡ್ಡಗಳು, ಅರಣ್ಯಗಳನ್ನು ವರ್ಣಿಸುವ ಟೆಲಿಫೋನ್ ಸಂಭಾಷಣೆ ಈಗ ವೈಲ್ ಆಗಿದೆ)

ಈ ನಡುವೆ ಕಳೆದ 16 ತಿಂಗಳಿಂದ ಸಭಾಧ್ಯಕ್ಷರನ್ನು ಹೊಂದಿರದ, ಆ ಕಾರ್ಯಭಾರವನ್ನು ನಿಭಾಯಿಸುತ್ತಿರುವ ಮಹಾರಾಷ್ಟ್ರ ವಿಧಾನಸಭೆಯ ಉಪಸಭಾಧ್ಯಕ್ಷರು ಅಸ್ಸಾಂನ ಪಂಚತಾರಾ ಹೋಟೇಲಿನಲ್ಲಿದ್ದ ‘ಬಂಡಾಯಗಾರ’ರನ್ನು ಯಾಕೆ ಅನರ್ಹಗೊಳಿಸಬಾರದು ಎಂದು ಜೂನ್27ರ ಸಂಜೆಯ ಒಳಗೆ ಉತ್ತರ ನೀಡಬೇಕು ಎಂದು ನೋಟೀಸು ಕಳಿಸಿದರು. ಆದರೆ ಈ ನಡುವೆ ಸರ್ವೋಚ್ಚ ನ್ಯಾಯಾಲಯ ಈ ‘ಬಂಡಾಯಗರ’ರಿಗೆ ಜುಲೈ 12 ರವರೆಗೆ ಕಾಲಾವಕಾಶ ವಿಸ್ತರಿಸಿತು. ಆಗ ಶಿವಸೇನೆಯ ಪ್ರತಿನಿಧಿಗಳು ಅದುವರೆಗೆ ಸದನದಲ್ಲಿ ಬಲಪರೀಕ್ಷೆ ನಡೆಯದಂತೆ ತಮಗೆ ಪರಿಹಾರ ನೀಡಬೇಕೆಂದು ಸುಪ್ರಿಂ ಕೋರ್ಟಿಗೆ ಮನವಿ ಮಾಡಿದರು. ಆದರೆ ನ್ಯಾಯಾಲಯ ಸದ್ಯ ಅಂತಹ ಸಂದರ್ಭ ತನ್ನ ಮುಂದಿಲ್ಲ ಅಂತಹ ಸಂದರ್ಭ ಬಂದಾಗ ನೋಡೋಣ ಎಂದಿತು.

‘ಬಂಡಾಯ’ದ ಚಟುವಟಿಕೆಗಳು ಬಿಜೆಪಿಯ ಆಳ್ವಿಕೆಯ ರಾಜ್ಯಗಳ ಆಡಳಿತಗಳ ನೇರ ನೆರವಿನಿಂದಲೇ ನಡೆಯುತ್ತಿದ್ದರೂ, ಇದರಲ್ಲಿ ತಮ್ಮ ಪಾತ್ರವೇನೂ ಇಲ್ಲ ಎನ್ನುತ್ತಿದ್ದ, ರಾಜ್ಯದ ವಿರೋಧ ಪಕ್ಷದ ಮುಖಂಡರ ಆಗ್ರಹವನ್ನು ಕೂಡಲೇ ಸ್ವೀಕರಿಸಿದ ರಾಜ್ಯಪಾಲರು ಜೂನ್ 30 ರಂದು ಸದನದಲ್ಲಿ ಬಲಪರೀಕ್ಷೆ ನಡೆಯಬೇಕು ಎಂದು ಆದೇಶ ನೀಡಿದರು. ಇದಕ್ಕೆ ಶಿವಸೇನೆ ಸರ್ವೋಚ್ಚ ನ್ಯಾಯಾಲಯದಲ್ಲಿ ಸವಾಲು ಹಾಕಿತು. ಆದರೆ ಹಿಂದೊಮ್ಮೆ ಪಕ್ಷಾಂತರ ದೇಶದ ಪ್ರಜಾಪ್ರಭುತ್ವಕ್ಕೆ ಹತ್ತಿದ ಒಂದು ಪಿಡುಗು ಎಂದಿದ್ದ ಸರ್ವೋಚ್ಚ ನ್ಯಾಯಾಲಯ ಈಗಲಾದರೂ ಎಂವಿಎ ಸರಕಾರಕ್ಕೆ ಜುಲೈ 13 ರ ವರೆಗೆ ಕಾಲಾವಕಾಶ ಕೊಡುತ್ತದೆ ಎಂಬ ನಿರೀಕ್ಷೆ ಹುಸಿಯಾಯಿತು. ತಮ್ಮದೇ ಪಕ್ಷದ ಶಾಸಕರನ್ನು ಒಲಿಸಿಕೊಳ್ಳಲಾಗಲಿಲ್ಲ ಎಂದು ಮುಖ್ಯಮಂತ್ರಿಗಳು ರಾಜೀನಾಮೆ ನೀಡಿದರು. ಕೇಂದ್ರದ ಆಳುವ ಪಕ್ಷದ ಕಾರ್ಯಾಚರಣೆ ‘ಯಶಸ್ವಿ’ಯಾಯಿತು.

ಆದರೆ ನಿರೀಕ್ಷಿಸಿದಂತೆ ಬಿಜೆಪಿಯ ಮುಖಂಡರು ಹೊಸ ಮುಖ್ಯಮಂತ್ರಿಗಳಾಗಿಲ್ಲ. ಅದುವರೆಗೆ ತಮಗೂ ಈ ‘ಬಂಡಾಯ’ಕ್ಕೂ ಸಂಬಂಧವಿಲ್ಲ ಎಂದೇ ಹೇಳುತ್ತಿದ್ದ ರಾಜ್ಯದ ವಿರೋಧ ಪಕ್ಷದ ಮುಖಂಡರು ಶಿವಸೇನೆಯ ‘ಬಂಡಾಯಗಾರರ’ ಮುಖಂಡರ ನೇತೃತ್ವದ ಸರಕಾರಕ್ಕೆ ಬೆಂಬಲ ಕೊಡುವುದಾಗಿ ಘೋಷಿಸಿದರು, ಆದರೆ ತಾನು ಆ ಸರಕಾರದಲ್ಲಿ ಇರುವುದಿಲ್ಲ ಎಂದರು. ಆದರೆ, ಕೊನೆಗೂ, ಹಿಂದೆ ಮುಖ್ಯಮಂತ್ರಿಗಳಾಗಿದ್ದ ಇವರು ಈಗ (ಬಹುಶಃ ನಾಮಮಾತ್ರೆ) ಶಿವಸೇನೆಯ ಮುಖಂಡರ ನೇತೃತ್ವದಲ್ಲಿರುವ ಸರಕಾರದಲ್ಲಿ ಉಪಮುಖ್ಯಮಂತ್ರಿಯಾಗಿದ್ದಾರೆ.

ಇ.ಡಿ. ಸರಕಾರ!

ಈ ಇಡೀ ಪ್ರಕರಣ ಸಹಯವಾಗಿಯೇ ಹಲವು ಪ್ರಶ್ನೆಗಳನ್ನೆತ್ತಿದೆ. ಅವುಗಳಲ್ಲಿ ಮುಖ್ಯವಾದದ್ದು ಮುಂಬೈಯಿಂದ ಸೂರತ್‌ಗೆ ಏರ್ ಕಂಡೀಶನ್ಡ್ ಬಸ್ಸುಗಳಲ್ಲಿ ಪ್ರಯಾಣ, ಅಲ್ಲಿಂದ ಚಾರ್ಟರ್ಡ್ ವಿಮಾನದಲ್ಲಿ ಗುವಾಹಾಟಿಗೆ ಪ್ರಯಾಣ, ಅಲ್ಲಿ ಪಂಚತಾರಾ ಹೋಟೇಲಿನಲ್ಲಿ ಹಲವು ದಿನಗಳ ಆತಿಥ್ಯ, ಅಲ್ಲಿಂದ ಗೋವಾಕ್ಕೆ ಪ್ರಯಾಣ, ಅಲ್ಲಿ ಮತ್ತೊಂದು ಪಂಚತಾರಾ ಹೊಟೇಲಿನಲ್ಲಿ ಆತಿಥ್ಯ, ಅಲ್ಲಿಂದ ಈಗ ಮತ್ತೆ ಮುಂಬೈಗೆ ಮರಳುವ ಪ್ರಯಾಣ ಈ ಎಲ್ಲದರ ಖರ್ಚುಗಳನ್ನು ನಿರ್ವಹಿಸಿದವರು ಯಾರು?

ಇನ್ನು ಈ ‘ಬಂಡಾಯ’ಕ್ಕೆ ಪ್ರೇರಣೆ ಏನು ಎಂಬ ಪ್ರಶ್ನೆ. ಪ್ರತಿಯೊಬ್ಬ ‘ಬಂಡಾಯಗಾರ’ನಿಗೆ ಕೋಟಿ ಕೋಟಿ ರೂ.ಗಳು, ಇ.ಡಿ. ಮತ್ತು ಐಟಿಯಿಂದ ವಿನಾಯ್ತಿಯ ಭರವಸೆ ಎಂಬ ಮಾತುಗಳು ಗಾಳಿಯಲ್ಲಿ ತೇಲಾಡುತ್ತಿವೆ. ಆದ್ದರಿಂದಲೇ ಈ ಇ..ಡಿ. ಸರಕಾರ(ಏಕನಾಥ ಶಿಂಧೆ–ದೇವೇಂದ್ರ ಫಡ್ನವೀಸ್) ಸರಕಾರ ನಿಜವಾಗಿಯೂ ಇ.ಡಿ. ಸರಕಾರ ಎಂದೂ ಕೆಲವರು ಹೇಳುತ್ತಿದ್ದಾರೆ!

ಹೊಸ ಮುಖ್ಯಮಂತ್ರಿಗಳು ಸಾಮಾನ್ಯ ಆಟೋಡ್ರೈವರ್ ಆಗಿದ್ದವರು ಈಗ ಮುಖ್ಯಮಂತ್ರಿ ಸ್ಥಾನಕ್ಕೇರಿದ್ದಾರೆ ಎಂದು ಪ್ರಶಂಸಿಸಲಾಗುತ್ತಿದೆ. ಆದರೆ ಅವರೀಗ ಬಹುಕೋಟ್ಯಾಧೀಶರು ಆಗಿದ್ದಾರೆ, ಅವರ ಈ ತ್ವರಿತ ‘ಉನ್ನತಿ ಇ.ಡಿ.ಯ ಗಮನ ಸೆಳೆದಿಲ್ಲವೇ ಎಂದೂ ಕೇಳಲಾಗುತ್ತಿದೆ.



ಚಾರ್ಟರ್ ವಿಮಾನಯಾನಕ್ಕೆ ಮತ್ತು ಪಂಚತಾರಾ ಹೋಟೇಲುಗಳಿಗೆ ತೆರುವವರು ಯಾರು ಎಂಬುದೇ ನಿಜವಾದ ಕತೆ
ವ್ಯಂಗ್ಯಚಿತ್ರ: ಸಜಿತ್ ಕುಮಾರ್, ಡೆಕ್ಕನ್ ಹೆರಾಲ್ಡ್

ಕ್ರಿಮಿನಲ್ ಹಿನ್ನೆಲೆಂಯುವರಿಗೆ ಮತ್ತು ಕೇಂದ್ರೀಂಯು ಏಜೆನ್ಸಿಗಳಿಂದ ಭೀತಿಗೊಳಗಾದವರಿಗೆ ಇದೀಗ ಹಿಂದುತ್ವದ ರಕ್ಷಣೆ ದೊರೆತಂತಾಗಿದೆಯಂತೆ.

ಈ ಹಿನ್ನೆಲೆಯಲ್ಲಿಯೇ ಯೆಚುರಿಯವರು “ಪ್ರಭುತ್ವ ಯಂತ್ರದ, ಕೇಂದ್ರೀಯ ಏಜೆನ್ಸಿಗಳ ದುರ್ಬಳಕೆ, ರಾಷ್ಟ್ರೀಯ ಸೊತ್ತುಗಳ ಲೂಟಿಯಿಂದ ಶೇಖರಿಸಿದ ಬೃಹತ್ ಹಣಬಲ”ದ ಬಗ್ಗೆ ತಮ್ಮ ಟ್ವೀಟ್‌ನಲ್ಲಿ ಹೇಳಿರುವುದು. ಈಗಲಾದರೂ ಸುಪ್ರಿಂ ಕೋರ್ಟ್ ತನ್ನ ಮುಂದಿರುವ ಚುನಾವಣಾ ಬಾಂಡುಗಳಿಗೆ ಹಾಕಿದ ಸವಾಲಿನ ವಿಚಾರಣೆಯನ್ನು ಕೈಗೆತ್ತಿಕೊಳ್ಳಬೇಕು ಎಂದೂ ಅವರು ಈ ಸಂದರ್ಭದಲ್ಲಿ ನಿರೀಕ್ಷಿಸಿದ್ದಾರೆ.

ಕುದುರೆ ವ್ಯಾಪಾರದ ಮೇಲೆ ಜಿಎಸ್‌ಟಿ!

ಈ ನಡುವೆ ಕೇಂದ್ರ ಹಣಕಾಸು ಮಂತ್ರಿಗಳು ಜಿಎಸ್‌ಟಿ ಕುರಿತ ಪತ್ರಿಕಾಗೋಷ್ಠಿಯಲ್ಲಿ ಕುದುರೆ ರೇಸ್ ಬದಲು ‘ಕುದುರೆ ವ್ಯಾಪಾರ’ ಎಂದು ಬಾಯಿ ತಪ್ಪಿ ಹೇಳಿರುವುದು ವ್ಯಾಪಕ ವಿಡಂಬನೆಗೆ ಒಳಗಾಗಿದೆ. ಯೆಚುರಿಯವರು ಹೇಳಿರುವಂತೆ “ಸತ್ಯ ಹೊರಕ್ಕೆ ನೆಗೆದು ಬಂತೇ?”



ತಲೆಕೆಡಿಸಿಕೊಳ್ಳಬೇಡ, ರೆಸಾರ್ಟ್‌ನಲ್ಲೇ ಇದ್ದೇನೆ
–ನನ್ನ ಹಿಂದುತ್ವವೂ ಜಾಗೃತಗೊಂಡಿದೆ!
ವ್ಯಂಗ್ಯಚಿತ್ರ: ಹರಿ ಓಂ ತಿವಾರಿ, ಫೇಸ್‌ಬುಕ್

ನೂಪುರ್ ಶರ್ಮಾ ಮಾತ್ರವಲ್ಲ, ಬಿಜೆಪಿ ಕೂಡಾ ಕ್ಷಮೆ ಯಾಚಿಸಬೇಕು

ಬಿಜೆಪಿ ವಕ್ತಾರೆ ನೂಪುರ್ ಶರ್ಮಾ ವಿರುದ್ಧ ಸುಪ್ರೀಂ ಕೋರ್ಟ್ ಕಟುವಾದ ಮಾತುಗಳನ್ನಾಡಿದೆ. “ದೇಶದಲ್ಲಿ ಏನಾಗುತ್ತಿದೆ ಎಂಬುದಕ್ಕೆ ಆಕೆಯೇ ಒಬ್ಬಂಟಿ ಜವಾಬ್ದಾರರು” ಮತ್ತು “ಆಕೆ ದೇಶದ ಕ್ಷಮೆ ಕೇಳಬೇಕು” ಎಂದು ಅದು ಹೇಳಿದೆ. ಆಕೆ ಪಕ್ಷದ ವಕ್ತಾರರಾಗಿದ್ದರೇನಂತೆ, ತನ್ನ ಬೆನ್ನಹಿಂದೆ ಅಧಿಕಾರದ ಬಲವಿದೆ, ದೇಶದ ಕಾನೂನನ್ನು ಗೌರವಿಸದೆ ಯಾವುದೇ ಹೇಳಿಕೆಯನ್ನು ನೀಡಬಹುದು ಎಂದು ಆಕೆ ಭಾವಿಸುತ್ತಾರೆ ಎಂದೂ ಅದು ಹೇಳಿದೆ.

ಇದು ನೂಪುರ್ ಶರ್ಮಾ ಅವರ ಅಭಿಪ್ರಾಯಗಳ ಮೇಲೆ ಮಾತ್ರವಲ್ಲದೆ ಬಿಜೆಪಿ ಮಾಡುವ ಅಧಿಕಾರದ ದುರುಪಯೋಗ, ಅದರ ವಿಭಜನಕಾರೀ ಮಾತುಗಳು ಮತ್ತು ಅದರ ನಾಯಕರು ಮತ್ತು ಟ್ರಾಲ್‌ಗಳು ಸತತವಾಗಿ ಹರಡುತ್ತಿರುವ ದ್ವೇಷದ ಮೇಲೆಯೂ ಮಾಡಿರುವ ತೀವ್ರ ದೋಷಾರೋಪಣೆಯಾಗಿದೆ. ಅವು ನಮ್ಮ ದೇಶವನ್ನು ದೊಡ್ಡ ಅಪಾಯಕ್ಕೆ ತಳ್ಳುತ್ತಿವೆ. ಆದ್ದರಿಂದ ನೂಪುರ್ ಶರ್ಮಾ ಮಾತ್ರವಲ್ಲ, ಬಿಜೆಪಿ ಕೂಡಾ ಕ್ಷಮೆಯಾಚಿಸಬೇಕು, ಮತ್ತು ಭಾರತ ವಿರೋಧಿ, ದೇಶಪ್ರೇಮವಿಲ್ಲದ, ಮತ್ತು ವಿಭಜಕ ಕೃತ್ಯಗಳಲ್ಲಿ ಅದು ತೊಡಗಬಾರದು ಎಂದು ಸುಪ್ರಿಂ ಕೋರ್ಟಿನ ಟಿಪ್ಪಣಿಯ ಬಗ್ಗೆ ಟಿಪಪ್ಣಿ ಮಾಡುತ್ತ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಸೀತಾರಾಂ ಯೆಚುರಿ ಹೇಳಿದ್ದಾರೆ.

ಸುಪ್ರೀಂ ಕೋರ್ಟ್‌ನ ಪ್ರಕಾರ, ದ್ವೇಷದ ಸುರುಳಿಯನ್ನು ಮತ್ತು ಇತ್ತೀಚಿನ ಖಂಡನೀಯ ಹಿಂಸಾಚಾರದ ಚಕ್ರವನ್ನು ಪ್ರಾರಂಭಿಸಲು ನೂಪುರ್ ಶರ್ಮಾ ಹೊಣೆಗಾರರು ಎಂದಾದರೆ, ಕಾನೂನಿನ ಪ್ರಕಾರ ಅವರ ಮೇಲೆ ಕ್ರಮ ಕೈಗೊಳ್ಳಾಗುವುದು ಎಂದು ನಿರೀಕ್ಷಿಸಬಹುದೇ? ಇದು ಯೆಚುರಿಯವರಂತೆ ದೇಶದ ಎಲ್ಲ ಪ್ರಜಾಪ್ರಭುತ್ವವಾದಿಗಳೂ ಕೇಳುವ ಪ್ರಶ್ನೆ.

ಅಂತರಾಷ್ಟ್ರೀಯ ಒತ್ತಡಕ್ಕೆ ಮಣಿದು ಬಿಜೆಪಿಯು ಆಕೆಯನ್ನು ವಕ್ತಾರ ಸ್ಥಾನದಿಂದ ಅಮಾನತುಗೊಳಿಸಿದೆ. ಆದರೆ ಆಕೆಯಂತೆ ವೈಷಮ್ಯ, ಪ್ರತ್ಯೇಕತೆ ಬಿತ್ತುವ, ಭಾರತಕ್ಕೆ ಹಾನಿ ಮಾಡುವ, ಆಳುವ ಪಕ್ಷದಿಂದಲೇ ಪ್ರೋತ್ಸಾಹಿಸಲ್ಪಟ್ಟಿರುವ ಇತರರ ವಿರುದ್ಧವೂ ಕಾನೂನು ಕ್ರಮ ಜರುಗದಿದ್ದರೆ, ತಪ್ಪು ಸಂದೇಶ ಹೋಗುತ್ತದೆ. ಆರ್‌ಎಸ್‌ಎಸ್/ಬಿಜೆಪಿಯ ದ್ವೇಷ ಕಾರ್ಖಾನೆಯಿಂದ ಮತ್ತು ವಿಷಭರಿತ ಟಿವಿ ಚರ್ಚೆಗಳಲ್ಲಿ ಅವರಂತಹ ಅನೇಕರು ನಾಯಿಕೊಡೆಗಳಂತೆ ಹರಡಿಕೊಂಡಿರುವುದನ್ನು ನಾವು ಕಾಣಬಹುದು ಎಂದು ಮುಂದುವರೆದು ಯೆಚುರಿ ಹೇಳಿದ್ದಾರೆ.

ಈ ಸಂದರ್ಭದಲ್ಲಿ ಸುಪ್ರಿಂ ಕೋರ್ಟ್ ಈಗ ಕಣ್ಮರೆಯಾಗಿರುವ ಒಂದು ಸಂಶಯಾಸ್ಪದ ಸಾಮಾಜಿಕ ಮಾಧ್ಯಮ ಹ್ಯಾಂಡಲ್ ಹೇಳಿತೆಂದು ಸುದ್ದಿಗಳ ಹಿಂದಿರುವ ನಿಜಸಂಗತಿಯೇನು ಎಂದು ಪರೀಕ್ಷಿಸುವ ಪತ್ರಕರ್ತ ಮೊಹಮ್ಮದ್ ಜುಬೈರ್ ಅವರನ್ನು ಅತ್ಯಂತ ಕ್ಷುದ್ರ ಕಾರಣಗಳ ಮೇಲೆ ಜೈಲಿಗೆ ಹಾಕಲಾಗಿದೆ ಎಂಬ ಅಂಶವನ್ನು ಗಮನಕ್ಕೆ ತಗೊಳ್ಳುತ್ತದೆ ಎಂದು ನಾವು ಆಶಿಸಿದ್ದೆವು. ಬಿಜೆಪಿಯ ಅಡಿಯಲ್ಲಿರುವ ಪೋಲಿಸ್ ನೂಪುರ್ ಶರ್ಮಾ ಅವರ ದ್ವೇಷದ ಮಾತುಗಳು ಮತ್ತು ಅವಮಾನಕರ ಉದ್ಗಾರಗಳನ್ನು ಎತ್ತಿ ತೋರಿಸಿದ್ದರಿಂದಲೇ ಜುಬೈರ್‌ರನ್ನು ಬಲಿಪಶು ಮಾಡಿದೆ. ವಾಸ್ತವವಾಗಿ ಅವರು ಜೈಲಿನಲ್ಲಿರಬಾರದಾಗಿತ್ತು, ಬದಲಿಗೆ, ಆರೆಸ್ಸೆಸ್/ಬಿಜೆಪಿ ರೂಪಿಸಲು ಶತಪ್ರಯತ್ನ ನಡೆಸಿರುವ ಧ್ರುವೀಕೃತ ಮತ್ತು ವಿಭಜಿತ ಜಗತ್ತನ್ನು ಎದುರಿಸುವಲ್ಲಿ ಸಹಾಯ ಮಾಡಲು ಶ್ರದ್ಧೆಯಿಂದ ಸತ್ಯದ ಪರಿಶೀಲನೆ ನಡೆಸುವ ತನ್ನ ಕೆಲಸವನ್ನು ಮುಂದುವರೆಸಲು ಪ್ರೋತ್ಸಾಹ ಪಡೆಯಬೇಕಾಗಿತ್ತು.

“ಎಲ್ಲ ಭಾರತೀಯರು ಶಾಂತಿಗಾಗಿ ಕೆಲಸ ಮಾಡಬೇಕು, ವಿಭಜಿಸುವ ಮತ್ತು ಪ್ರಚೋದಿಸುವ ಧ್ವನಿಗಳನ್ನು ದೃಢವಾಗಿ ವಿರೋಧಿಸಬೇಕು ಎಂದು ನಾವು ಮನವಿ ಮಾಡುತ್ತೇವೆ. ನಾವು, ರಾಜಕೀಯ ಪಕ್ಷಗಳು ಮತ್ತು ನಾಗರಿಕರು ನ್ಯಾಯ ದೊರಕುವಂತೆ ಖಚಿತಪಡಿಸಲು ನಮ್ಮ ಪಾಲಿನ ಪ್ರಯತ್ನವನ್ನು ಮಾಡಬೇಕಾಗಿದೆ. ಕೋಮು ವೈಷಮ್ಯಕ್ಕೆ ಇನ್ನು ಮುಂದೆ ಒಂದು ಜೀವವೂ ಬಲಿಯಾಗಬಾರದು. ವಿಭಜನೆಗೆ ತಿದಿಯೂದುವುದರಿಂದ ಭಾರತಕ್ಕೆ ಹಾನಿಯಾದರೆ ಯಾರೂ ವಿಜೇತರಿರುವುದಿಲ್ಲ” ಎಂದು ಸೀತಾರಾಂ ಯೆಚುರಿ ಹೇಳಿದ್ದಾರೆ.



ವ್ಯಂಗ್ಯಚಿತ್ರ: ಪಿ. ಮಹಮ್ಮದ್

ರೂಪಾಯಿ ಮೌಲ್ಯ ಇಳಿಯುತ್ತಿರುವುದೇಕೆ?




ಜೂನ್ 29 ರಂದು ಡಾಲರಿಗೆ ಎದುರಾಗಿ ರೂಪಾಯಿ ಮೌಲ್ಯ 79.03ಗೆ ಕುಸಿದು ಹೊಸ ದಾಖಲೆಯನ್ನೇ ನಿರ್ಮಿಸಿತು. ಇದು ತಾತ್ಕಾಲಿಕ ಕುಸಿತ ಅಲ್ಲ. ಕಳೆದ ಮೂರುವ ರ್ಷಗಳಲ್ಲಿ ಮೂರು ಬಾರಿ ಇಂತಹ ಕುಸಿತಗಳು ಉಂಟಾಗಿವೆ. ಮತ್ತು ಈ ಕುಸಿತಗಳು ದೇಶ ಈಗ ಅನುಭವಿಸುತ್ತಿರುವ ಹಣದುಬ್ಬರದ ಸಂಕಟದಲ್ಲೂ ಪಾತ್ರವಹಿಸಿವೆ. ಏಕೆ ರೂಪಾಯಿ ಮೌಲ್ಯದ ಈ ಸತತ ಇಳಿಕೆ? ಪ್ರಸಿದ್ಧ ಅರ್ಥಶಾಸ್ತ್ರಜ್ಞರಾದ ಡಾ. ಸಿ.ಪಿ. ಚಂದ್ರಶೇಖರ್ ಮತ್ತು ಪ್ರೊ.ಜಯತಿ ಘೋಷ್
ಈ ಕುರಿತು ವಿಶ್ಲೇಷಿಸಿರುವ ಜೂನ್ 27, 2022 ರಂದು ಬಿಸಿನೆಸ್ ಲೈನ್‌ನಲ್ಲಿ ಪ್ರಕಟವಾದ ಲೇಖನದ ಅನುವಾದವನ್ನು ನಮ್ಮ ಓದುಗರಿಗಾಗಿ ಇಲ್ಲಿ ಕೊಡುತ್ತಿದ್ದೇವೆ.

ಜೂನ್ ತಿಂಗಳ ದ್ವಿತೀಯಾರ್ಧದಲ್ಲಿ ರೂಪಾಯಿ ಮೌಲ್ಯವು ಅಮೆರಿಕನ್ ಡಾಲರಿಗೆ 78 ಕ್ಕಿಂತಲೂ ಕೆಳಗಿಳಿಯುವ ದಾಖಲೆಗಳನ್ನು ನಿರ್ಮಿಸುತ್ತಿದೆ. ಆದರೆ ಈ ಸಂಗತಿ ರೂಪಾಯಿ ಒಂದು ದೀರ್ಘ ಅವಧಿಯಿಂದ ಕೆಳಗಿಳಿಯುತ್ತಿದೆ ಎಂಬ ಸಂಗತಿಯನ್ನು ನಾವು ಗುರುತಿಸದಂತೆ ಮಾಡಬಾರದು..

ಉದಾಹರಣೆಗೆ, ನಾವು ಕಳೆದ ಮೂರು ವರ್ಷಗಳನ್ನು ಪರಿಗಣಿಸಿದರೆ, ಒಂದು ಡಾಲರಿಗೆ ರೂಪಾಯಿಯ ಮೌಲ್ಯ ಜುಲೈ ಅಂತ್ಯದಲ್ಲಿ ರೂ.68.9 ಇದ್ದದ್ದು ಆಗಸ್ಟ್ ಅಂತ್ಯದ ವೇಳೆಗೆ ರೂ.72ಕ್ಕೆ ಇಳಿಯಿತು. ಅದು ಕೊವಿಡ್–19 ಸಾಂಕ್ರಾಮಿಕದ ಮುಂಚೆಯೇ. ಸಾಂಕ್ರಾಮಿಕ ಆವರಿಸಿ ಅದರೊಂದಿಗೆ ಆರ್ಥಿಕ ಚಟುವಟಿಕೆಗಳು ಹಠಾತ್ ನಿಲುಗಡೆಗೊಂಡ ಅವಧಿಯಲ್ಲಿ, ಫೆಬ್ರವರಿ 2020ರಲ್ಲಿ ಡಾಲರ್‌ಗೆ ಸರಾಸರಿ ಮಾಸಿಕ ರೂಪಾಯಿ ಮೌಲ್ಯ 72.2 ರಿಂದ ಅದೇ ವರ್ಷ ಮಾರ್ಚ್‌ನಲ್ಲಿ 75.4 ಕ್ಕೆ ಮತ್ತೆ ಕುಸಿಯಿತು

ಇತ್ತೀಚೆಗೆ ಜನವರಿ 2022ರಲ್ಲಿ ಡಾಲರಿಗೆ 75 ರೂ.ಇದ್ದದ್ದು, ಮೇ ನಲ್ಲಿ 77.7ಕ್ಕಿಳಿಯಿತು. ಇವುಗಳಲ್ಲಿ ಪ್ರತಿಯೊಂದು ಕುಸಿತದ ಪ್ರಸಂಗದ ನಂತರ ರೂಪಾಯಿ ಮೌಲ್ಯ ಆ ಕುಸಿತದ ನೆರೆಹೊರೆಯಲ್ಲೇ ಮುಂದುವರೆಯಿತು. ಅದರ ನಂತರ ಇನ್ನಷ್ಟು ಅವನತಿಯನ್ನು ಕಾಣುತ್ತಿದೆ.

ರೂಪಾಯಿಯಲ್ಲಿನ ಈ ಕುಸಿತಗಳು, ನಿರೀಕ್ಷೆಯಂತೆ, ಬಹು ಅಂಶಗಳಿಂದ ಪ್ರಭಾವಿತವಾಗಿವೆ. ಪ್ರತಿಯೊಂದು ಬಾರಿ ಮೌಲ್ಯ ಇಳಿಕೆಯಾದಾಗಲೂ ಅದಕ್ಕೆ ಕಾರಣವಾದ ಚಾಲಕ ಅಂಶಗಳ ಪ್ರಾಮುಖ್ಯತೆ ಹೆಚ್ಚು–ಕಡಿಮೆಯಾಗುತ್ತ ಬಂದಿದೆ. ಇವುಗಳಲ್ಲಿ ಪ್ರಮುಖವಾದವುಗಳೆಂದರೆ ಪಾವತಿ ಬಾಕಿ(ಬ್ಯಾಲನ್ಸ್ ಆಫ್ ಪೇಮೆಂಟ್ಸ್)ಯಲ್ಲಿ ವ್ಯಾಪಾರ ಮತ್ತು ಚಾಲ್ತಿ ಖಾತೆಗಳಲ್ಲಿನ ದೌರ್ಬಲ್ಯಗಳು. ಇವುಗಳ ಕೊರತೆಯ ಪ್ರಮಾಣ ಹೆಚ್ಚುತ್ತಿರುವುದು ಕಂಡು ಬಂದಿದೆ. ಭಾರತದ ಸಂದರ್ಭದಲ್ಲಿ ವ್ಯಾಪಾರ ಕೊರತೆಯ ಗಾತ್ರದ ಮೇಲೆ ಪ್ರಭಾವ ಬೀರುವ ಎರಡು ಅಂಶಗಳೆಂದರೆ ತೈಲ ಮತ್ತು ಚಿನ್ನದ ಆಮದುಗಳು. ವಿಶೇಷವಾಗಿ ತೈಲ ಆಮದು. ಆದರೆ, ಕುತೂಹಲಕಾರಿ ಸಂಗತಿಯೆಂದರೆ ಕಳೆದ ಮೂರು ವರ್ಷಗಳಲ್ಲಿ ರೂಪಾಯಿಯ ಮೌಲ್ಯ ಇಳಿಕೆಯ ಮೂರು ಪ್ರಸಂಗಗಳಲ್ಲಿ ಮೊದಲ ಎರಡರಲ್ಲಿ ಏರುತ್ತಿರುವ ತೈಲ ಬೆಲೆಗಳು ವ್ಯಾಪಾರ ಕೊರತೆಯ ಮೇಲೆ ಯಾವುದೇ ಒತ್ತಡ ಉಂಟುಮಾಡಿದ್ದು ಕಂಡು ಬರಲಿಲ್ಲ. ಉದಾಹರಣೆಗೆ,, ಆಗಸ್ಟ್ 2019ರಲ್ಲಿ ಭಾರತ ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ದೈನಂದಿನ ಬೆಲೆಗಳ ಸರಾಸರಿಯು ಬ್ಯಾರಲ್‌ಗೆ 59.35 ಡಾಲರುಗಳಿಗೆ ಕುಸಿಯಿತು. ಅದರ ಹಿಂದಿನ ತಿಂಗಳಲ್ಲಿ ಅದು 63.63 ಡಾಲರ್ ಮತ್ತು ಏಪ್ರಿಲ್ 2019 ರಲ್ಲಿ 71 ಡಾಲರ್ ಇತ್ತು. ಅದೇ ರೀತಿ, ತೈಲ ಬೆಲೆಗಳು ಕೊವಿಡ್–19 ಸಾಂಕ್ರಾಮಿಕವು ಮೊದಲು ಅಪ್ಪಳಿಸಿದಾಗ ಐತಿಹಾಸಿಕ ಕೆಳಮಟ್ಟಗಳಿಗೆ ಕುಸಿದವು.. ಇತ್ತೀಚಿನ ತಿಂಗಳುಗಳಲ್ಲಿ, ರೂಪಾಯಿ ಬೆಲೆ ಕುಸಿತದ ಮೂರನೇ ಪ್ರಸಂಗದಲ್ಲಷ್ಟೇ, ತೈಲಬೆಲೆಗಳು ಏರುತ್ತಿರುವುದು.



ತೈಲಬೆಲೆಗಳು ಕೆಳಮಟ್ಟದಲ್ಲೇ ಇದ್ದಾಗ, ರೂಪಾಯಿ ಕುಸಿತದ ಮೊದಲ ಎರಡು ಪ್ರಸಂಗಗಳಲ್ಲಿ ವ್ಯಾಪಾರ ಸಮತೋಲನ ಕೊರತೆಯಲ್ಲಿದ್ದರೂ ಕೊರತೆಯ ಗರಿಷ್ಠ ಮೌಲ್ಯ ಒಂದು ತ್ರೈಮಾಸಿಕದಲ್ಲಿ ಸುಮಾರು 15 ಶತಕೋಟಿ ಡಾಲರ್ ಮಾತ್ರ. ತೀರಾ ಇತ್ತೀಚಿನ ತ್ರೈಮಾಸಿಕದಲ್ಲಷ್ಟೇ ಅದು 25 ಶತಕೋಟಿ ಡಾಲರಿಗೆ ಏರಿತು, ಇದು ರೂಪಾಯಿ ಮೇಲೆ ಹಾಕಿದ ಒತ್ತಡ ಗಣನೀಯ. ಈ ಒತ್ತಡ ಉಕ್ರೇನ್ ಅತಿಕ್ರಮಣದ ನಂತರ ರಷ್ಯಾದಿಂದ ರಿಯಾಯಿತಿ ಬೆಲೆಗಳಲ್ಲಿ ತೈಲ ಖರೀದಿಯಿಂದ ಭಾರತಕ್ಕೆ ಪ್ರಯೋಜನವಾಗಿದ್ದರೂ ಸಹ ಉಂಟಾಗಿದೆ. ಭಾರತದ ತೈಲ ಸಂಸ್ಕರಣಾಗಾರಗಳು ಮೇ 2022 ರಲ್ಲಿ ಸುಮಾರು 25 ಮಿಲಿಯನ್ ಬ್ಯಾರೆಲ್ ರಷ್ಯಾದ ತೈಲ ಪಡೆದಿವೆ. ಇದು ಅವುಗಳ ತೈಲ ಆಮದಿನ ಶೇಕಡಾ 16 ಕ್ಕಿಂತಲೂ ಹೆಚ್ಚು. ಒಟ್ಟಾರೆಯಾಗಿ, 2021 ರಲ್ಲಿ ಮತ್ತು 2022 ರ ಮೊದಲ ತ್ರೈಮಾಸಿಕದಲ್ಲಿ ಭಾರತದ ಸಮುದ್ರದ ಮೂಲಕ ತೈಲ ಆಮದುಗಳ 1% ಮಾತ್ರ ರಷ್ಯಾದಿಂದ ಬಂದಿದ್ದರೆ, ಎಪ್ರಿಲ್ 2022ರಲ್ಲಿ ಅದು 5% ದಷ್ಟಾಯಿತು.

ಈ ಎಲ್ಲಾ ಮೂರು ಪ್ರಸಂಗಗಳಲ್ಲಿ ದೇಶದಿಂದ ಬಂಡವಾಳದ ಹೊರಹರಿವು ರೂಪಾಯಿ ಮೌಲ್ಯ ಇಳಿಕೆಯ ಸಾಮಾನ್ಯ ಚಾಲಕ ಅಂಶವಾಗಿತ್ತು. ಆಗಸ್ಟ್ 2019 ರಲ್ಲಿ ರೂಪಾಯಿ ಮೌಲ್ಯವು ಇಳಿದದ್ದು ಮುಖ್ಯವಾಗಿ ವಿದೇಶಿ ಹೂಡಿಕೆದಾರರ ನಿರ್ಗಮನದಿಂದಾಗಿ, ಬಂಡವಾಳದ ಹೊರಹರಿವಿನ ನಂತರ ನಿವ್ವಳ ಹೂಡಿಕೆಗಳಲ್ಲಿ ಇಳಿಕೆಯಾಯಿತು. ಜೂನ್ 2019 ರಲ್ಲಿ, ನಿವ್ವಳ ಪೋರ್ಟ್‌ಫೋಲಿಯೊ ಹೂಡಿಕೆಯು ತೀವ್ರವಾಗಿ ಕೆಳಗಿಳಿಯಿತು. ಮತ್ತು ನಂತರ ಮುಂದಿನ ಎರಡು ತಿಂಗಳುಗಳಲ್ಲಿ ಋಣಾತ್ಮಕವಾಗಿ ತಿರುಗಿತು. ತರುವಾಯ, ಸೆಪ್ಟೆಂಬರ್‌ನಲ್ಲಿ ನಿವ್ವಳ ಪೋರ್ಟ್‌ಫೋಲಿಯೊ ಹೂಡಿಕೆಯು ಸ್ವಲ್ಪ ಧನಾತ್ಮಕವಾಗಿ ತಿರುಗಿದಾಗ, ರೂಪಾಯಿ ಕೂಡ ಸ್ಥಿರವಾಯಿತು, ತುಸು ಮೌಲ ಏರಿಕೆಯೂ ಆಯಿತು. ಇದೇ ರೀತಿ, ಮಾರ್ಚ್ 2020 ರಲ್ಲಿ ಅಂತ್ಯಗೊಂಡ ತ್ರೈಮಾಸಿಕದಲ್ಲಿ, ಸಾಂಕ್ರಾಮಿಕವು ಸೃಷ್ಟಿಸಿದ ಅನಿಶ್ಚಿತತೆ 13.7 ಶತಕೋಟಿ ಡಾಲರುಗಳ ನಿವ್ವಳ ಬಂಡವಾಳ ಹೊರಹರಿವಿಗೆ ಕಾರಣವಾಯಿತು. ಮುಂದಿನ ತ್ರೈಮಾಸಿಕದಲ್ಲಿ 64.2 ಡಾಲರಿನಷ್ಟು ಮಾತ್ರ ಒಳಹರಿವು ಕಂಡು ಬಂತು. ತರುವಾಯ, ಅಭಿವೃದ್ಧಿ ಹೊಂದಿದ ದೇಶಗಳ ಕೇಂದ್ರ ಬ್ಯಾಂಕುಗಳು ತಮ್ಮ ಹಣ ಹರಿವು ಧೋರಣೆಯನ್ನು ಸುಗಮಗೊಳಿಸಿದಾಗ ಮಾತ್ರ ಒಳಹರಿವು ಸೆಪ್ಟೆಂಬರ್ ಮತ್ತು ಡಿಸೆಂಬರ್ 2020 ಕ್ಕೆ ಕೊನೆಗೊಂಡ ತ್ರೈಮಾಸಿಕಗಳಲ್ಲಿ ಅನುಕ್ರಮವಾಗಿ 7 ಶತಕೋಟಿ ಮತ್ತು 21.2 ಶತಕೋಟಿ ಡಾಲರಿಗೆ ಏರಿತು.

ಅಂತಿಮವಾಗಿ, ಇತ್ತೀಚಿನ ತಿಂಗಳುಗಳಲ್ಲಿ, ಜಾಗತಿಕ ಅನಿಶ್ಚಿತತೆ ಮತ್ತು, ಜಾಗತಿಕ ಮತ್ತು ಯುಎಸ್ ನ ಬಡ್ಡಿದರಗಳಲ್ಲಿ ಹಣದುಬ್ಬರ–ಪ್ರೇರಿತ ಏರಿಕೆಗಳಾಗಬಹುದು ಎಂಬ ನಿರೀಕ್ಷೆಗಳಿಂದ ಬಂಡವಾಳ ಮತ್ತೆ ದೇಶದಿಂದ ಹೊರಕ್ಕೆ ಹರಿಯಲಾರಂಭಿಸಿದೆ. 2022 ರಲ್ಲಿ ಜೂನ್ 16 ರವರೆಗೆ, ಭಾರತೀಯ ಬಾಂಡ್ ಮತ್ತು ಇಕ್ವಿಟಿ ಮಾರುಕಟ್ಟೆಗಳಿಂದ ನಿವ್ವಳ ಹೊರಹರಿವು 26.9 ಶತಕೋಟಿ ಡಾಲರುಗಳು. ಭಾರತದ ಹಣಕಾಸು ಮಾರುಕಟ್ಟೆಗಳಲ್ಲಿ ಸದಾ ತಿರುಗಾಟದಲ್ಲಿರುವ ವಿದೇಶಿ ಹೂಡಿಕೆಗಳ ಶೇಖರಣೆಯಾಗಿದ್ದು, ಅನಿಶ್ಚಿತತೆಯ ಅವಧಿಯಲ್ಲಿ ಅವುಗಳು ದೇಶಬಿಟ್ಟು ಹೊರಕ್ಕೆ ಹರಿದು ಹೋಗುತ್ತಿರುವುದು ಇತ್ತೀಚಿನ ದಿನಗಳಲ್ಲಿ ರೂಪಾಯಿ ಮೌಲ್ಯದಲ್ಲಿ ತೀವ್ರ ಏರಿಕೆಗಳಿಗೆ ಕಾರಣವಾಗಿದೆ ಎಂಬುದು ಸ್ಪಷ್ಟ.

ಭಾರತೀಯ ರಿಝರ್ವ್ ಬ್ಯಾಂಕ್(ಆರ್‌ಬಿಐ) ಬಳಿ ದೊಡ್ಡ ವಿದೇಶಿ ವಿನಿಮಯ ಮೀಸಲು ಇರುವುದರಿಂದಾಗಿ ಅದು ತನ್ನ ಬಹಿರಂಗ ಮಾರುಕಟ್ಟೆ ಮಧ್ಯಪ್ರವೇಶದ ಮೂಲಕ ರೂಪಾಯಿಯ ಮೌಲ್ಯದ ಈ ಅವನತಿಯನ್ನು ಮುಕ್ತವಾಗಿ ಸ್ಥಗಿತಗೊಳಿಸಬಹುದಿತ್ತು ಎಂದು ಕಾಣುತ್ತದೆ. ವಾಸ್ತವವಾಗಿ, ಬಂಡವಾಳದ ಹೊರಹರಿವಿನ ಹೊರತಾಗಿಯೂ, ಅದರ ವಿದೇಶಿ ಮೀಸಲು ಆಸ್ತಿಗಳು 2019 ರ ಕೊನೆಯ ತ್ರೈಮಾಸಿಕದಿಂದ ಬಹುತೇಕ ಎಲ್ಲಾ ತ್ರೈಮಾಸಿಕಗಳಲ್ಲಿ (ಮಾರ್ಚ್ 2021 ಮತ್ತು ಮಾರ್ಚ್ 2022 ಕ್ಕೆ ಕೊನೆಗೊಂಡ ಎರಡು ತ್ರೈಮಾಸಿಕಗಳನ್ನು ಬಿಟ್ಟು) ಇಳಿಯುವ ಬದಲು ಹೆಚ್ಚಾಗಿವೆ. ವಿದೇಶಿ ಡಾಲರ್ ಸೊತ್ತುಗಳ ಮಾರಾಟ ರೂಪಾಯಿಯನ್ನು ಬಲಪಡಿಸಲು ಮತ್ತು ಡಾಲರಿನ ಎದುರು ಅದರ ಮೌಲ್ಯದಲ್ಲಿನ ಇಳಿಕೆಯನ್ನು ನಿಲ್ಲಿಸಲು ಅಥವಾ ಮಿತಗೊಳಿಸಲು ಸಹಾಯ ಮಾಡಬುದಾಗಿತ್ತು. ಆದರೆ, ಜನವರಿ 2020 ರ ನಂತರ ಕೆಲವು ತಿಂಗಳುಗಳಲ್ಲಿ ಮಾತ್ರವೇ ಆರ್‌ಬಿಐ ಡಾಲರ್‌ಗಳ ನಿವ್ವಳ ಮಾರಾಟಗಾರನಾಗಿತ್ತು.

ಇದು ರೂಪಾಯಿ ಮೌಲ್ಯದಲ್ಲಿ ಸವಕಳಿಯಾಗಲು ಬಿಡುವ ಮೂಲಕ ಭಾರತದ ರಫ್ತುಗಳ ಸ್ಪರ್ಧಾತ್ಮಕತೆಯನ್ನು ಉತ್ತಮಗೊಳಿಸಲು ಮತ್ತು ಆಮದುಗಳನ್ನು ರೂಪಾಯಿ ದೃಷ್ಟಿಯಲ್ಲಿ ದುಬಾರಿಗೊಳಿಸಲು, ಆಮೂಲಕ ವ್ಯಾಪಾರ ಕೊರತೆಯನ್ನು ಇಳಿಸಲು ಆರ್‌ಬಿಐ ಮಾಡಿದ ಒಂದು ಪ್ರಯತ್ನ ಎಂದು ಅರ್ಥೈಸಬಹುದೇನೋ. ಆದರೆ ಈ ಲೇಖನದಲ್ಲಿ ಚರ್ಚಿಸಿದಂತೆ ರೂಪಾಯಿಯ ಮೌಲ್ಯದಲ್ಲಿ ದೀರ್ಘಾವಧಿಯ ಸವಕಳಿಯ ಹೊರತಾಗಿಯೂ ವ್ಯಾಪಾರ ಖಾತೆಯು ದುರ್ಬಲವಾಗಿಯೇ ಉಳಿದಿದೆ. ವಾಸ್ತವವಾಗಿ, ಇತ್ತೀಚಿನ ಸುತ್ತಿನ ರೂಪಾಯಿ ಮೌಲ್ಯದ ಇಳಿಕೆಯ ಸಮಯದಲ್ಲಿ, ರಫ್ತು ಸ್ವಲ್ಪಮಟ್ಟಿಗೆ ಉತ್ತಮಗೊಂಡಿದ್ದರೂ ಸಹ ಆಮದುಗಳಿಗೆ ತೆರಬೇಕಾದ ಮೊತ್ತ ತುಂಬಾ ತೀವ್ರವಾಗಿ ಏರಿತು, ಇದರ ಪರಿಣಾಮವಾಗಿ ವ್ಯಾಪಾರ ಕೊರತೆಯು ಗಮನಾರ್ಹವಾಗಿ ಹೆಚ್ಚಾಯಿತು.

ಈ ನಡುವೆ, ರೂಪಾಯಿ ಮೌಲದಲ್ಲಿ ಇಳಿಕೆಯು ಭಾರತೀಯ ಅರ್ಥವ್ಯವಸ್ಥೆಯೊಳಗೆ, ಹಣದುಬ್ಬರದ ಒತ್ತಡಗಳಿಗೆ ತನ್ನ ಪಾಲನ್ನೂ ಸೇರಿಸುತ್ತಿದೆ.

ರೂಪಾಯಿ ಮೌಲ್ಯದ ಸವಕಳಿಯಿಂದ ವ್ಯಾಪಾರ ಕೊರತೆಯ ಪ್ರಮಾಣ ಇಳಿಯುವ ಬದಲು ಕೊರತೆಯ ಹೆಚ್ಚಳದಿಂದಾಗಿಯೇ ರೂಪಾಯಿ ಮೌಲ್ಯದಲ್ಲಿ ಸವಕಳಿ ಉಂಟಾಗುತ್ತಿರುವಂತೆ ಕಾಣುತ್ತದೆ. ವ್ಯಾಪಾರ ಕೊರತೆಯ ಸಮಸ್ಯೆಯನ್ನು ನಿಭಾಯಿಸಲು ಬೇರೆ ಕ್ರಮಗಳು ಅಗತ್ಯ ಎಂಬುದು ಸ್ಪಷ್ಟವಾಗಿದೆ. ಈ ನಡುವೆ ಆರ್‌ಬಿಐ ರೂಪಾಯಿ ಮೌಲ್ಯದ ಏರಿಕೆಗಳಿಗೆ ಕಾರಣವಾಗುತ್ತಿರುವ ಚಂಚಲ ಬಂಡವಾಳದ ಹರಿವುಗಳನ್ನು ವಿತಗೊಳಿಸುವ ಕಾರ್ಯತಂತ್ರಗಳನ್ನು ಕೂಡ ಪರಿಶೀಲಿಸಬೇಕಾಗಿದೆ.



ವ್ಯಂಗ್ಯಚಿತ್ರ: ಅಲೋಕ್ ನಿರಂತರ್

ಕಳೆದ ಮೂರು ವರ್ಷಗಳಲ್ಲಿ ದೇಶದಿಂದ ಬಂಡವಾಳದ ಹೊರಹರಿವು ರೂಪಾಯಿ ಮೌಲ್ಯ ಇಳಿಕೆಯ ಸಾಮಾನ್ಯ ಚಾಲಕ ಅಂಶವಾಗಿತ್ತು. ಇತ್ತೀಚಿನ ತಿಂಗಳುಗಳಲ್ಲಿ, ಜಾಗತಿಕ ಅನಿಶ್ಚಿತತೆ ಮತ್ತು, ಜಾಗತಿಕ ಮತ್ತು ಯುಎಸ್ ನ ಬಡ್ಡಿದರಗಳಲ್ಲಿ ಹಣದುಬ್ಬರ–ಪ್ರೇರಿತ ಏರಿಕೆಗಳಾಗಬಹುದು ಎಂಬ ನಿರೀಕ್ಷೆಗಳಿಂದ ಬಂಡವಾಳ ಮತ್ತೆ ದೇಶದಿಂದ ಹೊರಕ್ಕೆ ಹರಿಯಲಾರಂಭಿಸಿದೆ. ಭಾರತದ ಹಣಕಾಸು ಮಾರುಕಟ್ಟೆಗಳಲ್ಲಿ ಸದಾ ತಿರುಗಾಟದಲ್ಲಿರುವ ವಿದೇಶಿ ಹೂಡಿಕೆಗಳ ಶೇಖರಣೆಯಾಗಿದ್ದು, ಅನಿಶ್ಚಿತತೆಯ ಅವಧಿಯಲ್ಲಿ ಅವುಗಳು ದೇಶಬಿಟ್ಟು ಹೊರಕ್ಕೆ ಹರಿದು ಹೋಗುತ್ತಿರುವುದು ಇತ್ತೀಚಿನ ದಿನಗಳಲ್ಲಿ ರೂಪಾಯಿ ಮೌಲ್ಯದಲ್ಲಿ ತೀವ್ರ ಏರಿಕೆಗಳಿಗೆ ಕಾರಣವಾಗಿದೆ ಎಂಬುದು ಸ್ಪಷ್ಟ. ಆದ್ದರಿಂದ ಆರ್‌ಬಿಐ ರೂಪಾಯಿ ಮೌಲ್ಯದ ಏರಿಕೆಗಳಿಗೆ ಕಾರಣವಾಗುತ್ತಿರುವ ಚಂಚಲ ಬಂಡವಾಳದ ಹರಿವುಗಳನ್ನು ವಿತಗೊಳಿಸುವ ಕಾರ್ಯತಂತ್ರಗಳನ್ನು ಕೂಡ ಪರಿಶೀಲಿಸಬೇಕಾಗಿದೆ.

ಮೀಸಲಾತಿ–ಪುಸ್ತಕ ಬಿಡುಗಡೆ..... ಪುಟ 16 ರಿಂದ

ಖಂಡಿಸಲು ಒಂದಾಗಬೇಕಿದೆ ಇಂತಹ ಚಳುವಳಿಗಳಿಗೆ ಪೂರಕವಾಗಿ ಅವರ ಕೃತಿಗಳಿವೆ ಎಂದು ಬಂಜಗೆರೆ ಅಭಿಪ್ರಾಯ ಪಟ್ಟರು. ಮೀಸಲಾತಿಯ ನಿಜವಾದ ಫಲಾನುಭವಿಗಳು 2% ಜನರು ಎಂದ ಅವರು ಖಾಸಗೀಕರಣ ಮೀಸಲಾತಿಯ ಕತ್ತು ಹಿಸುಕುತ್ತಿದೆ ಎನ್ನುತ್ತಾ ಕೃಷಿಯಲ್ಲಿಯೂ ಮೀಸಲಾತಿ ಇದೆ, ಅದು ಕೂಲಿ ಮಾಡುವ ಕೆಳ ಜನರಿಗಿರುವ ಮೀಸಲಾತಿ ಎಂದು ಮರುಗಿದರು. ಆ ಕೆಟಗರಿಗೆ ನಮ್ಮನ್ನ ಸೇರಿಸಿ ಈ ಕೆಟಗರಿಯಲ್ಲಿ ತನ್ನಿ ಎನ್ನುವ ಕೂಗು ಮತ್ತೊಂದು ಭ್ರಮೆ ಎನ್ನುತ್ತಾ ಉದ್ಯೋಗಾವಕಾಶಗಳೆ ಸೀಮಿತವಾಗುತ್ತಿರುವಾಗ ಇಂತಹ ಹೋರಾಟಗಳು ಎಷ್ಟರ ಮಟ್ಟಿಗೆ ಫಲಕಾರಿಯಾದವುಗಳು ಎಂದು ಪ್ರಸ್ನಿಸಿದರು.

ಹಿರಿಯ ಪತ್ರಕರ್ತ ಬಿ.ಎಂ.ಹನೀಫ್, "ಇದು ಸಾಂಸ್ಕೃತಿಕ ವೇದಿಕೆ. ಇಲ್ಲಿ ಹೊಸ ಚರ್ಚೆಗಳನ್ನು ಹುಟ್ಟು ಹಾಕಲು ಸಾಧ್ಯವಾಗಬೇಕೆಂದರು. ಸರ್ಕಾರಿ ಉದ್ಯೋಗಗಳು ಗಣನೀಯವಾಗಿ ಕುಸಿಯುತ್ತಿವೆ, ಖಾಸಗೀಕರಣ ಪ್ರಕ್ರಿಯೆಯ ಸಂದರ್ಭದಲ್ಲಿ ಮೀಸಲಾತಿಗಾಗಿ ಬಡಿದಾಡುತ್ತಿದ್ದೇವೆ. ಅದೇ ಸಂದರ್ಭಕ್ಕೆ ಪ್ರತಿಭೆಗೆ ಅನ್ಯಾಯವಾಗುತ್ತಿದೆ ಎಂದು 2% ಜನರ ಕೂಗೆದ್ದಿದೆ" ಎಂದು ವಾಸ್ತವದ ಚಿತ್ರಣ ಮುಂದಿಡಲು ಪ್ರಯತ್ನಿಸಿದರು. 2014 ಕ್ಕೆ ಹೋಲಿಸಿದರೆ ನಾಲ್ಕು ಪಟ್ಟು ಬ್ಯಾಕ್ ಲಾಗ್ ಹುದ್ದೆಗಳು ಖಾಲಿ ಇವೆಯೆಂದು ಸುಪ್ರಿಂ ಕೋರ್ಟ್ ಹೇಳುತ್ತಿದೆ. ಪಠ್ಯ ಪುಸ್ತಕ ಪರಿಷ್ಕರಣೆಯ ವಿಚಾರಕ್ಕೆ ಬಂದರೆ ಒಂಭತ್ತರಲ್ಲಿ ಎಂಟು ಮಂದಿ ಒಂದೇ ಜಾತಿಗೆ ಸೇರಿದ ಸದಸ್ಯರಿದ್ದಾರೆ. ಇದು ಯಾವ ಮೀಸಲಾತಿ? ಎಂದು ಸವಾಲೆಸೆದರು. 98% ಜನರಿಗೆ ಎಂದಿಗೆ ಈ ಮೀಸಲಾತಿ ಎಂದು ಹನೀಫ್ ಪ್ರಶ್ನಿಸಿದರು. ಖಾಸಗಿ ಕಂಪನಿಗಳಲ್ಲಿ ಮೀಸಲಾತಿಯ ಲೆಕ್ಕ ಮಾಡುವ ವ್ಯವಸ್ಥೆಯೇ ಇಲ್ಲ. ಇನ್ಫೋಸಿಸ್ ಕಂಪನಿಯಲ್ಲೊಮ್ಮೆ ಗಣತಿಯ ವಿವರ ಕೇಳಲಾಗಿ ಅವರು "ಸದ್ಯ ನಮ್ಮಲ್ಲಿ ಈ ವಿವರಗಳಿಲ್ಲ ಮುಂದೆ ನೋಡೋಣ" ಎಂದು ಉತ್ತರಿಸಿದರು ಎನ್ನುತ್ತಾ ಖಾಸಗಿ ಕ್ಷೇತ್ರದಲ್ಲಿ ಮೀಸಲಾತಿ ಜಾರಿಯಾಗುವುದು ಯಾವಾಗ ಎನ್ನುವ ದೊಡ್ಡ ಪ್ರಶ್ನೆ ನಮ್ಮ ಎದುರಲ್ಲಿದೆ ಎಂದರು. ಮೇಲ್ಜಾತಿಗಳಿಗೆ ಸೇರಿದವರಿಗೆ 10% ಕೊಟ್ಟಿದ್ದು ಯಾವ ಸಾಮಾಜಿಕ ನ್ಯಾಯದ ಅಡಿಯಲ್ಲಿ ಎಂದು ಟೀಕಿಸಿದರು.

ಹೆಸರಾಂತ ಸಂಗೀತ ನಿರ್ದೇಶಕ ಹಂಸಲೇಖ ಮಾತನಾಡಿ "ಮೀಸಲಾತಿಯ ವಿಚಾರವನ್ನು ಬಹಳ ಗಹನವಾಗಿ ಅಧ್ಯಯನ ಮಾಡಿ ಮಾತನಾಡಬೇಕಾಗುತ್ತದೆ ಎನ್ನುತ್ತಾ, ಓದಿದರೂ ಓದದವರಲ್ಲ, ಬೆಳೆದರೂ ಬೆಳೆದವರಲ್ಲ, ಕಾಸ್ಟಿದ್ದರು ಕ್ಯಾಷ್ ಆಗಲ್ಲ ಇದು ನಮ್ಮಂತಹ OBC ಗಳ ಪರಿಸ್ಥಿತಿ ಎಂದು ಬಣ್ಣಿಸಿದರು. ಬುದ್ಧ, ಬಸವಣ್ಣ, ಅಂಬೇಡ್ಕರ್ ಅವರನ್ನು ಆರಾಧಿಸುವ ನಾವು ಪ್ರತಿಭಾವಂತರಲ್ಲವೆ? ಆರ್ಯರಂತೆ ಕಾಣದ ದ್ರಾವಿಡನಾದ ನಾನು ಪ್ರತಿಭಾವಂತನಲ್ಲವೆ? ಭವಮಣಿ ಇದೆಯೊ ಇಲ್ಲವೊ ಗೊತ್ತಿಲ್ಲ ಅದರೆ ಭಾವಮಣಿ ಖಂಡಿತಾ ಇದೆ ಎಂದು ನಗೆಯಾಡಿದರು. ನಮ್ಮ ತಲಬಾಗಿಲನ್ನು ಕಂಡವರಿಗೆ ಕೊಟ್ಟು ಅವರನ್ನು ಕಾಯುವ ಸ್ಥಿತಿ ನಮ್ಮದಾಗಿದೆ, ನಾವು ನಿಷ್ಕ್ರಿಯರಾದರೆ ಬೇರೆಯವರು ಸಕ್ರಿಯರಾಗುತ್ತಾರೆ ಅದನ್ನೇ ಈ ಪುಸ್ತಕ ವಿವರಿಸಿದೆ" ಎಂದು ಬಣ್ಣಿಸಿದರು. "ಈ ಪುಸ್ತಕವೂ ಒಂದು ಮಹಾಕಾವ್ಯ. ಪ್ರತಿರೋಧವನ್ನು ಬಿಂಬಿಸುವ ಮಹಾಕಾವ್ಯ, ಈ ಪುಸ್ತಕದ ಸಾಲುಗಳನ್ನು ಹಾಡುಗಳನ್ನಾಗಿಸಿ ಜನರ ಬಳಿಗೆ ತೆಗೆದುಕೊಂಡು ಹೋಗಬೇಕು, ನಾನದನ್ನ ಮಾಡುತ್ತೇನೆ" ಎಂದು ಸಭೆಯಲ್ಲಿ ಘೋಷಿಸಿದರು. ಹನ್ನೆರಡನೆಯ ಶತಮಾನದ ಶರಣರು ಪ್ರತಿಪಾದಿಸಿದ ಹಂಗಿಲ್ಲದ ಮೀಸಲಾತಿಗಾಗಿ ನಾವು ದುಡಿಯಬೇಕು ಎನ್ನುತ್ತಾ ಕಾಯಕ, ದಾಸೋಹದ ಶರಣರ ನಿಲುವನ್ನು ಮೆಲುಕು ಹಾಕಿದರು.

ಆರ್ಥಿಕ ತಜ್ಞ ಡಾ.ಟಿ.ಆರ್.ಚಂದ್ರಶೇಖರ್, "ಪುಸ್ತಕವನ್ನು ಇಂಗ್ಲಿಷ್ ಭಾಷೆಯಲ್ಲಿ ತರಲು ಅವಕಾಶ ನೀಡಿದ ಜಸ್ಟೀಸ್ ದಾಸ್ ಅವರಿಗೆ ಧನ್ಯವಾದಗಳನ್ನು ತಿಳಿಸುತ್ತಾ "ಶ್ರೇಣೀಕೃತ ವ್ಯವಸ್ಥೆಯಲ್ಲಿ ಎಲ್ಲ ಜಾತಿಯಲ್ಲೂ ಬಡವರಿದ್ದಾರೆಂದು ಮೀಸಲಾತಿ ನೀಡುವುದಾದರೆ ಅದು ಅಭಿವೃದ್ಧಿ ಅಲ್ಲ" ಎಂದರು. "ಎಪ್ಪತ್ತೈದು ವರ್ಷಗಳಿಂದ ಹಕ್ಕಿಗಾಗಿ ಹೋರಾಟ ಮಾಡಿದ್ದರಿಂದ ಈ ದೇಶ ಬಡವಾಗಿದೆಯೆಂದು ಪ್ರಧಾನ ಮಂತ್ರಿ ಹೇಳುತ್ತಾ ಇನ್ನಾದರು ಸೇವೆಯ ಬಗೆಗೆ ಯೋಚಿಸಬೇಕು ಎಂದಿದ್ದಾರೆ. ಇದರ ಹಿಂದಿರುವ ಹುನ್ನಾರ ಏನು" ಎಂದು ಡಾ.ಟಿ.ಆರ್.ಸಿ. ಪ್ರಶ್ನೆ ಮಾಡಿದರು. ಮೀಸಲಾತಿ ಸೇವೆ ಅಲ್ಲ ಹಕ್ಕು ಎಂದ ಅವರು ಅಸಮಾನತೆಯ ಬಗ್ಗೆ ಮಾತನಾಡುವುದೇ ಅಪಾಯ ಎನ್ನುವಂತಾಗಿರುವಾಗ ಈ ಪುಸ್ತಕದ ಓದು ಒಳನೋಟಗಳನ್ನು ನೀಡುತ್ತದೆ ಎಂದರು. ಅನ್ನಭಾಗ್ಯ ಯೋಜನೆಯನ್ನು ಇನ್ಫೋಸಿಸ್ ಮುಖ್ಯಸ್ಥರು ಸಾರ್ವಜನಿಕ ಹಣದ ಲೂಟಿ ಎಂದರು. ಆದರೆ ಅವರ ಕಂಪನಿಗೆ ಬಳಸುತ್ತಿರುವ ರಿಯಾಯ್ತಿ ದರದ ವಿದ್ಯುತ್ ಕುರಿತು ಮಾತನಾಡುವುದೇ ಇಲ್ಲ, ಈ ಬಗ್ಗೆ ನಾವು ಮಾತಾಡಲು ನಮಗೆ ಕೀಳರಿಮೆ ಬೇಕಿಲ್ಲ ಎಂದು ಎಚ್ಚರಿಸಿದರು. ವಂಚಿತರಿಗೆ ಅವಕಾಶಗಳು ಸಿಗಬೇಕೆನ್ನುವುದು ಸಾಮಾಜಿಕ ನ್ಯಾಯ, ಇದನ್ನ ಗುರಿಯಾಗಿಸಿಕೊಂಡು ಅಭಿವೃದ್ಧಿ ಯೋಜನೆಗಳು ರೂಪುಗೊಳ್ಳಬೇಕೆಂದು ಸಲಹೆ ನೀಡಿದರು. ಕರ್ನಾಟಕಕ್ಕೆ ಮೀಸಲಾತಿಯ ನೂರು ವರ್ಷಗಳ ಇತಿಹಾಸವಿದೆ, ಸರ್ಕಾರ ಇದನ್ನು ಆಚರಿಸಲಿಲ್ಲ ಎಂದು ಖೇದ ವ್ಯಕ್ತ ಪಡಿಸಿದರು. ಮಕ್ಕಳು, ಮಹಿಳೆಯರಲ್ಲಿ ಕುಸಿಯುತ್ತಿರುವ ಪೌಷ್ಟಿಕಾಂಶದ ಬಗೆಗೆ ಪ್ರಸ್ತಾಪಿಸಿ ಮಕ್ಕಳಿಗೆ ಮೊಟ್ಟೆ ಕೊಡುವ ಪ್ರಸ್ತಾಪ ಬಂದಾಗಲು ಎದುರಾದ ವಿರೋಧಕ್ಕೆ ಆಕ್ರೋಶ ವ್ಯಕ್ತಪಡಿಸಿದರು.

ಪುಸ್ತಕದ ಕರ್ತೃ ಜಸ್ಟೀಸ್ ನಾಗಮೋಹನ ದಾಸ್ ಮಾತನಾಡಿ ನಾನು ಶಾಲಾ ಹಂತದಿಂದಾರಂಭಿಸಿ ಕಾನೂನು ಪದವಿಯವರೆಗೆ ಮೂರನೆಯ ದರ್ಜೆಯಲ್ಲಿಯೆ ಉತ್ತೀರ್ಣನಾದೆ, ಕೊನೆಯಲ್ಲಿ ಕೋಟು ಧರಿಸಿ ವಕೀಲಿ ವೃತ್ತಿ ಪ್ರಾರಂಭಿಸಿದೆ. ಇದಕ್ಕೇನಾದರೂ ಪ್ರವೇಶ ಪರೀಕ್ಷೆ ಇದ್ದಿದ್ದರೆ ನಾನು ಪಾಸಾಗುತ್ತಿರಲಿಲ್ಲವೇನೊ? ಆದರೆ ಪ್ರವೇಶ ಪರೀಕ್ಷೆ ಇರಲಿಲ್ಲವೆಂದು ತಮ್ಮ ವಿದ್ಯಾರ್ಥಿ ಜೀವನದ ಅನುಭವವನ್ನು ಹಂಚಿಕೊಳ್ಳುತ್ತ ಈಗ ನಾನು ಯಾವ ಕ್ಲಾಸ್ ಎನ್ನುವ ಪ್ರಶ್ನೆಯನ್ನು ಸಭಿಕರ ಮುಂದಿಟ್ಟು, ಸಭಿಕರಿಂದ ಫಸ್ಟ್ ಕ್ಲಾಸ್ ಎನ್ನುವ ಉತ್ತರ ಪಡೆದರು. ಅವಕಾಶಗಳು ಲಭ್ಯವಾದರೆ ಎಲ್ಲರಲ್ಲಿರುವ ಪ್ರತಿಭೆಗಳು ಅನಾವರಣಗೊಳ್ಳುತ್ತವೆಯೆಂದು ತಮ್ಮ ಬದುಕಿನ ವೃತ್ತಾಂತವನ್ನು ಪ್ರಸ್ತಾಪಿಸಿದರು. ಭಾರತದಲ್ಲಿ ಜಾತಿ ಅಸಮಾನತೆ, ವರ್ಗ ಅಸಮಾನತೆ ಜೊತೆಜೊತೆಗೆ ಸಾಗಿವೆ ಹೀಗಾಗಿ ಈ ಸಮಾಜಕ್ಕೆ ಸಾಮಾಜಿಕ ನ್ಯಾಯದ ಅಗತ್ಯವಿದ್ದು ಅದು ಸಂವಿಧಾನಾತ್ಮಕವಾಗಿ ಲಭ್ಯವಾಗಿದೆ ಎಂದರು. ಸಂವಿಧಾನದ ಓದು ಅಭಿಯಾನದ ಸಂದರ್ಭದಲ್ಲಿ ಮೀಸಲಾತಿಯ ಕುರಿತಾದ ಪ್ರಶ್ನೆಗಳು ಹೆಚ್ಚು ಇರುತ್ತಿದ್ದವು, ಅದರಲ್ಲು ಪ್ರತಿಭೆಯ ಪ್ರಶ್ನೆ ಪ್ರಧಾನವಾಗಿರುತ್ತಿತ್ತು ಆ ಕಾರಣಕ್ಕಾಗಿ ಈ ಪುಸ್ತಕವನ್ನು ತರಬೇಕಾಯಿತು ಎಂದರು.

ವಿಮರ್ಶೆ, ಟೀಕೆ, ಪ್ರಶ್ನೆ ಎಲ್ಲವೂ ಪ್ರಜಾಪ್ರಭುತ್ವದ ಸಾರ. ಸಹಿಷ್ಣತೆ ಈ ಹೊತ್ತಿನ ತುರ್ತು. ಇದು ನಮ್ಮ ಸಂಸ್ಕೃತಿ, ಸಂವಿಧಾನ, ಆಚರಣೆ, ದೇಶ, ಪರಂಪರೆ. ಅಸಹಿಷ್ಣತೆ ನಮ್ಮ ಸಂಸ್ಕೃತಿ ಅಲ್ಲ, ಒಂದು ವರ್ಗದ ಜನ ಈ ಅಸಹಿಷ್ಣತೆಯನ್ನು ಹುಟ್ಟು ಹಾಕುತ್ತಿದೆ ಎಂದರು. ಮೀಸಲಾತಿಯ ಫಲಾನುಭವಿಗಳಿಂದಲೇ ಅದರ ವಿರುದ್ಧ ದನಿ ಏಳುತ್ತದೆ ಹೇಗೆ ಎಂದರು. ಎಪ್ಪತ್ತೈದು ವರ್ಷಗಳಿಂದ ಮೀಸಲಾತಿ ಜಾರಿಯಲ್ಲಿ ಇದೆ, ಎಲ್ಲರ ಬದುಕು ಹಸನಾಯಿತೆ ಎನ್ನುತ್ತಾ ಶಾಶ್ವತ ಪರಿಹಾರದ ಬಗೆಗೆ ಯೋಚಿಸಲೇಬೇಕಾಗಿದೆ ಅಲ್ಲಿಯವರೆಗು ಮೀಸಲಾತಿ ಅನಿವಾರ್ಯ ಎಂದು ತಮ್ಮ ಮಾತಿಗೆ ವಿರಾಮ ನೀಡಿದರು.

ಪುಸ್ತಕವನ್ನು ಪ್ರಕಟಿಸಿದ ಜನಪ್ರಕಾಶನದ ಬಿ. ರಾಜಶೇಖರ ಮೂರ್ತಿ ಪ್ರಾಸ್ತಾವಿಕ ಮಾತುಗಳನ್ನಾಡಿದರು. ಚಿಂತಕ ರಾಜಶೇಖರ ಕಿಗ್ಗ ಕಾರ್ಯಕ್ರಮ ನಿರೂಪಣೆ ಮಾಡಿದರು. ರವೀಂದ್ರ ಕಲಾಕ್ಷೇತ್ರದಲ್ಲಿ ನಡೆದ ಸಮಾರಂಭದಲ್ಲಿ ವಿವಿಧ ಕ್ಷೇತ್ರಗಳ ಪ್ರಮುಖರು, ಸಾಮಾಜಿಕ ಕಾರ್ಯಕರ್ತರು ಕಿಕ್ಕಿರಿದು ತುಂಬಿದ್ದರು.

ನೂರಾರು ಕನಸು ಕಟ್ಟಿಕೊಂಡವ ವೇಣು...... ಪುಟ 16 ರಿಂದ

ಪ್ರಾಂಶುಪಾಲರಾಗಿ ನಿವೃತ್ತಿಯಾದ ಮೇಲೆ ವೇಣು ಸಂಪೂರ್ಣವಾಗಿ ವಿವಿಧ ರೀತಿಯ ರಂಗ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು. ರಾಷ್ಟ್ರೀಯ ನಾಟಕ ಶಾಲೆ(ಎನ್.ಎಸ್.ಡಿ.) ಬೆಂಗಳೂರು, ರಂಗಾಯಣ, ಅಭಿನಯ ತರಂಗ ಮುಂತಾದ ಹಲವು ರಂಗ ಶಾಲೆ ಮತ್ತು ಸಂಸ್ಥೆಗಳಿಗೆ ರಂಗಭೂಮಿ ಚರಿತ್ರೆ, ಸಂಸ್ಕೃತ ನಾಟಕಗಳು ಹಾಗೂ ಹಲವು ವಿಷಯಗಳ ಕುರಿತು ತರಗತಿಗಳನ್ನು ತೆಗೆದುಕೊಂಡು ಅನೇಕ ವಿದ್ಯಾರ್ಥಿಗಳ ಪ್ರೀತಿಪಾತ್ರದ ಮೇಷ್ಟ್ರಾಗಿದ್ದರು. ಹಲವು ಅನುವಾದ ಕಾರ್ಯಗಳನ್ನು ಮನೆಯಲ್ಲಿ ಕುಳಿತು ಮಾಡುತ್ತಿದ್ದರು.... ಸುಮ್ಮನೆ ಕಾಲವನ್ನು ವ್ಯಯ ಮಾಡುವುದನ್ನು ಇಷ್ಟಪಡದ ವೇಣೂ, ಏನಾದರೂ ಧನಾತ್ಮಕ, ಸಕ್ರಿಯ ಚಟುವಟಿಕೆಗಳಲ್ಲಿ ಸದಾಕಾಲ ತೊಡಗಿಸಿಕೊಳ್ಳುತ್ತಿದ್ದರು.

ತಮ್ಮ ಸ್ವಂತ ಮನೆಯ ನೆಲ ಮಾಳಿಗೆಯಲ್ಲಿ 'ಉನ್ನತಿ' ಹೆಸರಿನ ಸಂಸ್ಥೆಯ ಅಡಿಯಲ್ಲಿ ವಿದೇಶಿ, ದೇಶಿ ಭಾಷೆಗಳ ಕಲಾತ್ಮಕ, ಸೃಜನಾತ್ಮಕ ಚಲನಚಿತ್ರ ಪ್ರದರ್ಶನಗಳನ್ನು ಪ್ರತಿ ಶನಿವಾರ ಮತ್ತು ಭಾನುವಾರ ಆಯೋಜಿಸುತ್ತಿದ್ದರು. ಅದೇ ರೀತಿ, ಸುಚಿತ್ರಾ ಮತ್ತು ಕೆ.ವಿ. ಸುಬ್ಬಣ್ಣ ಆಪ್ತರಂಗ ಮಂದಿರದ ವಿಶೇಷ ಚಿತ್ರೋತ್ಸವಗಳಲ್ಲಿ, ತಮ್ಮ 'ಉನ್ನತಿ ಸಂಸ್ಥೆ'ಯನ್ನು ಸೇರಿಸಿ ಚಟುವಟಿಕೆಗಳನ್ನು ಮಾಡಿರುತ್ತಾರೆ.

ಇಂತಹ ಸದಾಕಾಲ ಸಕ್ರಿಯವಾಗಿದ್ದ ವೇಣೂ ಸಡನ್ ಆಗಿ ನಮ್ಮನ್ನು ಅಗಲಿರುವುದು ನಿಜಕ್ಕೂ ಆಘಾತಕಾರಿಯೇ..... ಎಂಟು–ಹತ್ತು ದಿನಗಳ ಹಿಂದೆ, ಕೆ.ವಿ. ಸುಬ್ಬಣ್ಣ. ಆಪ್ತ ರಂಗಮಂದಿರದಲ್ಲಿ ಕಟ್ಟೀಮನಿ ಅವರ ನಿರ್ದೇಶನದಲ್ಲಿ ಪ್ರದರ್ಶಿತ ರಂಗಶಿಬಿರದ ಪ್ರಯೋಗದಲ್ಲಿ ಒಟ್ಟಿಗೆ ಕೂತು ಪ್ರದರ್ಶನ ನೋಡಿದ್ದೇ ಕಡೆಯ ಭೇಟಿಯಾಯಿತು....

ಇಂದು ಹೇಳಿ ಮಾಡಿಸಿದ ಹಾಗೆ, ನಾವು ವೇಣುವಿನ ಎಲ್ಲ ಆಪ್ತ ಗೆಳೆಯರು ಗೌರಿಬಿದನೂರಿಗೆ, ವಿದುರಾಶ್ವತ್ಥಕ್ಕೆ ಹೋಗಿದ್ದೆವು. ವೇಣು ಅಗಲಿದ ಸಮಯಕ್ಕೆ ಸರಿಯಾಗಿ, ಹೆಚ್.ಎನ್. ಸಮಾಧಿಯಲ್ಲಿ ನಿಂತು ಅವರ ಗೌರವಾರ್ಥ ಒಂದು ನಿಮಿಷದ ಮೌನಾಚರಣೆಯಲ್ಲಿದ್ದೆವು.... ಇಲ್ಲಿ ಬೆಂಗಳೂರಿನಲ್ಲಿ, ವೇಣು ನಮ್ಮನ್ನೆಲ್ಲ ಅಗಲಿ, ಅವನ ಪ್ರೀತಿಯ ಹೆಚ್. ಎನ್. ಜೊತೆ ಇರಲು ನಡೆದು ಬಿಟ್ಟಿದ್ದಾನೆ.... ಎಂತಹ ವಿಪರ್ಯಾಸ.... ಹೋಗಿ ಬಾ ಗೆಳೆಯ.... ಪ್ರೀತಿಯ, ಆತ್ಮೀಯ ವಿದಾಯ ನಿನಗೆ....

–ಗುಂಡಣ್ಣ ಚಿಕ್ಕಮಗಳೂರು

ಚಿಂತಕ, ಬರಹಗಾರ, ಹೆಚ್.ವಿ. ವೇಣುಗೋಪಾಲ್ ಅವರ ಅಕಾಲಿಕ ನಿಧನಕ್ಕೆ ಸಮುದಾಯ, ಜನಶಕ್ತಿ ಪತ್ರಿಕೆ–ಬಳಗ, ಸೌಹಾರ್ದ ಕರ್ನಾಟಕ ಅವರ ಕೊಡುಗೆಗಳನ್ನು ಸ್ಮರಿಸಿ ಕಂಬನಿ ಮಿಡಿದು ಭಾವಪೂರ್ಣ ಶ್ರದ್ಧಾಂಜಲಿ ಸಲ್ಲಿಸಿವೆ.

ಕಾರ್ಪೊರೇಟ್ –ಹಿಂದುತ್ವದ ಆಳ್ವಿಕೆ ಯಿಂದ ಸಂವಿಧಾನ ಬುಡಮೇಲು... ಪುಟ 7 ರಿಂದ

ಕಾಲದಲ್ಲಿ ಘೋಷಿತ ತುರ್ತು ಪರಿಸ್ಥಿತಿ ಇತ್ತು ಆದರೆ ಈಗ ಅದಕ್ಕಿಂತಲೂ ಹೆಚ್ಚು ಕರಾಳವಾದ ಅಘೋಷಿತ ತುರ್ತುಪರಿಸ್ಥಿತಿ ಜಾರಿಯಲ್ಲಿದೆ ಎಂದು ತಮ್ಮ ತಮ್ಮ ಅನುಭವಗಳನ್ನು ಹಂಚಿಕೊಂಡರು.

ರಾಷ್ಟ್ರೀಯ ಬಿಕ್ಕಟ್ಟಿನ ಮೂಲ ಕೃಷಿ ಬಿಕ್ಕಟ್ಟಿನಲ್ಲಿದೆ –ಡಾ. ಅಶೋಕ್ ಧವಳೆ

ಕೃಷಿ ಬಿಕ್ಕಟ್ಟು ಮತ್ತು ಮುಂದಿನ ದಾರಿ ಎಂಬ ವಿಷಯದ ಕುರಿತು ಮಾತಾನಾಡಿದ ಅಖಿಲ ಭಾರತ ಕಿಸಾನ್ ಸಭಾ (ಂಖಿಏಖ) ರಾಷ್ಟ್ರೀಯ ಅಧ್ಯಕ್ಷ ಡಾ.ಅಶೋಕ್ ಧವಳೆ ರವರು ರಾಷ್ಟ್ರೀಯ ಬಿಕ್ಕಟ್ಟಿನ ಮೂಲ ಕೃಷಿ ಬಿಕ್ಕಟಿನಲ್ಲಿದೆ. ನವ ಉದಾರೀಕರಣ ಧೋರಣೆಗಳು ಜಾರಿಗೆ ಬಂದ ಮೇಲೆ ದೇಶದಲ್ಲಿ ಸುಮಾರು 4.5 ಲಕ್ಷ ರೈತರು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಹಾಗೂ ಅದಿವಾಸಿಗಳು ವಾಸ ಮಾಡುತ್ತಿರುವ ಪ್ರದೇಶದಲ್ಲಿ ಲಕ್ಷಾಂತರ ಮಕ್ಕಳು ಹಸಿವಿನಿಂದ, ಅಪೌಷ್ಟಿಕತೆ ಯಿಂದ ಸಾವಿಗೀಡಾಗುತ್ತಿದ್ದಾರೆ. ರೈತರ ಆತ್ಮಹತ್ಯೆಗಳು ಸಮಾಜದ ಗಮನಕ್ಕೆ ಬಂದಿದೆ ಆದರೆ ಆದಿವಾಸಿಗಳ ಹಸಿವು ಸಮಾಜದ ಗಮನಕ್ಕೆ ಅಷ್ಟಾಗಿ ಬಂದಿಲ್ಲ ಎಂದು ವಿಷಾಧಿಸಿದರು.

ಮುಂದುವರೆದು 1947 ರಿಂದ 1990 ಪ್ರಭುತ್ವ ಪ್ರಾಯೋಜಿತ ಬಂಡವಾಳಶಾಹಿ ಅಭಿವೃದ್ಧಿ ಹಂತವಾಗಿದ್ದು ನಂತರ 1991 ರಿಂದ ಈಗಲೂ ಮುಂದುವರೆಯುತ್ತಿರುವುದು ಬಂಡವಾಳಶಾಹಿ ಬೆಳವಣಿಗೆಯ ನವ ಉದಾರವಾದಿ ಹಂತ ಎಂದು ವಿಶ್ಲೇಷಿಸಿ 2014 ರಲ್ಲಿ ಅಧಿಕಾರಕ್ಕೆ ಬಂದ ನರೇಂದ್ರ ಮೋದಿ ಸರ್ಕಾರ ಸ್ವಾತಂತ್ರ್ಯ ಚಳವಳಿ ಸಂದರ್ಭದ ಉಳುವವನೇ ಭೂ ಒಡೆಯ ಎಂಬ ಘೋಷಣೆಯನ್ನು ಕಾರ್ಪೊರೇಟ್ ಕಂಪನಿಗಳೇ ಭೂ ಒಡೆಯರು ಎಂದು ಬದಲಾಯಿಸಿದೆ. ಸ್ವಾತಂತ್ರ್ಯ ನಂತರದಿಂದ ದೇಶದ ಕೃಷಿ ನೀತಿಗಳ ಪ್ರಧಾನ ಫಲಾನುಭವಿಗಳು ಭೂ ಮಾಲೀಕರು, ಗ್ರಾಮೀಣ ಶ್ರೀಮಂತರೇ ಆಗಿದ್ದಾಗ್ಯೂ ಮಧ್ಯಮ, ಸಣ್ಣ ರೈತರು, ಕೃಷಿ ಕೂಲಿಕಾರರು ಮತ್ತಿತರರು ಕೂಡ ಕೆಲವೊಂದು ಪ್ರಯೋಜನ ಗಳನ್ನು ಪಡೆದು ತಮ್ಮ ಜೀವನ ಸ್ಥಿತಿಯನ್ನು ಉತ್ತಮಪಡಿಸಿಕೊಂಡಿದ್ದರು. ಕೃಷಿ, ಗ್ರಾಮೀಣಾಭಿವೃದ್ಧಿಯಲ್ಲಿ ಸಾರ್ವಜನಿಕ ಹೂಡಿಕೆ, ನೀರಾವರಿ–ವಿದ್ಯುತ್ ವಿಸ್ತರಣೆ, ಕನಿಷ್ಟ ಬೆಂಬಲ ಬೆಲೆ ವ್ಯವಸ್ಥೆ, ಸಾರ್ವಜನಿಕ ಪಡಿತರ ವ್ಯವಸ್ಥೆ ಮುಂತಾದ ಈ ಎಲ್ಲಾ ಸಕಾರಾತ್ಮಕ ಕ್ರಮಗಳನ್ನು ನಾಶಪಡಿಸಿ ಭಾರತ ದೇಶವನ್ನು ಸಾಮೂಹಿಕ ವಲಸೆ, ಹಸಿವು, ನಿರುದ್ಯೋಗ–ಬಡತನ ದ ಸಾಮ್ರಾಜ್ಯವನ್ನಾಗಿ ರೂಪಾಂತರಿಸಲಾಗುತ್ತಿದೆ ಎಂದರು.

ಭೂ ಹೀನ ಕೃಷಿ ಕೂಲಿಕಾರರು ಮತ್ತು ಬಡ ರೈತರಿಗೆ ಭೂಮಿ ಹಂಚುವ ಕ್ರಾಂತಿಕಾರಿ ಭೂ ಸುಧಾರಣೆ, ಕೃಷಿ ಹಾಗೂ ಗ್ರಾಮೀಣಾಭಿವೃದ್ಧಿ ಯಲ್ಲಿ ಸಾರ್ವಜನಿಕ ಹೂಡಿಕೆ ಹೆಚ್ಚಳ, ವೈಜ್ಞಾನಿಕ ಬೆಂಬಲ ಬೆಲೆಯಲ್ಲಿ ಖಾತರಿ ಖರೀದಿ, ಸಾರ್ವಜನಿಕ ಆರೋಗ್ಯ–ಶಿಕ್ಷಣದ ಖಾತರಿ, ಸಹಕಾರಿ ವಲಯಗಳ ಬಲವರ್ಧನೆ ಮುಂತಾದವುಗಳು ಕೃಷಿ ಬಿಕ್ಕಟ್ಟಿನಿಂದ ದೇಶವನ್ನು ಪಾರು ಮಾಡುವ ದಾರಿಗಳಾಗಿದ್ದು ಪರ್ಯಾಯ ಕೃಷಿ ಧೋರಣೆಗಳಿಗಾಗಿ ರೈತ ಚಳವಳಿಗಳನ್ನು ಬಲಪಡಿಸುವಂತೆ ಕರೆ ನೀಡಿದರು.

ಜನ ಸಂಸ್ಕೃತಿ ನಾಶವೇ ಕೋಮುವಾದಿಗಳ ಮುನ್ನಡೆಗೆ ಕಾರಣ–ದತ್ತಾ ದೇಸಾಯಿ

ಜನ ಸಂಸ್ಕೃತಿಯ ಮೇಲೆ ಕೋಮುವಾದದ ಧಾಳಿ, ಪರಿಣಾಮ ಎಂಬ ವಿಷಯದ ಮೇಲೆ ಮಾತಾನಾಡಿದ ಪುಣೆಯ ಆಕಾಡೆಮಿ ಆಪ್ ಪೊಲಿಟಿಕಲ್ ಅಂಡ್ ಸೊಷಿಯಲ್ ಮುಖ್ಯಸ್ಥ ದತ್ತಾ ದೇಸಾಯಿರವರು

ಸ್ವಾತಂತ್ರ್ಯ ಪೂರ್ವದಿಂದಲೂ ಕೋಮುವಾದಿ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ರುವ ಸಂಘ ಪರಿವಾರಕ್ಕೆ ಜಾಗತೀಕರಣ ಕಾಲಘಟ್ಟದ ತನಕ ಜನ ಸಮೂಹದ ಸಾಮೂಹಿಕ ಪ್ರಜ್ಞೆ ಯಲ್ಲಿ ಸ್ಥಾನ ಗಳಿಸಲು ಆಗಿರಲಿಲ್ಲ. ಜನ ಸಂಸ್ಕೃತಿಯು ಹಿನ್ನಲೆ ಗೆ ಸರಿಯುತ್ತಿದ್ದಂತೆ ಕೋಮುವಾದಿ ಶಕ್ತಿಗಳು ಮುನ್ನಡೆ ಸಾಧಿಸುತ್ತಾ ಬಂದಿವೆ. ಸಮಾಜದಲ್ಲಿರುವ ಬಹುತ್ವ ಮತ್ತು ಸೌಹಾರ್ದ ಪರಂಪರೆಯನ್ನು ರಕ್ಷಿಸಿಕೊಳ್ಳುವ ಮೂಲಕ ಸಾಮರಸ್ಯದ ಹಂದರ ಹರಿಯದಂತೆ ನೋಡಿಕೊಳ್ಳಬೇಕು. ಸ್ವಾತಂತ್ರ್ಯ ಹೋರಾಟದ ಸಂದರ್ಭದಲ್ಲಿ ಮಹಾತ್ಮ ಗಾಂಧಿ ರವರು ತಮ್ಮ ಶಾಂತಿಯುತ ಸಮರಶೀಲ ಚಟುವಟಿಕೆಗಳ ಮೂಲಕ ಬ್ರಿಟಿಷರ ವಿರುದ್ಧ ವಿಶಾಲವಾದ ಪ್ರತಿರೋಧವನ್ನು ಪೋಷಿಸಿದಂತೆ ಫ್ಯಾಸಿಸ್ಟ್ ಕಾರ್ಯತಂತ್ರವನ್ನು ಎದುರಿಸಬೇಕು ಎಂದರು.

ರಾಷ್ಟ್ರೀಯ ನಾಟಕ ಶಾಲೆ ಬೆಂಗಳೂರು ಕೇಂದ್ರದ ಮಾಜಿ ನಿರ್ದೇಶಕ ರಾದ ಸಿ. ಬಸವಲಿಂಗಯ್ಯ ರವರು ರಾಮಾಯಣ, ಮಹಾಭಾರತ ದಂತಹ ಪುರಾಣಗಳ ಪಾತ್ರಗಳನ್ನು ಮತ್ತು ಚರಿತ್ರೆಯ ವೈಜ್ಞಾನಿಕ ನಿರೂಪಣೆಗಳನ್ನು ವ್ಯವಸ್ಥಿತವಾಗಿ ತಿರುಚಲಾಗುತ್ತಿದೆ. ಇಂತಹ ನಿರೂಪಣೆಗಳೇ ಶಾಲಾ ಮಕ್ಕಳ ಪಠ್ಯ ಪುಸ್ತಕಗಳಲ್ಲಿ ಸ್ಥಾನ ಪಡೆದಿವೆ. ತಾರತಮ್ಯದ ಅನಾಗರಿಕತೆಯಿಂದ ಕೂಡಿರುವ ಜಾತಿ ಪದ್ಧತಿಯನ್ನು, ವರ್ಣಾಶ್ರಮ ಪದ್ಧತಿಯನ್ನು ಶೂದ್ರರೇ ಸಮರ್ಥಿಸಿ ಮಾತಾನಾಡುವಂತಹ ವಾತಾವರಣವನ್ನು ಸಂಘ ಪರಿವಾರ ನಿರ್ಮಿಸಿದೆ. ಸಂವಿಧಾನದ ಬೆಳಕಿನಲ್ಲಿ ಮನುವಾದವನ್ನು ಎದುರಿಸಬೇಕು ಎಂದು ಅಭಿಪ್ರಾಯ ಪಟ್ಟರು.

ಕಾರ್ಪೊರೇಟ್ ಹಿತಕ್ಕೆ ಹಾಗೂ ಕೋಮುವಾದಿ ರಾಜಕೀಯ ಮುನ್ನಡೆಗೆ ಮೆಟ್ಟಿಲಾದ ಅಸ್ತಿತ್ವವಾದಿ ರಾಜಕೀಯ–ಎಸ್ ಆರ್ ದಾರಾಪುರಿ.

ಫ್ರಾನ್ಸಿನಲ್ಲೂ ಎಡ ಮುನ್ನಡೆ, ಅಧ್ಯಕ್ಷ ಮ್ಯಾಕ್ರಾನ್ ಕೂಟಕ್ಕೆ ಬಹುಮತ ನಷ್ಟ



ಕೊಲಂಬಿಯಾದ ಚುನಾವಣೆಯ ದಿನವೇ (ಜೂನ್ 19) ನಡೆದ ಫ್ರಾನ್ಸಿನ ಪಾರ್ಲಿಮೆಂಟರಿ ಚುನಾವಣೆಯಲ್ಲೂ ಗಮನಾರ್ಹ ಎಡ ಮುನ್ನಡೆ ಕಂಡು ಬಂದಿದೆ. ಅಧ್ಯಕ್ಷೀಯ ಚುನಾವಣೆಯಲ್ಲಿ ಇತ್ತೀಚೆಗಷ್ಟೇ ಗೆದ್ದಿದ್ದ ಮತ್ತು ಹಿಂದಿನ (2017ರಲ್ಲಿ ಚುನಾಯಿತವಾದ) ಪಾರ್ಲಿಮೆಂಟಿನಲ್ಲಿ ಭಾರೀ ಬಹುಮತ ಹೊಂದಿದ್ದ ಮಾಕ್ರಾನ್ ಅವರ ಪಕ್ಷ ಮತ್ತು ಕೂಟ ಬಹುಮತ ಕಳೆದುಕೊಂಡಿದೆ. ಎಡ-ಪರಿಸರವಾದಿ ಕೂಟ ಎರಡನೆಯ ಅತಿ ದೊಡ್ಡ ಕೂಟವಾಗಿ ಹೊಮ್ಮಿದೆ. ಹಿಂದೆ ಹಲವು ಬಾರಿ ಆಳುವ ಪಕ್ಷವಾಗಿದ್ದ ರಿಪಬ್ಲಿಕನ್ ಒಳಗೊಂಡ ಬಲಪಂಥೀಯ ಕೂಟ ಅರ್ಧದಷ್ಟು ಸೀಟುಗಳನ್ನು ಕಳೆದುಕೊಂಡು ಇನ್ನಷ್ಟು ದುರ್ಬಲವಾಗಿದೆ. ಉಗ್ರ ಬಲಪಂಥೀಯ ಕೂಟ ರಿಪಬ್ಲಿಕನ್ ಬಲಪಂಥೀಯ ಕೂಟವನ್ನು ಹಿಂದೆ ಹಾಕಿ ಹಿಂದಿಗಿಂತ 10 ಪಟ್ಟು ಹೆಚ್ಚು ಸೀಟು ಪಡೆದು ಮೂರನೆಯ ಸ್ಥಾನ ಪಡೆದಿದೆ. ಇದು ಅಧ್ಯಕ್ಷ ಮ್ಯಾಕ್ರಾನ್ ಅವರ 'ಕೆನ್ನೆಗೆ ತಪರಾಕಿ' ಎಂದು ಮಾಧ್ಯಮಗಳು ಬಣ್ಣಿಸಿವೆ.

ಜಗದ ಸುತ್ತ

ವಸಂತರಾಜ ಎನ್.ಕೆ.

ನಡು-ಎಡ, ನಡು-ಬಲಪಂಥೀಯರು ಸೇರಿದಂತೆ ನಡುಪಂಥೀಯ ಪಕ್ಷಗಳು ಕೂಟಗಳು ದುರ್ಬಲವಾಗಿ ಅಧಿಕಾರ ಕಳೆದುಕೊಳ್ಳುತ್ತಿವುದು, ಎಡ ಮತ್ತು ಉಗ್ರ ಬಲಪಂಥೀಯ ಪಕ್ಷಗಳು ಕೂಟಗಳು ಪ್ರಬಲಗೊಳ್ಳುತ್ತಿರುವುದು ಹೆಚ್ಚಿನ ಬಂಡವಾಳಶಾಹಿ ದೇಶಗಳಲ್ಲಿ ಕಂಡು ಬಂದಿರುವ ಟ್ರೆಂಡ್. ಆದರೆ ಎಡ ಕೂಟ ಎರಡನೆಯ ಸ್ಥಾನ ಪಡೆದಿರುವುದು ಫ್ರಾನ್ಸಿನ ವಿಶೇಷತೆ. ಮೊದಲ ಸುತ್ತಿನಲ್ಲಿ ಮ್ಯಾಕ್ರಾನ್ ಅವರ ನಡುಪಂಥೀಯ ಎನ್ಸೆಂಬಲ್ ಮತ್ತು ಎಡ-ಪರಿಸರವಾದಿ ಕೂಟ ಹೆಚ್ಚು ಕಡಿಮೆ ಒಂದೇ ಮತಗಳಿಕೆ (ಶೇ. 25.7) ಹೊಂದಿದ್ದವು ಎಂಬುದು ಇನ್ನೊಂದು ವಿಶೇಷತೆ.

ಕಳೆದ ಚುನಾವಣೆಯಲ್ಲಿ 577 ಸೀಟುಗಳ ಪಾರ್ಲಿಮೆಂಟಿನಲ್ಲಿ 346 ಸೀಟುಗಳನ್ನು ಗೆದ್ದಿದ್ದ ಮ್ಯಾಕ್ರಾನ್ ಅವರ ನಡುಪಂಥೀಯ ಎನ್ಸೆಂಬಲ್ ಕೂಟ, ಈ ಬಾರಿ 245 ಸೀಟುಗಳಿಗೆ ಕುಸಿದಿದೆ. ಅದಕ್ಕೆ ಬಹುಮತಕ್ಕೆ 44 ಸೀಟುಗಳ ಕೊರತೆಯಿದೆ. ಅದು ಶೇ.10 ಮತಗಳನ್ನು ಕಳೆದುಕೊಂಡಿದ್ದು, ಅದರ (ಎರಡನೆಯ ಸುತ್ತಿನ) ಮತಗಳಿಕೆ ಶೇ.38.6 ಕ್ಕೆ ಕುಸಿದಿದೆ. ಎಡ-ಪರಿಸರವಾದಿ ಕೂಟ ಹಿಂದಿನ 66 ಸೀಟುಗಳನ್ನು ಇಮ್ಮಡಿಗೊಳಿಸಿಕೊಂಡು 131 ಸೀಟು ಗಳಿಸಿದೆ. ಅದರ (ಎರಡನೆಯ ಸುತ್ತಿನ) ಶೇ.31.6 ಮತಗಳಿಕೆ ಹಿಂದಿನ ಮತಗಳಿಕೆಯ ಸುಮಾರು ಮೂರು ಪಟ್ಟಾಗಿದೆ. ಕಳೆದ ಚುನಾವಣೆಯಲ್ಲಿ ಕೇವಲ 8 ಸೀಟು ಹೊಂದಿದ್ದ ಉಗ್ರ ಬಲಪಂಥೀಯ ನ್ಯಾಶನಲ್ಮ ರಾಲಿ 89 ಸೀಟು ಪಡೆದಿದೆ. ಮತಗಳಿಕೆಯನ್ನೂ ಇಮ್ಮಡಿಗೊಳಿಸಿಕೊಂಡು ಶೇ.17.3 ಮತಪ್ರಮಾಣ ಗಳಿಸಿದೆ. ರಿಪಬ್ಲಿಕನ್ ಬಲಪಂಥೀಯ ಕೂಟ ಅರ್ಧದಷ್ಟು ಸೀಟುಗಳನ್ನು ಮತ್ತು ಮೂರನೆಯ ಎರಡು ಭಾಗ ಮತ ಕಳೆದುಕೊಂಡು ಕೇವಲ 64 ಸೀಟುಗಳನ್ನು ಹಾಗೂ ಶೇ.7.3 ಮತ ಪ್ರಮಾಣವನ್ನು ಗಳಿಸಿದೆ.

ಎಡ-ಪರಿಸರವಾದಿ ಕೂಟದಲ್ಲಿ (ನೂತನ ಪರಿಸರ ಮತ್ತು ಸಾಮಾಜಿಕ ಜನತಾ ಕೂಟ New Ecologic and Social Peoples Union - NUPES) ಫ್ರೆಂಚ್ ಕಮ್ಯುನಿಸ್ಟ್, ಸೋಶಲಿಸ್ಟ್, ಗ್ರೀನ್ ಪಕ್ಷಗಳಲ್ಲದೆ ಈ ಕೂಟದ ಅಧ್ಯಕ್ಷೀಯ ಅಭ್ಯರ್ಥಿಯಾಗಿದ್ದ ಮೆಲೆಂಕೊನ್ ಅವರ 'ಬಗ್ಗದ ಫ್ರಾನ್ಸ್" ಪಕ್ಷ ಹಾಗೂ ಇತರ ಪರಿಸರವಾದಿ ಮತ್ತು ಎಡ ಪಕ್ಷಗಳು ಇವೆ. ಈ ಕೂಟ ಈಗಿನ ಫ್ರಾನ್ಸ್‌ನ ಸಮಸ್ಯೆಗಳಿಗೆ ಕಾರಣವಾದ ನವ-ಉದಾರವಾದಿ ನೀತಿಗಳಿಗೆ ಉತ್ತಮ ಪರ್ಯಾಯ ಒದಗಿಸುವ ನೀತಿಗಳ ಸಮಗ್ರ ಕಾರ್ಯಕ್ರಮವನ್ನು ಜನತೆಯ ಮುಂದಿಟ್ಟಿತ್ತು. ಚುನಾವಣಾ-ಪೂರ್ವ ಸಮೀಕ್ಷೆಗಳ ಪ್ರಕಾರ ಬಹುಮತ ಪಡೆಯಬಹುದು ಅಥವಾ ಅದರ ಹತ್ತಿರ ಬರಬಹುದು ಎಂಬ ನಿರೀಕ್ಷೆ ಹುಟ್ಟಿಸುವಷ್ಟು ಈ ಕೂಟ ಬಿರುಸಿನ ಪ್ರಚಾರ ನಡೆಸಿತ್ತು. ಎಡ-ಪರಿಸರವಾದಿ ಕೂಟವನ್ನು ಸೋಲಿಸುವಂತೆ ಎರಡನೆಯ ಸುತ್ತಿನ ಮತಗಳ ಯೋಜನೆಯಲ್ಲಿ ಇತರ ಮೂರೂ ಕೂಟಗಳು ತಂತ್ರ ಹೂಡಿದ್ದರಿಂದ ಬಹುಮತ ಪಡೆಯಲಾಗಿಲ್ಲವೆಂದು ವಿಶ್ಲೇಷಕರು ಹೇಳಿದ್ದಾರೆ.

ಫ್ರಾನ್ಸ್ ಪಾರ್ಲಿಮೆಂಟರಿ ಚುನಾವಣೆಯಲ್ಲಿ ಸಹ ಎರಡು ಸುತ್ತಿನ ಮತದಾನ ಪದ್ಧತಿಯನ್ನು ಅನುಸರಿಸುತ್ತದೆ. ಮೊದಲ ಸುತ್ತಿನಲ್ಲಿ ಎಲ್ಲ ಪಕ್ಷಗಳ ಅಭ್ಯರ್ಥಿಗಳಿಗೆ ಅವಕಾಶವಿರುತ್ತದೆ. ಅತ್ಯಂತ ಹೆಚ್ಚು ಮತ ಮತ್ತು ಕನಿಷ್ಠ ಶೇ. 25 ಮತ ಗಳಿಸಿದ ಅಭ್ಯರ್ಥಿಯನ್ನು ಮೊದಲ ಸುತ್ತಿನಲ್ಲಿ ಚುನಾಯಿತರಾದರೆಂದು ಘೋಷಿಸಲಾಗುತ್ತದೆ. ಈ ನಾಲ್ಕು ಕೂಟಗಳ ನಡುವೆ ತೀವ್ರ ಪ್ರತಿಸ್ಪರ್ಧೆ ಇದ್ದಿದ್ದರಿಂದ 577 ಸೀಟುಗಳಲ್ಲಿ ಕೇವಲ 5 ಸೀಟುಗಳಲ್ಲಿ ಮಾತ್ರ ಮೊದಲ ಸುತ್ತಿನಲ್ಲಿ ಚುನಾಯಿತರಾದರು. ಇದರಲ್ಲಿ 4 ಎಡ-ಪರಿಸರ ಕೂಟದ ಅಭ್ಯರ್ಥಿಗಳು ಎಂಬುದು ಗಮನಾರ್ಹ. ಮೊದಲ ಸುತ್ತಿನಲ್ಲಿ ಚುನಾಯಿತರಾಗುವ ಮತಗಳಿಕೆಯ ಯಾವ ಅಭ್ಯರ್ಥಿಯೂ ಇಲ್ಲದಿದ್ದರೆ, ಅತ್ಯಂತ ಹೆಚ್ಚು ಮತ ಪಡೆದ ಎರಡು ಅಭ್ಯರ್ಥಿಗಳು ಮತ್ತು ಶೇ.12.5ಕ್ಕಿಂತ ಹೆಚ್ಚು ಮತ ಪಡೆದ ಅಭ್ಯರ್ಥಿಗಳು ಎರಡನೆಯ ಸುತ್ತಿಗೆ ಹೋಗುತ್ತಾರೆ. ಎರಡನೆಯ ಸುತ್ತಿನಲ್ಲಿ ಅತ್ಯಂತ ಹೆಚ್ಚು ಮತ ಪಡೆದ ಅಭ್ಯರ್ಥಿ ಚುನಾಯಿತರೆಂದು ಘೋಷಿತರಾಗುತ್ತಾರೆ.

ಹಾಗಾಗಿಯೇ ಪಕ್ಷ/ಕೂಟಗಳ ಮೊದಲ ಮತ್ತು ಎರಡನೆಯ ಸುತ್ತಿನ ಮತಗಳಿಕೆ ಪ್ರಮಾಣದಲ್ಲಿ ವ್ಯತ್ಯಾಸವಿರುತ್ತದೆ. ಎನ್ಸೆಂಬಲ್ ಮತ್ತು ಎಡ=ಪರಿಸರವಾದಿ ಕೂಟಗಳು ಎರಡನೆಯ ಸುತ್ತಿನಲ್ಲಿ ಮೊದಲನೆಯ ಸುತ್ತಿಗಿಂತ ಗಮನಾರ್ಹವಾಗಿ ಹೆಚ್ಚಿನ ಮತ ಪ್ರಮಾಣವನ್ನು ಗಳಿಸಿವೆ, ಏಕೆಂದರೆ ಇವೆರಡು ಕೂಟಗಳು ಹೆಚ್ಚಿನ ಕ್ಷೇತ್ರಗಳಲ್ಲಿ ಮೊದಲ ಎರಡು ಸ್ಥಾನ ಗಳಿಸಿ ಎರಡನೆಯ ಸುತ್ತಿಗೆ ಹೋಗಿದ್ದವು. ಎರಡನೆಯ ಸುತ್ತಿನಲ್ಲಿ ಉಳಿದ ಎರಡು ಕೂಟಗಳ ಮತಪ್ರಮಾಣ ಕಡಿಮೆಯಾಯಿತು.

ಆದರೂ ಎಡ-ಪರಿಸರವಾದಿ ಕೂಟದ (NUPES) ಚುನಾವಣಾ ಸಾಧನೆ ಗಮನಾರ್ಹವಾಗಿತ್ತು. 1997ರ ವಿಶಾಲ ಎಡ ಕೂಟದ ನಂತರ ಇದೇ ಎಡ ಕೂಟದ ಅತ್ಯಂತ ಗಮನಾರ್ಹ ಚುನಾವಣಾ ಸಾಧನೆಯೆಂದು ಹೇಳಬಹುದು. ಅದು ಪ್ರಬಲ ವಿರೋಧ ಪಕ್ಷದ ಕೂಟವಾಗಿ ಕೆಲಸ ಮಾಡಲಿದೆ. ದುಡಿಯುವ ಜನರ ವಿರೋಧಿ ನೀತಿಗಳಿಗೆ ಪಾರ್ಲಿಮೆಂಟಿನಲ್ಲೂ ಬೀದಿಗಳಲ್ಲೂ ಪ್ರತಿರೋಧ ಒಡ್ಡಲಿದೆ. ಉಗ್ರ ಬಲಪಂಥೀಯ ಕೂಟಕ್ಕೆ ಬಂದ ಮತಗಳು ಸಹ ನವ-ಉದಾರವಾದಿ ನೀತಿ-ವಿರೋಧಿ ಮತಗಳೇ. ಆದರೇ ಎಡ ಕೂಟ ಪರ್ಯಾಯ ನೀತಿಗಳನ್ನು ಸೂಚಿಸುವುದಲ್ಲದೆ ಸತತ ಹೋರಾಟ ರೂಪಿಸುವುದರಿಂದ ಉಗ್ರ ಬಲಪಂಥದ ಜನ ಬೆಂಬಲಕ್ಕೆ ಮತ್ತು ಖಂಡಿತ ಅದರ ವಿಸ್ತರಣೆಗೆ ಕಡಿವಾಣವಿರಲಿದೆ. ಇದೊಂದು ಸಕಾರಾತ್ಮಕ ಬದಲಾವಣೆ.

ಚುನಾವಣಾ ಫಲಿತಾಂಶಗಳು ಅಧ್ಯಕ್ಷ ಮ್ಯಾಕ್ರಾನ್ ಅವರ ಯೋಜನೆಗಳನ್ನು ತಲೆಕೆಳಗು ಮಾಡಿದ್ದು ಅವರ ನವ-ಉದಾರವಾದಿ ನೀತಿಗಳನ್ನು ಜಾರಿ ಮಾಡುವುದು ಕಷ್ಟವಾಗಲಿದೆ. ತಮ್ಮ ಆಯ್ಕೆಯ ಪ್ರಧಾನಿಯನ್ನು ಉಳಿಸಿಕೊಳ್ಳುವುದೂ ಕಷ್ಟವಾಗಲಿದೆ. ಈಗಾಗಲೇ ಈ ಪರಿಸ್ಥಿತಿಯನ್ನು ಗಮನಿಸಿ ಇತ್ತೀಚೆಗಷ್ಟೇ ಅವರು ನೇಮಿಸಿದ್ದ ಪ್ರಧಾನಿ ರಾಜೀನಾಮೆ ಕೊಡುವ ಇಂಗಿತ ವ್ಯಕ್ತಪಡಿಸಿದ್ದಾರೆ. ಫ್ರಾನ್ಸ್ ಇತರ ಯುರೋಪಿಯನ್ ದೇಶಗಳಂತೆ ಅಥವಾ ಇನ್ನೂ ಹೆಚ್ಚಾಗಿ ತೀವ್ರ ಆರ್ಥಿಕ-ಸಾಮಾಜಿಕ ಸಮಸ್ಯೆಗಳನ್ನು ಎದುರಿಸುತ್ತಿದೆ. 1970ರ ದಶಕದ ನಂತರ? ಅತಿ ಹೆಚ್ಚು ತೀವ್ರ ಬೆಲೆಏರಿಕೆ, ಹಣದುಬ್ಬರ, ನಿರುದ್ಯೋಗ, ದುಡಿಯುವ ಜನರ ಆದಾಯ ಮತ್ತು ಸಾಮಾಜಿಕ ಭದ್ರತಾ ಕ್ರಮಗಳಲ್ಲಿ ಕಡಿತಗಳು ಸಾಮಾಜಿಕ ಅತೃಪ್ತಿ ಆಕ್ರೋಶಗಳನ್ನು ಹೆಚ್ಚಿಸಿವೆ. ಉಕ್ರೇನ್ ಯುದ್ಧ ಈ ಸಮಸ್ಯೆಗಳನ್ನು ಇನ್ನಷ್ಟು ಉಲ್ಬಣಗೊಳಿಸಿದೆ. ಉಕ್ರೇನ್ ಯುದ್ಧದ ಸಂದರ್ಭದಲ್ಲಿ ರಶ್ಯದ ಮೇಲೆ ಹೊರಿಸಿದ ಆರ್ಥಿಕ ದಿಗ್ಬಂಧನಗಳಿಂದಾಗಿ ಆಹಾರವಸ್ತುಗಳ, ಇಂಧನಗಳ ಅಭಾವ, ಬೆಲೆಏರಿಕೆ ಇನ್ನಷ್ಟು ದುರ್ಭರವಾಗಿದೆ. ಅದನ್ನು ಧಾರ್ಮಿಕ, ಜನಾಂಗೀಯ ಇತ್ಯಾದಿ ಅಲ್ಪಸಂಖ್ಯಾತರ, ವಲಸೆಗಾರರ ವಿರುದ್ಧ ತಿರುಗಿಸುವ, ಸರಕಾರದ ಮತ್ತು ಬಲಪಂಥೀಯ ಪ್ರಯತ್ನಗಳು ಸಾಮಾಜಿಕ ಕ್ಷೋಭೆಯನ್ನು ಇನ್ನಷ್ಟು ಹೆಚ್ಚಿಸಿವೆ.

ಈ ಹಿನ್ನೆಲೆಯಲ್ಲಿ ಮ್ಯಾಕ್ರಾನ್ ಸರಕಾರದ ಮೇಲೆ ತನ್ನ ಜನ-ವಿರೋಧಿ ನೀತಿಗಳನ್ನು ಬದಲಾಯಿಸಲು ಎಡ-ಪರಿಸರವಾದಿ ಕೂಟ ತೀವ್ರ ಒತ್ತಡ ಹೇರಲಿದೆ. ಮ್ಯಾಕ್ರಾನ್ ಜತೆ ಸರಕಾರ ರಚನೆ ಅಥವಾ ಇತರ ಯಾವುದೇ ರೀತಿಯಲ್ಲಿ ಸಹಕರಿಸುವುದಿಲ್ಲವೆಂದು ಎಡ ಕೂಟ ಮತ್ತು ನ್ಯಾಶನಲ್ ರಾಲಿ ಸಹ ಖಡಾಖಂಡಿತವಾಗಿ ಹೇಳಿವೆ. ರಿಪಬ್ಲಿಕನ್ ನಾಯಕತ್ವದ ಬಲಪಂಥೀಯ ಕೂಟ ಮಾತ್ರ ಕೆಲವು ಷರತ್ತುಗಳ ಮೇಲೆ ಮ್ಯಾಕ್ರಾನ್ ಜತೆಗೆ ಮಾತುಕತೆ ನಡೆಸುತ್ತಿದೆ.



ಸಮಗ್ರ ಪರ್ಯಾಯ ಕಾರ್ಯಕ್ರಮದ ಸುತ್ತ ಎಡ-ಪರಿಸರವಾದಿ ಕೂಟದ ಬಿರುಸಿನ ಪ್ರಚಾರ

ಜಾತಿ ಧರ್ಮ, ಭಾಷೆ, ಪ್ರದೇಶ ಆಧಾರಿತ ವಿವಿಧ ಅಸ್ತಿತ್ವವಾದಿ ರಾಜಕೀಯ ಚಿಂತನೆಗಳು ಹಾಗೂ ಪಕ್ಷಗಳು ಕೇವಲ ಅಧಿಕಾರದಲ್ಲಿ ಪಾಲು ಪಡೆಯುವುದಕ್ಕೆ ಸೀಮಿತವಾಗಿವೆಯೇ ಹೊರತು ಪ್ರಸ್ತುತ ಶೋಷಕ ವರ್ಗಗಳ ರಾಜಕೀಯ ಕ್ಕೆ ಪರ್ಯಾಯ ಪರ್ಯಾಯ ವಾಗಿ ಬಡ ಮುಸ್ಲಿಮರು, ಬಡ ದಲಿತರು, ಬಡ ಹಿಂದುಳಿದವರು, ಶ್ರಮಿಕರು, ಬಡ ರೈತರನ್ನು ರಕ್ಷಿಸುವ ಧೋರಣೆಗಳನ್ನು ಹೊಂದಿಲ್ಲ. ಬಹುಜನ ಸಮಾಜವಾದಿ ಪಕ್ಷದ ಕಾನ್ಸಿರಾಮ್ ರವರು ವ್ಯವಸ್ಥೆ ಬದಲಾಯಿಸುವುದಾಗಿ ಘೋಷಣೆ ನೀಡಿದ್ದರು. ಆದರೆ ಅಧಿಕಾರಕ್ಕೆ ಬಂದ ಮೇಲೆ ಶ್ರೀ ಸಾಮಾನ್ಯರ ಜೀವನ ಸ್ಥಿತಿ ಉತ್ತಮ ಪಡಿಸುವ ಯಾವುದೇ ಕಾರ್ಯಸೂಚಿಯನ್ನು ಜಾರಿ ಮಾಡಲಿಲ್ಲ ಏಕೆಂದರೆ ಆಳುವ ವರ್ಗಗಳ ನವ ಉದಾರೀಕರಣ ಧೋರಣೆಗಳಿಗೆ ಪರ್ಯಾಯ ಧೋರಣೆ ಇರಲಿಲ್ಲ. ಇದೇ ರೀತಿ ಮಹಾರಾಷ್ಟ್ರದ ರಾಮದಾಸ್ ಅಠಾವಳೆ, ಬಿಹಾರದಲ್ಲಿ ರಾಮ್ ವಿಲಾಸ್ ಪಾಸ್ವಾನ್ ರವರು ಅಧಿಕಾರ ಹಂಚಿಕೆಗಾಗಿ ಬಿಜೆಪಿ ಜೊತೆ ಮೈತ್ರಿಯಲ್ಲಿದ್ದಾರೆ. ಜಾತಿ ಆಧಾರಿತ ರಾಜಕೀಯವು ಹಿಂದುತ್ವ ರಾಜಕೀಯವನ್ನು ಪೋಷಿಸುತ್ತಿದೆ. ಅದ್ದರಿಂದ ಉದ್ಯೋಗವನ್ನು ಮೂಲಭೂತ ಹಕ್ಕಾಗಿಸುವ, ಶಿಕ್ಷಣವನ್ನು ಸಾರ್ವತ್ರಿಕರಿಸುವ, ಖಾಸಗೀಕರಣ ಪ್ರಕ್ರಿಯೆ ನಿಲ್ಲಿಸಿ, ಕೃಷಿಯನ್ನು ಲಾಭದಾಯಕಗೊಳಿಸುವ, ಆರೋಗ್ಯ ಸೇವೆಯನ್ನು ಉತ್ತಮಪಡಿಸುವ, ಕಾರ್ಪೊರೇಟ್ ಏಕಸ್ವಾಮ್ಯವನ್ನು ಕೊನೆಗಾಣಿಸಿ ಭೂ ಹೀನರಿಗೆ ಭೂಮಿ ನೀಡುವ ಸಾರ್ವಜನಿಕ ಹಿತದ ರಾಜಕೀಯಕ್ಕೆ ದಲಿತರನ್ನು, ಹಿಂದುಳಿದವರನ್ನು, ಅಲ್ಪಸಂಖ್ಯಾತರನ್ನು ರೈತ-ಕಾರ್ಮಿಕರನ್ನು ಅಣಿ ನೆರಸಬೇಕು ಎಂದು ಅಭಿಪ್ರಾಯ ಪಟ್ಟರು.

ನಂತರ ನಡೆದ ಜನ ಬದುಕಿನ ಸಮಾವೇಶದಲ್ಲಿ, ಸರ್ಕಾರವೇ ಜಾತಿ, ಧರ್ಮಗಳ ಹೆಸರಿನಲ್ಲಿ ಹಿಂಸೆಯನ್ನು ಪ್ರಚೋದಿಸುತ್ತಿದೆ. ಪೌರತ್ವ ಮತ್ತು ರಾಷ್ಟ್ರೀಯತೆಯ ವಿಷಯದಲ್ಲಿ ಸುಳ್ಳು ಮಾಹಿತಿಗಳನ್ನು ಹರಿ ಬಿಡಲಾಗುತ್ತಿದೆ. ಅದ್ದರಿಂದ ಜಾತಿ, ಧರ್ಮ, ಭಾಷೆಯ ಹೆಸರಿನಲ್ಲಿ ಜನರನ್ನು ಒಡೆದು ಆಳುವ ನೀತಿಯ ವಿರುದ್ಧ ರೈತ, ಕಾರ್ಮಿಕರ, ದಲಿತ, ಹಿಂದುಳಿದ ವರ್ಗಗಳ, ಕಲೆ ಮತ್ತು ಸಾಂಸ್ಕೃತಿಕ ಸಂಘಟನೆಗಳು ಹಾಗೂ ಜನಪರ ರಾಜಕೀಯ ಪಕ್ಷಗಳು ಒಗ್ಗೂಡಿ ಹೋರಾಟ ನಡೆಸುವ ಅಗತ್ಯ ಕುರಿತು ನಿರ್ಣಯಿಸಲಾಯಿತು.

ಕೃಷಿ ಸಂಬಂದಿ ಮೂರು ಕಾಯ್ದೆಗಳನ್ನು ಕೇಂದ್ರ ಸರ್ಕಾರ ವಾಪಸ್ಸು ಪಡೆದರೂ ಕರ್ನಾಟಕ ಸರ್ಕಾರ ತನ್ನ ಕೃಷಿ ಕಾಯ್ದೆಗಳನ್ನು ವಾಪಸ್ಸು ಪಡೆದಿಲ್ಲ. ರಾಷ್ಟ್ರೀಯ ಶಿಕ್ಷಣ ನೀತಿ ಹೆಸರಲ್ಲಿ ಶಿಕ್ಷಣವನ್ನು ಕೋಮುವಾದೀಕರಿಸುವ, ವಾಣೀಜ್ಯೀಕರಿಸುವ ಹಾಗೂ ರಾಜ್ಯಗಳ ಹಕ್ಕುಗಳನ್ನು ನಾಶಪಡಿಸುವ ಕೇಂದ್ರ ಸರ್ಕಾರದ ಪ್ರಯತ್ನ ಗಂಡಾಂತರಕಾರಿಯಾಗಿದೆ. ಈ ಬಗ್ಗೆ ರಾಜ್ಯದ ಜನರಲ್ಲಿ ಜಾಗೃತಿ ಮೂಡಿಸಿ, ಸಂಯುಕ್ತ ಹೋರಾಟ ಕಟ್ಟಲು ಶ್ರಮಿಸುವುದಾಗಿ ಈ ಸಮಾವೇಶವು ತೀರ್ಮಾನಿಸಿತು.

ಸಿಟಿಜನ್ ಪಾರ್ ಡೆಮಾಕ್ರಸಿಯ ರಾಷ್ಟ್ರೀಯ ಅಧ್ಯಕ್ಷ ಎಸ್ ಆರ್ ಹಿರೇಮಠ್, ಸೊಸೈಟಿ ಪಾರ್ ಕಮ್ಯುನಲ್ ಹಾರ್ಮಾನಿಯ ಪ್ರೊ.ಆನಂದ್ ಕುಮಾರ್, ಜನ ಸಂಗ್ರಾಮ ಪರಿಷತ್ತಿನ ರಾಘವೇಂದ್ರ ಕುಷ್ಟಗಿ ಮುಂತಾದವರ ನೇತೃತ್ವದಲ್ಲಿ ಸಂಘಟಿಸಲ್ಪಟ್ಟಿದ್ದ ಈ ಎರಡು ದಿನದ ಕಾರ್ಯಕ್ರಮ ವನ್ನು ನ್ಯಾಯಮೂರ್ತಿ ಹೆಚ್.ಎನ್. ನಾಗಮೋಹನ್ ದಾಸ್ ರವರು ಉದ್ಘಾಟಿಸಿದರು. ವಿವಿಧ ಗೋಷ್ಠಿಗಳಲ್ಲಿ ಪ್ರಸಿದ್ಧ ಆರ್ಥಿಕ ತಜ್ಞ ಟಿ ಆರ್ ಚಂದ್ರಶೇಖರ್, ರಾಜ್ಯ ರೈತ ಸಂಘದ ರಾಜ್ಯ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಪ್ರಾಂತ ರೈತ ಸಂಘದ ರಾಜ್ಯಾಧ್ಯಕ್ಷ ಜಿಸಿ ಬಯ್ಯಾರೆಡ್ಡಿ, ಕಿಸಾನ್ ಸಭಾದ ಅಧ್ಯಕ್ಷ ಡಾ. ಸಿದ್ದನಗೌಡ ಪಾಟೀಲ್, ಡಿ.ಹೆಚ್. ಪೂಜಾರ್, ಕೆ.ವಿ. ಭಟ್, ಹೆಚ್.ವಿ. ದಿವಾಕರ್, ಸುಗತ ಶ್ರೀನಿವಾಸ ರಾಜು, ಬಿ.ಆರ್. ಪಾಟೀಲ್, ಕೆ. ಉಮಾ, ದಸಂಸದ ವಿ. ನಾಗರಾಜ್, ಎನ್. ವೆಂಕಟೇಶ್ ಮುಂತಾದವರು ಭಾಗವಹಿಸಿದ್ದರು.

ವರದಿ: ಟಿ. ಯಶವಂತ್

ಪರಿಹಾರ ಕಾರ್ಯಕ್ಕಿಂತ ಶಾಸಕರ ಕುದುರೆ ವ್ಯಾಪಾರಕ್ಕೆ ಆದ್ಯತೆ....... ಪುಟ 2 ರಿಂದ


ಆಹಾರ ವಿತರಣೆ, ಕುಡಿಯುವ ನೀರು, ಔಷಧಗಳ ಪೂರೈಕೆ ಅಸ್ತವ್ಯಸ್ತಗೊಂಡಿವೆ, ಮತ್ತು ಆರೋಗ್ಯ ಕಾರ್ಯಕರ್ತರು ಕಕ್ಕಾಬಿಕ್ಕಿಯಾಗಿದ್ದಾರೆ. ಪರಿಸ್ಥಿತಿಯ ಅವಲೋಕನ ಮತ್ತು ಅಗತ್ಯ ಪರಿಹಾರ ಮತ್ತು ನೆರವು ಒದಗಿಸಲು ಪ್ರಧಾನಿಯಾಗಲೀ ಅಥವಾ ಯಾವುದೇ ಸಂಪುಟ ಸಚಿವರಾಗಲೀ ಪ್ರವಾಹ ಪೀಡಿತ ರಾಜ್ಯಕ್ಕೆ ಭೇಟಿ ನೀಡಿಲ್ಲ. ಇದು ಅತ್ಯಂತ ನಿರ್ದಯ ವರ್ತನೆ ಎಂದು ಟೀಕಿಸಿರುವ ಸಿಪಿಐ(ಎಂ) ಪೊಲಿಟ್ ಬ್ಯೂರೋ ನೊಂದ ಜನರಿಗೆ ಕೂಡಲೇ ಪರಿಹಾರ ಒದಗಿಸುವಂತೆ ಕರೆ ನೀಡಿದೆ. ಪರಿಹಾರ ಶಿಬಿರಗಳಲ್ಲಿ ಆಹಾರ ಮತ್ತು ಸರಿಯಾದ ಸೌಕರ್ಯಗಳ ವ್ಯವಸ್ಥೆಗಳನ್ನು ಖಚಿತಪಡಿಸಬೇಕು. ವಾಸಸ್ಥಳ, ಆಸ್ತಿ ಕಳೆದುಕೊಂಡಿರುವ ಎಲ್ಲರ ಪುನರ್ವಸತಿಗೆ ರಾಜ್ಯ ಸರಕಾರ ಗಂಭೀರ ಪ್ರಯತ್ನ ನಡೆಸಬೇಕು ಎಂದು ಅದು ಹೇಳಿದೆ.

ಅಸ್ಸಾಂನ ಪರಿಹಾರ ಕಾರ್ಯಗಳಿಗೆ ಸ್ವಯಂಪ್ರೇರಿತವಾಗಿ ನಿಧಿಯನ್ನು ನೀಡುವಂತೆ ಜನತೆಗೆ ಸಿಪಿಐ(ಎಂ) ಪೊಲಿಟ್‌ಬ್ಯುರೊ ಕರೆ ನೀಡಿದೆ. ●

NEW No. MAG(3)/NPP/205/2021-2022
JANASHAKTHI KANNADA VARA PATRIKE JULY 4-10, 2022 Price: Rs. 10/- Date of Publication: 1 JULY 2022 RNI No. KARKAN /2006/17926 Posted on 04-07-2022
"REGISTERD" Postal Reg. No. RNP/KA/BGS/2078/2019-21 Posted at BG PSO, BG - 560026 Licensed to Post without prepayment License No. PMG/BG/WPP-283/2019-21 **Posted at Periodical Rate -** Rs. 2

ಮೀಸಲಾತಿ–ಪುಸ್ತಕ ಬಿಡುಗಡೆ

ಭ್ರಮೆ ಮತ್ತು ವಾಸ್ತವಗಳ ಅವಲೋಕನ



ವರದಿ: ಎನ್. ಪ್ರಭಾ

ಜೂನ್ 26 ರಂದು ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದಲ್ಲಿ, ಜಸ್ಟೀಸ್ ಹೆಚ್.ಎನ್. ನಾಗಮೋಹನ ದಾಸ್ ರಚಿತ "ಮೀಸಲಾತಿ ಭ್ರಮೆ ಮತ್ತು ವಾಸ್ತವ" ಪುಸ್ತಕ ಬಿಡುಗಡೆಗೊಂಡಿತು. ಬಿಡುಗಡೆಗೊಳಿಸಿ ಮಾತನಾಡಿದ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯನವರು "ಚಾತುರ್ವರ್ಣದ ಮೂಲಕ ಬ್ರಾಹ್ಮಣ, ಕ್ಷತ್ರಿಯ, ವೈಶ್ಯರು ಮಾತ್ರ ಓದುವ, ಅಧಿಕಾರ ಅನುಭವಿಸುವ ವ್ಯವಸ್ಥೆ ರೂಪಿಸಿಕೊಂಡಿದ್ದರಲ್ಲ ಅದು ಮೀಸಲಾತಿ ಅಲ್ಲವೆ" ಎಂದು ಪ್ರಶ್ನಿಸಿದರು. ಶತಮಾನಗಳ ಕಾಲ ಅಲಿಖಿತವಾಗಿ ಈ ಸವಲತ್ತನ್ನ ಅನುಭವಿಸಿದವರೇ, ಇಂದು ಮೀಸಲಾತಿ ಏಕೆ? ಎಷ್ಟು ವರ್ಷ ಈ ಮೀಸಲಾತಿ? ಮೀಸಲಾತಿಯಿಂದ ಪ್ರತಿಭೆಗೆ ಅನ್ಯಾಯವಾಗುವುದಿಲ್ಲವೆ? ಮೀಸಲಾತಿ ಎಲ್ಲರಿಗೂ ಏಕಿಲ್ಲ? ಕ್ರೀಮಿ ಲೇಯರ್ (ಕೆನೆ ಪದರ) ಗೇಕೆ ಮೀಸಲಾತಿ? ಮುಂತಾದ ಪ್ರಶ್ನೆಗಳನ್ನು ಎತ್ತುತ್ತಿದ್ದಾರೆ" ಎಂದು ಖಾರವಾಗಿ ಪ್ರತಿಕ್ರಿಯಿಸಿದರು. ನಮ್ಮ ಸಮಾಜದಲ್ಲಿ ಜಾತಿ ವ್ಯವಸ್ಥೆ ಎಲ್ಲಿಯವರೆಗೆ ಇರುವುದೊ ಅಲ್ಲಿಯವರೆಗೆ ಮೀಸಲಾತಿಯು ಇರುವುದು ಎಂದ ಅಂಬೇಡ್ಕರ್ ಅವರ ಮಾತನ್ನು ಉಲ್ಲೇಖಿಸುತ್ತಾ ಮೀಸಲಾತಿ ಸಾಂವಿಧಾನಿಕ ಹಕ್ಕು ಎಂದು ಪ್ರತಿಪಾದಿಸಿದರು.

ಹನ್ನೆರಡನೆಯ ಶತಮಾನದಲ್ಲಿಯೆ ಶರಣರು ಕಾಯಕ–ದಾಸೋಹ ಎನ್ನುವ ಸೂತ್ರವನ್ನು ಜನತೆಯ ಮುಂದಿಡುವ ಮೂಲಕ ಅಲಿಖಿತ ಮೀಸಲಾತಿಯನ್ನು ಅನುಭವಿಸುತ್ತಿದ್ದ ಜನರಿಗೆ ಉತ್ತರ ನೀಡಿದ್ದರು ಎಂದು ವಚನಕಾರರನ್ನು ಉದಾಹರಿಸಿದರು. ಪ್ರತಿಯೊಬ್ಬರು ದುಡಿಯಬೇಕು, ಉಣ್ಣಬೇಕೆಂಬುದೆ ಕಾಯಕ–ದಾಸೋಹದ ಧ್ಯೇಯ ಎಂದ ಸಿದ್ದರಾಮಯ್ಯ ಶಿಕ್ಷಣ, ಅಧಿಕಾರ, ಸಂಪತ್ತು ಎಲ್ಲರಿಗೂ ಸಿಕ್ಕಿದರೆ ಎಲ್ಲರೂ ಪ್ರತಿಭಾವಂತರೆ ಎಂದು ಬಣ್ಣಿಸುತ್ತಾ ಈ ದೇಶ ಕಂಡ ಕೆಲವೇ ಮೇಧಾವಿಗಳಲ್ಲಿ ಅಂಬೇಡ್ಕರ್ ಸಹ ಒಬ್ಬರು ಎಂಬುದನ್ನು ಗಮನಿಸಬೇಕು ಎಂದರು. 4635 ಜಾತಿಗಳು ನಮ್ಮಲ್ಲಿವೆ ಎನ್ನುವ ಅಂಶವನ್ನು ಅವರೇ ಗುರುತಿಸಿದ್ದಾರೆ. ಹಾಗಿದ್ದರೆ, ಈ ಜಾತಿಗಳನ್ನು ಹುಟ್ಟು ಹಾಕಿದವರು ಯಾರು ಎಂದು ಮರಳಿ ಪ್ರಶ್ನೆ ಮಾಡಿದರು. "ಆರ್ಯರು ಮಧ್ಯ ಏಷ್ಯಾದಿಂದ ಬಂದವರು, ನಮ್ಮನ್ನ ದಸ್ಯುಗಳನ್ನಾಗಿಸಿ ದುಡಿಸಿಕೊಂಡರು ಎಂದರೆ ಅವರಿಗೆ ಕೋಪ ಬರುವುದು. ಆದರೆ ಇದು ಸತ್ಯ, ಇದ್ದದ್ದನ್ನ ಇದ್ದಂತೆ ಹೇಳಿದರೆ ಎದ್ದು ಬಂದು ಎದೆಗೆ ಒದ್ದರು ಎನ್ನುವ ಗಾದೆಯಂತಾಗಿದೆ ಇಂದಿನ ನಮ್ಮ ಪರಿಸ್ಥಿತಿ" ಎಂದು ವಿಷಾದಿಸಿದರು. ಇಂತಹ ವಿಷಯಗಳನ್ನ ಮಾತನಾಡುವಾಗ ನನಗೆದುರಾಗಿ ಇಪ್ಪತ್ತು ಜನ ದಾಳಿಗಿಳಿದು ಮಾತನಾಡುತ್ತಾರೆ ಆದರೆ, ಅವರಿಗೆ ಉತ್ತರಿಸುವಾಗ ನನ್ನ ಜೊತೆ ಯಾರೂ ನಿಲ್ಲುವುದಿಲ್ಲ ನಾನು ಒಂಟಿ ಎನ್ನುವ ವಾಸ್ತವ ಸ್ಥಿತಿಯನ್ನು ಸಿದ್ದರಾಮಯ್ಯ ಸಭಿಕರೆದುರು ಬಿಚ್ಚಿಟ್ಟರು.

ಮೀಸಲಾತಿಯ ಕುರಿತಾದ ಕಾಳೇಕರ್ ವರದಿಯನ್ನು ತಿರಸ್ಕರಿಸಿದ ನಂತರ ಮತ್ತೊಂದು ಆಯೋಗಕ್ಕಾಗಿ ಒತ್ತಾಯಿಸದೆ ನಾವು ಮೌನವಾಗಿದ್ದೆವು. ಐವತ್ತೈದು ವರ್ಷಗಳ ನಂತರ 1977 ರಲ್ಲಿ ಮಂಡಲ್ ಆಯೋಗದ ಘೋಷಣೆ ಆಯಿತು, 1980 ರಲ್ಲಿ ಸರ್ಕಾರಕ್ಕೆ ವರದಿ ಸಲ್ಲಿಕೆಯಾಯಿತು. ವಿ.ಪಿ.ಸಿಂಗ್ ಸರ್ಕಾರ ರಚನೆಯಾಗಿ 1990 ರಲ್ಲಿ ಹಿಂದುಳಿದ ಜಾತಿಗಳಿಗೆ ಮೀಸಲಾತಿ ಸಿಗುವಂತಾಯಿತು. ಅಲ್ಲಿಯವರೆಗೂ ನಾವು ಮೌನವಾಗಿಯೇ ಇದ್ದೆವು ಎಂದ ಸಿದ್ದು ಅದನ್ನೂ ಅವರು ವಿರೋಧ ಮಾಡಿದರು, ಸಾಲದ್ದಕ್ಕೆ ಹಿಂದುಳಿದ ವರ್ಗಗಳ ಜನರನ್ನೆ ಮೀಸಲಾತಿಗೆದುರಾಗಿ ಬೀದಿಗಿಳಿಸಿದರು ಆಗಲು ನಾವು ಸುಮ್ಮನಿದ್ದೆವು, ಮುಂದುವರೆದು ಈಗಲೂ ಮೀಸಲಾತಿ ಏಕೆ ಎನ್ನುವ ಪ್ರಶ್ನೆ ಅದೆ ಜನರಿಂದಲೆ ಕೇಳಿ ಬರುತ್ತಿದೆ, ಇದು ಯೋಗ್ಯ ನಡೆಯೆ ಎಂದು ಅಭಿಪ್ರಾಯ ವ್ಯಕ್ತಪಡಿಸಿದರು. 1918 ರಲ್ಲಿ ಮಿಲ್ಲರ್ ಆಯೋಗ ವರದಿ ಸಲ್ಲಿಸಿತು, ವಿರೋಧ ಮಾಡಿದವರು ಯಾರು ಎಂದ ಅವರ ಪ್ರಶ್ನೆಗೆ ಸಭಿಕರಿಂದ ಸರ್.ಎಂ.ವಿಶ್ವೇಶ್ವರಯ್ಯ ಎನ್ನುವ ಉತ್ತರವೂ ಎದುರಾಯಿತು. ಇವನಾರವ, ಇವನಾರವ ಎಂದೆಣಿಸದಿರಯ್ಯಾ ಇವ ನಮ್ಮವ ಇವ ನಮ್ಮವ ಎಂದೆಣಿಸಯ್ಯ ಎಂದು ವಚನ ವಾಚಿಸಿ ಪಕ್ಕದಲ್ಲಿರುವವನನ್ನ ಹತ್ತಿರ ಕರೆದು ನೀನು ಯಾವ ಜಾತಿ ಎಂದು ಕೇಳುವ ಮನಸ್ಥಿತಿ ನಮ್ಮದು ಎಂದು ವ್ಯಂಗ್ಯವಾಡಿದರು. ನಮ್ಮ ಹಿಂದುಳಿದ ಸಮುದಾಯಗಳ ಜನರಲ್ಲಿ ಮನೆ ಮಾಡಿರುವ ಗುಲಾಮಗಿರಿ ಮನಸ್ಥಿತಿ ಇಂದಿಗೂ ಜೀವಂತವಾಗಿರುವ ಕುರಿತು ಜಿಗುಪ್ಸೆ ವ್ಯಕ್ತಪಡಿಸಿದರು. ನಮ್ಮ ಸಮಾಜ ಜಡಗಟ್ಟಿದೆ, ಇದು ಚಲನಶೀಲವಾಗಬೇಕಾದರೆ ಸಾಮಾಜಿಕ, ಆರ್ಥಿಕ ಸಮಾನತೆಯನ್ನು ಸಾಧಿಸಬೇಕು ಬೇರೆ ದಾರಿಗಳಿಲ್ಲ ಎಂದು ನುಡಿಯುತ್ತ ಖಾಸಗೀಕರಣವು ಮೀಸಲಾತಿಯನ್ನು ಮತ್ತಷ್ಟು ದುರ್ಬಲಗೊಳಿಸುತ್ತಿದ್ದು ಗುತ್ತಿಗೆ, ಹೊರ ಗುತ್ತಿಗೆ ನೇಮಕಾತಿಗಳು ಮಿಸಲಾತಿ ನಿಯಮಗಳನ್ನು ಪಾಲಿಸುತ್ತಿಲ್ಲವೆಂದರು. ಸರಿ ಸುಮಾರು 60 ಲಕ್ಷ ಸರ್ಕಾರಿ ಹುದ್ದೆಗಳು ಖಾಲಿ ಇದ್ದು ಇವುಗಳ ಭರ್ತಿಗೆ ಗಮನ ನೀಡಬೇಕಾದ ಸರ್ಕಾರ ಮೇಲ್ಜಾತಿಗಳ ಬಡವರಿಗೆ 10% ಮೀಸಲಾತಿಯನ್ನು ಘೋಷಿಸುವಲ್ಲಿ ತನ್ನ ಆತುರ ತೋರಿಸಿದೆ, ಅದರೆ ಇದು ಅಸಂವಿಧಾನಿಕ ನಡೆಯೆಂದು ಟೀಕಿಸಿದರು. ಮೀಸಲಾತಿಯ ಕುರಿತಾದ ಹಿನ್ನೆಲೆ, ವಿದ್ಯಮಾನಗಳನ್ನು ಎಲ್ಲರು ಅರಿಯಬೇಕು ಆದರೆ ಈ ಕುರಿತ ಸ್ಪಷ್ಟತೆ ನಮ್ಮ ವಿದ್ಯಾವಂತರಲ್ಲೆ ಇಲ್ಲ, ಕನಿಷ್ಟ ಸಂವಿಧಾನದ ಪೀಠಿಕೆಯನ್ನಾದರೂ ವಿದ್ಯಾವಂತರು ಓದಿಕೊಳ್ಳಬೇಕೆಂದು ಆಶಿಸುತ್ತಾ ಮೀಸಲಾತಿ ಭ್ರಮೆ ಮತ್ತು ವಾಸ್ತವ ಪುಸ್ತಕ ರಚಿಸಿದ ಜಸ್ಟೀಸ್ ನಾಗಮೋಹನ ದಾಸ್ ಅವರನು ಅವರ ಸಕಾಲಿಕ ಕೃತಿಗಾಗಿ ಶ್ಲಾಘಿಸಿದರು. ಅವರೇ ರಚಿಸಿದ ಸಂವಿಧಾನ ಓದು ಮತ್ತು ಸಂವಿಧಾನ ಓದಿನ ಅಭಿಯಾನ ಎರಡರ ಕುರಿತಾಗಿಯೂ ಪ್ರಸ್ತಾಪಿಸಿ ನ್ಯಾಯಮೂರ್ತಿಗಳಿಗೆ ತಮ್ಮ ಅಭಿನಂದನೆಗಳನ್ನು ಸಲ್ಲಿಸಿದರು.

ಪುಸ್ತಕದ ಕುರಿತು ಮಾತನಾಡಿದ ಬಂಜಗೆರೆ ಜಯಪ್ರಕಾಶ್, ಜಸ್ಟೀಸ್ ದಾಸ್ ಅವರು ಗಾತ್ರದಲ್ಲಿ ಚಿಕ್ಕ ಪುಸ್ತಕಗಳನ್ನು ರಚಿಸುವವರಾದರು ಪರಿಣಾಮದಲ್ಲಿ ಅವು ಅಗಾಧವಾದ ಪಾತ್ರವನ್ನು ನಿರ್ವಹಿಸುತ್ತವೆ ಎಂದರು. ಒಮ್ಮೆ, ಕೆ.ಆರ್. ನಾರಾಯಣನ್ ಹೇಳಿದಂತೆ 'ನಾವಿಂದು ಪ್ರತಿಕ್ರಾಂತಿಯ ಘಟ್ಟದಲ್ಲಿದ್ದೇವೆ, ದೇಶ ಮೀಸಲಾತಿಯ ಕಾರಣಕ್ಕೇ ಹಿಂದುಳಿದಿದೆ ಎನ್ನುವ ವ್ಯವಸ್ಥಿತ ಪ್ರಚಾರದ ಕಾಲಘಟ್ಟದಲ್ಲಿದ್ದೇವೆ, ಮೀಸಲಾತಿಯ ಬಗೆಗೆ ಮತ್ಸರ ಹುಟ್ಟಿಸುತ್ತಿರುವ ಕಾರಣಗಳಿಗೆ ಉತ್ತರವಾಗಿ ಈ ಪುಸ್ತಕ ಹೊರ ಬಂದಿದೆ' ಎಂದರು. ಈ ಹಿಂದೆ ಇವರ ಸಂವಿಧಾನ ಕೃತಿಯನ್ನು ಬಿಡುಗಡೆಗೊಳಿಸಿದ್ದು ನನ್ನ ಬದುಕಿನ ಸಾರ್ಥಕ ಕ್ಷಣ ಎಂದು ಭಾವಿಸಿರುವೆ ಎನ್ನುತ್ತಾ, ದನಗಳನ್ನು ಮೇಯಿಸುತ್ತಿದ್ದ ನಾನು ಪುಸ್ತಕ ಪ್ರಾಧಿಕಾರದ ಅಧ್ಯಕ್ಷನಾಗುವ ಹಂತಕ್ಕೆ ಬಂದೆ, ಇದನ್ನು ಸಾಧ್ಯವಾಗಿಸಿದ್ದು ಸಂವಿಧಾನ ಎಂದು ಬಣ್ಣಿಸಿದರು. ಜನರಿಗೆ ಸ್ವಾಭಿಮಾನದ ಬದುಕನ್ನು ಕೊಟ್ಟಿದ್ದು, ಭಾರತದ ಬದುಕನ್ನ ಬದಲಿಸಿದ್ದು ಸಂವಿಧಾನ ಎಂದರು. ಇಂತಹ ಸಂವಿಧಾನವನ್ನು ಸಾಮಾನ್ಯ ಓದುಗರಿಗೆ ತಲುಪಿಸಿದ, ಸಮಾಜದ ಕಣ್ತೆರೆಸಲು ಮುಂದಾದ ಇವರು ಸಾರ್ಥಕ ಲೇಖಕರು, ಎಂದು ದಾಸ್ ಅವರನ್ನು ಬಂಜಗೆರೆ ಶ್ಲಾಘಿದರು. ತೀಸ್ತಾ ಸೆಟಲ್ವಾಡರ ಬಂಧನವಾಗಿದೆ, ಎಲ್ಲರೂ ಈ ಘಟನೆಯನ್ನು ಪುಟ 14 ಕ್ಕೆ



ನೂರಾರು ಕನಸು ಕಟ್ಟಿಕೊಂಡವ ವೇಣು



ಮತ್ತೊಂದು ಆಘಾತಕಾರಿ ಸುದ್ದಿ ಇಂದು(ಜೂನ್ 24) ಸಂಜೆ ಸಿಡಿಲಿನಂತೆ ನಮ್ಮೆಲ್ಲ ಸಮುದಾಯದ ಸ್ನೇಹಿತರಿಗೆ ಬಂದೆರಗಿದೆ.... ಸಂಜೆ 6.30ರ ಸುಮಾರಿಗೆ ತೀವ್ರ ಹೃದಯಾಘಾತದಿಂದ ನಮ್ಮೆಲ್ಲರ ಆತ್ಮೀಯ ಗೆಳೆಯ ಹೆಚ್.ವಿ.ವೇಣುಗೋಪಾಲ್ ನಿಧನರಾಗಿದ್ದಾರೆ ಎನ್ನುವ ಸುದ್ದಿ ಬಂತು.

ವೇಣು ಅವರು ಗೌರಿಬಿದನೂರು ಎಇಎಸ್ ನ್ಯಾಷನಲ್ ಕಾಲೇಜಿನಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿ ಕೆಲಸ ಮಾಡುತ್ತಿದ್ದರು. ಬಿ.ಗಂಗಾಧರಮೂರ್ತಿ, ನಗರಗೆರೆ ರಮೇಶ, ರಂಗಾರೆಡ್ಡಿ ಕೋಡಿರಾಮಪುರ ಮತ್ತು ಅಶ್ವಥನಾರಾಯಣ ಇವರೆಲ್ಲರೂ ವೇಣೂ ಜೊತೆ ಗೌರಿಬಿದನೂರಿನ ನ್ಯಾಷನಲ್ ಕಾಲೇಜಿನ ಆತ್ಮೀಯ ಸಹೋದ್ಯೋಗಿಗಳು. ಇವರೆಲ್ಲರೂ ಒಟ್ಟಾಗಿ ಗೌರಿಬಿದನೂರಿನ ಸಮುದಾಯ ಘಟಕವನ್ನು ಪ್ರಾರಂಭಿಸಿ, ಸಕ್ರಿಯವಾದ ಚಟುವಟಿಕೆಗಳನ್ನು ಮಾಡಲು ಸಹಕರಿಸಿದವರು.

ಗಂಗಾಧರ ಮೂರ್ತಿ ಸಮುದಾಯ ವಾರ್ತಾಪತ್ರದ ಸಂಪಾದಕರಾದಾಗ, ಇವರೆಲ್ಲರೂ ವಾರ್ತಾಪತ್ರಕ್ಕೆ ಲೇಖನಗಳನ್ನು ಬರೆದು, ಪ್ರತಿ ತಿಂಗಳೂ ವಾರ್ತಾಪತ್ರ ಸರಿಯಾದ ಸಮಯಕ್ಕೆ ಬರುವ ಹಾಗೆ ನೋಡಿಕೊಂಡಿದ್ದರು. ವೇಣು ಆಗಾಗ್ಗೆ ವಾರ್ತಾಪತ್ರಕ್ಕೆ ಚಂದದ ಮುಖಪುಟ ವಿನ್ಯಾಸವನ್ನೂ ಮಾಡಿಕೊಡುತ್ತಿದ್ದರು. ಕೆಲವು ವರುಷಗಳ ನಂತರ ವೇಣೂ, ವಾರ್ತಾಪತ್ರದ ಸಂಪಾದಕರಾದರು. ನೂರಾರು ಕನಸುಗಳನ್ನು ಇಟ್ಟುಕೊಂಡಿದ್ದ ವೇಣೂವಿಗೆ, ಅವಸಾನದ ಸ್ಥಿತಿಯಲ್ಲಿದ್ದ ವಾರ್ತಾಪತ್ರಕ್ಕೆ ಜೀವ ತುಂಬಲು ಸಾಧ್ಯವಾಗಲಿಲ್ಲ.... ಇದರ ಬಗ್ಗೆ ಅವರು ಸಾಕಷ್ಟು ವರುಷ, ಬಹುಶಃ ಈಗಲೂ ಅವರ ಮನಸ್ಸಿನಲ್ಲಿ ನೋವು, ದುಖಃ ಇರಬಹುದು ಅನ್ನಿಸುತ್ತೆ.

ವೇಣೂ, ಗೌರಿಬಿದನೂರಿನಿಂದ ಬೆಂಗಳೂರಿನ ಬಸವನಗುಡಿ ನ್ಯಾಷನಲ್ ಕಾಲೇಜಿಗೆ ವರ್ಗಾವಣೆಯಾಗಿ ಬಂದ ಮೇಲೆ, ತುಂಬಾ ದೊಡ್ಡ ಮಟ್ಟದಲ್ಲಿ ರಂಗ ಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ನ್ಯಾಷನಲ್ ಕಾಲೇಜಿನ ಒಳಗೆ ಅಂತರ ತರಗತಿ ನಾಟಕ ಸ್ಪರ್ಧೆಗಳಲ್ಲಿ ಬಹಳ ಉತ್ತಮ ಮತ್ತು ಗಂಭೀರ ನಾಟಕಗಳನ್ನು ತಮ್ಮ ರಂಗಾಸಕ್ತ ವಿದ್ಯಾರ್ಥಿಗಳಿಗೆ ಸೂಚಿಸಿ, ಪ್ರಯೋಗಕ್ಕೆ ಮಾರ್ಗದರ್ಶನ ನೀಡುತ್ತಿದ್ದರು. – ಭಾರತ ಯಾತ್ರಾ ಕೇಂದ್ರದ ಆಯೋಜನೆಯಲ್ಲಿ ನಡೆಯುತ್ತಿದ್ದ ಜ್ಞಾನಭಾರತಿ ಅಂತರ ಕಾಲೇಜು ವಾರ್ಷಿಕ ನಾಟಕೋತ್ಸವ ಸ್ಪರ್ಧೆಗಳಲ್ಲಿ ಅಪಾರ ಆಸಕ್ತಿ ವಹಿಸಿ, ನಾಟಕ ಮತ್ತು ನೇಪಥ್ಯದ ಹಲವು ಪ್ರಕಾರಗಳಲ್ಲಿ ಅತ್ಯುತ್ತಮ ಪ್ರಶಸ್ತಿಗಳು ತಮ್ಮ ಕಾಲೇಜಿಗೆ ಬರುವ ಹಾಗೆ ಶ್ರಮ ವಹಿಸುತ್ತಿದ್ದರು.

ಥಿಯೇಟರ್ ಕ್ಲಬ್ ನ ಮುಖ್ಯಸ್ಥರಾದರು. ಡಾ. ಹೆಚ್.ನರಸಿಂಹಯ್ಯ. ಅವರ ನಂಬುಗೆಯ ಮೇಷ್ಟ್ರಾಗಿ ಸೇವೇ ಸಲ್ಲಿಸಿದರು. ವೇಣೂ ಮತ್ತು ಮೌಳೇಶ್ ಸರ್ ಅವರು ಕಾಲೇಜಿನ ಉನ್ನತಿಗಾಗಿ ಸಂಪೂರ್ಣವಾಗಿ ಸಮರ್ಪಣಾ ಭಾವದಿಂದು ಸಮಯದ ಮಿತಿಯಿಲ್ಲದೆ ದುಡಿಯುತ್ತಿದ್ದರು. ನ್ಯಾಕ್ ಸಂಸ್ಥೆಯ ಗುಣಮಟ್ಟದ ಶ್ರೇಣಿಕರಣದಲ್ಲಿ ತಮ್ಮ ಕಾಲೇಜಿಗೆ ಅತಿ ಹೆಚ್ಚಿನ ಗ್ರೇಡಿಂಗ್ ಬರಲು ನಿರಂತರ ಶ್ರಮಿಸುತ್ತಿದ್ದರು.

ಬೆಂಗಳೂರಿಗೆ ಬಂದ ಮೇಲೆ ತಾವು ಓದಿದ ಉತ್ತಮ ನಾಟಕಗಳ ಅನುವಾದವನ್ನು ಕನ್ನಡದಲ್ಲಿ ಮಾಡಲು ಪ್ರಾರಂಭಿಸಿದರು. ಅವರು ಅನುವಾದಿಸಿದ ಮೂರು ನಾಟಕಗಳನ್ನು 'ಬೆಂಗಳೂರು ಸಮುದಾಯ' ಪ್ರಯೋಗ ಮಾಡಿದೆ. ಆರ್.ಕೆ.ನಾರಾಯಣ್ ಅವರ ಇಂಗ್ಲೀಷ್ ಕಥೆಯ ಆಧಾರದ ನಾಟಕ 'ಕುಂಡಲಿ ಮಹಾತ್ಮೆ' ಬೀದಿ ನಾಟಕವಾಗಿ ಪ್ರಯೋಗವಾಯಿತು. ಇಬ್ಸನ್ನನ 'ಎನಮಿ ಆಫ್ ದ ಪೀಪಲ್' ನಾಟಕ 'ಸುತ್ತಿಕೊಂಡರೆ ಸರ್ಪ' ಮತ್ತು ರಾಜಸ್ಥಾನಿ ಜಾನಪದ ಕಥೆಯ ಆಧಾರಿತ ಹಿಂದಿ ನಾಟಕ ಕನ್ನಡದಲ್ಲಿ 'ನಮೋ ವೆಂಕಟೇಶ', ಪ್ರಸ್ತುತ ಸಾಮಾಜಿಕ–ರಾಜಕೀಯ ನಾಟಕವಾಗಿ ರಂಗ ನಾಟಕವಾಗಿ ಪ್ರಯೋಗವಾಯಿತು. ಬಹಳ ವರುಷಗಳ ಹಿಂದೆ ಇವರು ಅನುವಾದಿಸಿದ 'ಕಕೇಷಿಯನ್ ಚಾಕ್ ಸರ್ಕಲ್' ಕನ್ನಡದಲ್ಲಿ ಅನುವಾದಗೊಂಡು ಮಕ್ಕಳ ರಂಗ ಶಿಬಿರದ ನಾಟಕವಾಗಿ ಪ್ರಯೋಗವಾಯಿತು. ಹಲವು ನಾಟಕಗಳಿಗೆ ಇವರ ರಚಿಸಿದ ಸಾಹಿತ್ಯದ ರಂಗ ಗೀತೆಗಳು ಪ್ರಸ್ತುತವಾಗಿವೆ. ಪುಟ 14 ಕ್ಕೆ

JANASHAKTHI KANNADA VARA PATRIKE: Printed, Published by **U. BASAVARAJ**, No. 37/a, 8th Cross, EMS Bhavan, Mahalakshmi Layout, Bangalore 560086, Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027 Editor : **NITYANANDASWAMI**